

ಕರ್ನಾಟಕ ಸ್ಕೌಟ್ ಮತ್ತು ಗೈಡ್

ಮಾಸ ಪತ್ರಿಕೆ

Karnataka Scout & Guide

Monthly Magazine

Vol -67 | Issue-12 | Dec 2025 - Jan 2026 | Pages: 48 | Annual Subscription: ₹ 200/-

ಸಂಪುಟ: 67 | ಸಂಚಿಕೆ: 12 | ಡಿಸೆಂಬರ್25–ಜನವರಿ–26 | ಪುಟಗಳು: 48 | ವಾರ್ಷಿಕ ಚಂದ ರೂ. 200/–



26 ಡಿಸೆಂಬರ್ 2025 ರಿಂದ 1 ಜನವರಿ 2026 ರವರೆಗೆ ಬೆಳಗಾವಿಯಲ್ಲಿ ನಡೆದ ರಾಜ್ಯಮಟ್ಟದ 29ನೇ ಜಾಂಬೋರೇಟ್‌ನಲ್ಲಿ ಭಾಗವಹಿಸಿದ ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್ ಮತ್ತು ದಳನಾಯಕರುಗಳ ವಿಹಂಗಮ ನೋಟ



ದಿನಾಂಕ:27.12.2025 ರಂದು ಬೆಳಗಾವಿಯಲ್ಲಿ ನಡೆದ 29ನೇ ರಾಜ್ಯ ಜಾಂಬೋರೇಟ್ ಉದ್ಘಾಟನಾ ಸಮಾರಂಭದಲ್ಲಿ "ಜಾಂಬೋರೇಟ್ ವೇವ್ಸ್ ದಿನಪತ್ರಿಕೆ, ಜಾಂಬೋರೇಟ್ ಮಾಹಿತಿ ಕೈಪಿಡಿ, ಜಾಂಬೋರೇಟ್ ಬ್ಯಾಡ್ಜ್‌ನ್ನು" ಮಾನ್ಯ ವಿಧಾನ ಪರಿಷತ್ ಸಭಾಪತಿಗಳಾದ ಶ್ರೀ ಬಸವರಾಜ್ ಎಸ್ ಹೊರಟ್ಟಿ, ಮಾನ್ಯ ವಿಧಾನಸಭೆ ಸಭಾಧ್ಯಕ್ಷರಾದ ಶ್ರೀ ಯು.ಟಿ.ಖಾದರ್, ಮಾನ್ಯ ಲೋಕೋಪಯೋಗಿ ಸಚಿವರು ಮತ್ತು ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಸತೀಶ್ ಲ. ಜಾರಕಿಹೊಳಿ, ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸಚಿವರಾದ ಶ್ರೀ ಮಧು ಬಂಗಾರಪ್ಪ ಮತ್ತು ಮಾನ್ಯ ರಾಷ್ಟ್ರೀಯ ಮುಖ್ಯ ಆಯುಕ್ತರಾದ ಶ್ರೀ ಕೆ.ಕೆ.ಖಂಡೇಲ್ ವಾಲ್, ರಾಜ್ಯ ಮುಖ್ಯ ಆಯುಕ್ತರು ಮತ್ತು ಮಾಜಿ ಸಚಿವರಾದ ಮಾನ್ಯ ಶ್ರೀ ಪಿ.ಜಿ.ಆರ್.ಸಿಂಧ್ಯ, ಶ್ರೀ ಶ್ರೀ ಶ್ರೀ ಶಿವಸಿದ್ದ ಸೋಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು, ಮುಕ್ತಿಮಠ, ಹೊನಗಾ, ಬೆಳಗಾವಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಾದ ಮಾನ್ಯ ಶ್ರೀ ರಾಹುಲ್ ಶಿಂಧೆ, ಮಾನ್ಯ ಶಾಸಕರಾದ ಶ್ರೀ ಅಸಿಫ್ ಶೇಠ್, ರಾಜ್ಯ ಸಂಸ್ಥೆ ಉಪಾಧ್ಯಕ್ಷರಾದ ಶ್ರೀ ಕೊಂಡಜ್ಜಿ ಬ ಷಣ್ಮುಖಪ್ಪ, ರಾಜ್ಯ ಆಯುಕ್ತರುಗಳಾದ ಶ್ರೀ ಎಂ.ಎ.ಖಾಲೀದ್, ಶ್ರೀಮತಿ ಗೀತನಟರಾಜ್, ಶ್ರೀ ಸಿ.ಎಸ್.ರೆಡ್ಡಿ, ರಾಜ್ಯ ಕೋಶಾಧಿಕಾರಿ ಶ್ರೀ ಟಿ.ಪ್ರಭಾಕರ್, ರಾಜ್ಯ ಕಾರ್ಯದರ್ಶಿ ಶ್ರೀ ಕೆ.ಗಂಗಪ್ಪಗೌಡ, ಜಾಂಬೋರೇಟ್ ಪ್ರಧಾನ ಕಾರ್ಯದರ್ಶಿಗಳು ಹಾಗೂ ಬೆಳಗಾವಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಗಜಾನನ ಮನ್ನಿಕೇರಿ ಉಪಸ್ಥಿತರಿದ್ದರು.



20 ಜನವರಿ 2026 ರಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಕೇಂದ್ರ ಕಛೇರಿಯ "ಕೊಂಡಜ್ಜಿ ಬಸಪ್ಪ ಭವನ"ದಲ್ಲಿ ನಡೆದ "ಸಮಾಜವಾದಿ ಅಧ್ಯಯನ ಕೇಂದ್ರ ಮತ್ತು ಸಮಾಜವಾದಿ ಸಮಾಗಮ" ಕಾರ್ಯಕ್ರಮವನ್ನು ಉದ್ಘಾಟಿಸಲು ಆಗಮಿಸಿದ ಕರ್ನಾಟಕದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯ ಅವರನ್ನು ರಾಜ್ಯ ಸಂಸ್ಥೆಯಿಂದ ಪುಷ್ಪಗುಚ್ಛ ನೀಡಿ ಸ್ವಾಗತಿಸಲಾಯಿತು. ಈ ಸಂದರ್ಭದಲ್ಲಿ ಮಾನ್ಯ ಶಾಸಕರಾದ ಶ್ರೀಜಿ.ಆರ್.ಪಾಟೀಲ್, ರಾಜ್ಯ ಸಹಾಯಕ ಆಯುಕ್ತರು ಹಾಗೂ ಮಾಜಿ ವಿಧಾನ ಪರಿಷತ್ ಸದಸ್ಯರಾದ ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ, ಸಹಾಯಕ ಕಾರ್ಯದರ್ಶಿ ಶ್ರೀ ಎಲ್.ಟಿ. ಲೋಕೇಶ್, ಪಿ.ಆರ್.ಓ. ಶ್ರೀ ಕೆ.ಹೆಚ್. ಜಯರಾಮಯ್ಯ ಉಪಸ್ಥಿತರಿದ್ದರು.



ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ 29ನೇ ರಾಜ್ಯ ಜಾಂಬೋರೇಟ್‌ನ "ವಿಶೇಷ ಅಂಚೆ ಲಕೋಟೆಯನ್ನು" ಅಂಚೆ ಇಲಾಖೆಯ ಅಧಿಕಾರಿಗಳಾದ ಶ್ರೀ ಬಸವರಾಜ್ ವಾಲಿಕಾರ್ ಐ.ಪಿ.ಓ.ಎಸ್, ಹಿರಿಯ ಅಧೀಕ್ಷಕರು, ಬೆಳಗಾವಿ ಅಂಚೆ ಕಛೇರಿ, ಶ್ರೀ ಬಸವಂತಮಳಗಿ, ಸಹಾಯಕ ಅಧೀಕ್ಷಕರು, ಬೆಳಗಾವಿ ಉತ್ತರ ವಿಭಾಗ ಅಂಚೆ ಕಛೇರಿ, ಶ್ರೀ ಲಕ್ಷ್ಮಣ್ಣ ಜವದಿಮನಿ,ಪೋಸ್ಟ್ ಮಾಸ್ಟರ್, ಮುಖ್ಯ ಅಂಚೆ ಕಛೇರಿ, ಶ್ರೀ ಶ್ರೀನಿವಾಸ್ ಚವ್ಹಾನ್ ಮತ್ತು ರಾಜ್ಯ ಸಂಸ್ಥೆ ಉಪಾಧ್ಯಕ್ಷರಾದ ಶ್ರೀ ಕೊಂಡಜ್ಜಿ ಬ ಷಣ್ಮುಖಪ್ಪ ರವರು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ರಾಜ್ಯ ಸಂಸ್ಥೆ ಉಪಾಧ್ಯಕ್ಷರು ಹಾಗೂ 29ನೇ ರಾಜ್ಯ ಜಾಂಬೋರೇಟ್ ಪ್ರಧಾನ ಕಾರ್ಯದರ್ಶಿ ಶ್ರೀ ಗಜಾನನ ಬ ಮನ್ನಿಕೇರಿ, ರಾಜ್ಯ ಆಯುಕ್ತರುಗಳಾದ ಶ್ರೀಎಂ.ಎ.ಖಾಲೀದ್,

ಶ್ರೀಮತಿ ಗೀತಾನಟರಾಜ್, ಶ್ರೀ ಚಿನ್ನಸ್ವಾಮಿರೆಡ್ಡಿ, ರಾಜ್ಯ ಕೋಶಾಧಿಕಾರಿ ಶ್ರೀ ಟಿ.ಪ್ರಭಾಕರ್ ಹಾಗೂ ಅಂಚೆ ಇಲಾಖೆಯ ಅಧಿಕಾರಿಗಳು ಮತ್ತು ಸ್ಕೌಟ್ಸ್ - ಗೈಡ್ಸ್‌ಗಳು ಉಪಸ್ಥಿತರಿದ್ದರು.

ಪೋಷಕರು

ಪಿ.ಜಿ.ಆರ್. ಸಿಂಧ್ಯ

ಗೌರವ ಅಧ್ಯಕ್ಷರು

ಡಾ. ಗೊ.ರು. ಚನ್ನಬಸಪ್ಪ

ಅಧ್ಯಕ್ಷರು

ಕೊಂಡಜ್ಜಿ ಬ. ಷಣ್ಮುಖಪ್ಪ

ಉಪಾಧ್ಯಕ್ಷರು

ಡಾ. ಎಂ.ಕೆ. ಶ್ರೀಧರ್

ಸಂಪಾದಕರು

ಕೆ. ಗಂಗಪ್ಪಗೌಡ

ಸಹಸಂಪಾದಕರು

ಎನ್. ಶ್ರೀನಿವಾಸನ್

ಸದಸ್ಯರು

ಮೋಹನ್ ಕೊಂಡಜ್ಜಿ
ಸಿ.ಪಿ. ಪರಮೇಶ್ವರ
ಎಂ.ಎನ್. ಷಡಕ್ಷರಿ
ಸಿ.ವಿ. ತಿರುಮಲರಾವ್
ಡಾ. ಮುಕ್ತಾ ಬಿ. ಕಾಗಲಿ

ಸಂಚಿಕೆಯ ವಾರ್ಷಿಕ ಚಂದಾ ರೂ. 200/–
ವಿದ್ಯಾಸಂಸ್ಥೆ ಹಾಗೂ ಸಂಘ–ಸಂಸ್ಥೆಗಳಿಗೆ
ವಾರ್ಷಿಕ ಚಂದಾ ರೂ. 200/–

ಚಂದಾಹಣವನ್ನು
ಸಂಪಾದಕರು, ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಪತ್ರಿಕೆ
ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ
#39, ಅರಮನೆ ರಸ್ತೆ, ಬೆಂಗಳೂರು – 560 001
ಇಲ್ಲಿಗೆ ಕಳುಹಿಸಲು ಕೋರಿದೆ.

ಕರ್ನಾಟಕ ಸ್ಕೌಟ್ ಮತ್ತು ಗೈಡ್

ಮಾಸಿಕ ವಾರ್ತಾಪತ್ರಿಕೆ

KARNATAKA Scout & Guide

MONTHLY NEWS MAGAZINE

Vol: 67 Issue: 12 Dec-2025, Jan-2026

ಒಳಪುಟಗಳಲ್ಲಿ...

ರಾಜ್ಯ ಮುಖ್ಯ ಆಯುಕ್ತರ ನುಡಿ ...04
ಫೆಬ್ರವರಿ 2026ರ ಮಾಹೆಯ ಕಾರ್ಯಕ್ರಮ ಮತ್ತು ಚಟುವಟಿಕೆಗಳು ...06
ಸಂಪಾದಕೀಯ ...07
29ನೇ ಕರ್ನಾಟಕ ರಾಜ್ಯ ಜಾಂಬೋರೇಟ್ ವರದಿ ...08
107ನೇ ರಾಜ್ಯ ಪರಿಷತ್ ಮಹಾಸಭೆ ...25
ರಾಜ್ಯ ಮಟ್ಟದ ವೃಕ್ಷಮಣಿಧಾರಕರ ಸಮಾವೇಶ ...29
19ನೇ ರಾಷ್ಟ್ರೀಯ ಜಾಂಬೂರಿ (ಲಕ್ನೋ, ಉತ್ತರ ಪ್ರದೇಶ) ...31
ರಾಜ್ಯ ಮಟ್ಟದ ಗೀತಗಾಯನ ಸ್ಪರ್ಧೆ ...33
ಜಿಲ್ಲಾ ವಾರ್ತೆಗಳು ...35
ಶ್ರದ್ಧಾಂಜಲಿ ...45

ಓದುಗರ ಗಮನಕ್ಕೆ

ಸಹೃದಯ ಓದುಗರೇ,

ಸ್ಕೌಟ್ಸ್ ಮತ್ತು ಗೈಡ್ಸ್ ಸಾಹಿತ್ಯ ಪುಸ್ತಕಗಳನ್ನು ಓದಲು ಕೆಳಗಿನ Q.R. Code ಹಾಗೂ ಲಿಂಕ್‌ನ್ನು ಉಪಯೋಗಿಸಿ

https://archive.org/details/ServantsOfKnowledge?tab=collection&query=sng.*&sort=-addeddate

– ಸಂಪಾದಕರು



ರಾಜ್ಯ ಮುಖ್ಯ ಆಯುಕ್ತರ ನುಡಿ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯ ಸಮಸ್ತ ಬಂಧುಗಳಿಗೆ ಹಾಗೂ ನಮ್ಮ ಹೆಮ್ಮೆಯ ಕಬ್ಸ್–ಬುಲ್ ಬುಲ್ಸ್, ಸ್ಕೌಟ್ಸ್–ಗೈಡ್ಸ್ ಮತ್ತು ರೋವರ್ಸ್–ರೇಂಜರ್ಸ್‌ಗಳಿಗೆ ಹೊಸ ವರ್ಷದ ಹಾರ್ದಿಕ ಶುಭಾಶಯಗಳು.

2026ನೇ ವರ್ಷವು ಪ್ರತಿಯೊಬ್ಬರ ಬದುಕಿನಲ್ಲಿ ಉತ್ತಮ ಆರೋಗ್ಯ, ನವ ಉತ್ಸಾಹ, ದೃಢ ಸಂಕಲ್ಪ ಹಾಗೂ ನಿಸ್ವಾರ್ಥ ಸೇವಾಭಾವವನ್ನು ತುಂಬಲಿ. ಶಿಸ್ತು, ಸೇವೆ ಮತ್ತು ಸಹೋದರತ್ವದ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡು, ಸಮಾಜ ಹಾಗೂ ರಾಷ್ಟ್ರ ನಿರ್ಮಾಣದಲ್ಲಿ ಇನ್ನಷ್ಟು ಸಕ್ರಿಯ ಹಾಗೂ ಪರಿಣಾಮಕಾರಿ ಪಾತ್ರ ವಹಿಸುವ ಶಕ್ತಿಯನ್ನು ಈ ವರ್ಷ ನೀಡಲಿ. ನಮ್ಮೆಲ್ಲರ ಸಮರ್ಪಣೆ, ಶ್ರಮ ಮತ್ತು ಬದ್ಧತೆಯ ಫಲವಾಗಿ ನಮ್ಮ ಸಂಸ್ಥೆ ದಿನದಿಂದ ದಿನಕ್ಕೆ ಇನ್ನಷ್ಟು ಬಲವಾಗಿ, ವ್ಯಾಪಕವಾಗಿ ಹಾಗೂ ಅರ್ಥಪೂರ್ಣವಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

ಕಳೆದ ಡಿಸೆಂಬರ್ ತಿಂಗಳಲ್ಲಿ ಬೆಳಗಾವಿಯಲ್ಲಿ ಆಯೋಜಿಸಲ್ಪಟ್ಟ **29ನೇ ರಾಜ್ಯ ಮಟ್ಟದ ಸ್ಕೌಟ್ ಮತ್ತು ಗೈಡ್ ಜಾಂಬೋರೇಟ್ ಅತ್ಯಂತ ಯಶಸ್ವಿಯಾಗಿ ನೆರವೇರಿದೆ.** ಇದು ಕೇವಲ ಒಂದು ಸಮಾವೇಶವಾಗಿರದೆ, ಸಮರ್ಪಿತ ಹಾಗೂ ಸಂಘಟಿತ ಪ್ರಯತ್ನಗಳಿಗೆ ಪ್ರತಿಫಲವಾಗಿ ರೂಪುಗೊಂಡ ಮಹತ್ವದ ಸಾಧನೆಯಾಗಿದೆ. ಈ ಜಾಂಬೋರೇಟ್‌ನ ಆತಿಥ್ಯ ವಹಿಸಿದ ಬೆಳಗಾವಿ ಜಿಲ್ಲಾ ಸ್ಕೌಟ್ ಮತ್ತು ಗೈಡ್ ಸಂಸ್ಥೆ, ಕಾರ್ಯಕ್ರಮವನ್ನು ಶಿಸ್ತಿನಿಂದ ಹಾಗೂ ವ್ಯವಸ್ಥಿತವಾಗಿ ನಿರ್ವಹಿಸಿ, ರಾಜ್ಯಮಟ್ಟದಲ್ಲಿ ಮಾದರಿಯಾಗುವ ಸಾಧನೆಯನ್ನು ಮಾಡಿದೆ. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಗಜಾನನ ಮನ್ನಿಕೇರಿ ಹಾಗೂ ಅವರ ತಂಡಕ್ಕೆ ಹಾಗೂ ಯಶಸ್ಸಿಗಾಗಿ ಶ್ರಮಿಸಿದ ರಾಜ್ಯ ಸಂಸ್ಥೆಯ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿ, ಸಂಘಟಕರು, ಶಿಕ್ಷಕರು, ಸ್ವಯಂಸೇವಕರು, ಕಾರ್ಯಕರ್ತರು ಹಾಗೂ ಸಹಕಾರ ನೀಡಿದ ರಾಜ್ಯ ಸಂಸ್ಥೆಯ ಪದಾಧಿಕಾರಿಗಳಿಗೆ ಅಭಿನಂದನೆಗಳು. ಕಾರ್ಯಕ್ರಮಕ್ಕೆ ಬೆಂಬಲ ನೀಡಿದ ದಾನಿಗಳು, ಹಿತೈಷಿಗಳು, ಶಿಕ್ಷಣ ಇಲಾಖೆ, ಜನಪ್ರತಿನಿಧಿಗಳು, ಬೆಳಗಾವಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಪೊಲೀಸ್ ಇಲಾಖೆಯ ಅಧಿಕಾರಿಗಳು ಸಿಬ್ಬಂದಿಗಳಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು. ಸುರಕ್ಷತೆ, ಸ್ವಚ್ಛತೆ, ಸಾರಿಗೆ, ರಕ್ಷಣೆ, ಆರೋಗ್ಯ ಮತ್ತು ಮೂಲಭೂತಸೌಕರ್ಯಗಳ ವ್ಯವಸ್ಥೆಯಲ್ಲಿ ನೀಡಿದ ಅವರ ಸಹಕಾರವೇ ಈ ಜಾಂಬೋರೇಟ್ ಯಶಸ್ಸಿಗೆ ದೃಢ ಬೆನ್ನೆಲುಬಾಗಿದೆ.

ಇಂತಹ ಬೃಹತ್ ಕಾರ್ಯಕ್ರಮಕ್ಕೆ ಸೂಕ್ತ ಜಾಗದ ನಿರೀಕ್ಷೆಯಲ್ಲಿದ್ದ ಸಂದರ್ಭದಲ್ಲಿ, ಬೆಳಗಾವಿಯ ಪ್ರತಿಷ್ಠಿತ ಫೀನಿಕ್ಸ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ವಿವೇಕ್ ಪಾಟೀಲ್ ಅವರು ಅತ್ಯಂತ ಸಂತೋಷದಿಂದ ತಮ್ಮ ಸಂಸ್ಥೆಗೆ ವಿಸ್ತಾರವಾದ ಜಾಗವನ್ನು ಅಗತ್ಯವಿರುವ ಎಲ್ಲಾ ಸ್ಥಾಪಿತ ಮೂಲಭೂತ ಸೌಕರ್ಯಗಳೊಂದಿಗೆ ನೀಡಿದರು. ಈ ಕಾರ್ಯದಲ್ಲಿ ಶ್ರೀ ವಿವೇಕ್ ಪಾಟೀಲ್ ಅವರಿಗೆ ಆತ್ಮೀಯ ಸ್ನೇಹಿತರಾಗಿರುವ ಶ್ರೀ ಮೋಹನ್ ಕೊಂಡಜ್ಜಿ ಅವರ ಮಹತ್ವದ ಸಹಕಾರವೂ ಲಭಿಸಿದೆ. ಇದರ ಹಿನ್ನೆಲೆಯಲ್ಲಿ ಶ್ರೀ ವಿವೇಕ್ ಪಾಟೀಲ್ ಅವರಿಗೆ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ರಾಜ್ಯದ ವಿವಿಧ ಭಾಗಗಳಿಂದ ಶಿಸ್ತುಬದ್ಧವಾಗಿ ಭಾಗವಹಿಸಿದ ಸ್ಕೌಟ್ ಮತ್ತು ಗೈಡ್ ಮಕ್ಕಳು ಈ ಜಾಂಬೋರೇಟ್‌ನ ಜೀವಾಳವಾಗಿದ್ದು, ಸೇವೆ, ನಾಯಕತ್ವ ಮತ್ತು ದೇಶಪ್ರೇಮದ ಮೌಲ್ಯಗಳನ್ನು ಅನುಭವದ ಮೂಲಕ ಕಲಿತಿದ್ದಾರೆ. ನಮ್ಮ ಸಂಸ್ಥೆಯ ಮೇಲಿನ ಭರವಸೆಯೊಂದಿಗೆ ಮಕ್ಕಳನ್ನು ಜಾಂಬೋರೇಟ್‌ಗೆ ಕಳುಹಿಸಿಕೊಟ್ಟಿದ್ದ ಪೋಷಕರಿಗೂ, ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳಿಗೂ ನಮ್ಮ ಸಂಸ್ಥೆ ಆಭಾರಿಯಾಗಿರುತ್ತದೆ.

ಒಟ್ಟಾರೆ, ಈ ಜಾಂಬೋರೇಟ್ ನಮ್ಮ ರಾಜ್ಯ ಸಂಸ್ಥೆಗೆ ಗೌರವ ಮತ್ತು ಹೆಮ್ಮೆಯನ್ನು ತಂದುಕೊಟ್ಟಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಅರ್ಥಪೂರ್ಣ ಹಾಗೂ ವ್ಯಾಪಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಪ್ರೇರಣೆಯಾಗಲಿ ಎಂಬುದೇ ನನ್ನ ಆಶಯ.

2026ರ ಜನವರಿ ತಿಂಗಳು ನಮ್ಮ ಸಂಸ್ಥೆಗೆ ಒಂದು ಸ್ಮರಣೀಯ ಅಧ್ಯಾಯವಾಗಿ ರೂಪುಗೊಂಡಿದ್ದು, ಈ ಅವಧಿಯಲ್ಲಿ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಆಯೋಜಿಸಲಾದ ವೈವಿಧ್ಯಮಯ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳು ನಮ್ಮ ಸಂಸ್ಥೆಯ ಉದ್ದೇಶ ಹಾಗೂ ಬದ್ಧತೆಯನ್ನು ಸ್ಪಷ್ಟವಾಗಿ ಅನಾವರಣಗೊಳಿಸಿವೆ.

ದಿನಾಂಕ 10–01–2026 ರಂದು ಶಿವಮೊಗ್ಗ ಜಿಲ್ಲಾ ಸಂಸ್ಥೆಯ ಶತಮಾನೋತ್ಸವ ಹಾಗೂ ದಿವಂಗತ ಶ್ರೀ ಟಿ.ವಿ.ನಾರಾಯಣ ಶಾಸ್ತ್ರಿಗಳ ಜನ್ಮ ಶತಮಾನೋತ್ಸವದ ಅಂಗವಾಗಿ ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ ಸ್ಕೌಟ್ಸ್–ಗೈಡ್ಸ್ ಮತ್ತು ರೋವರ್ಸ್–ರೇಂಜರ್ಸ್ ರ್ಯಾಲಿ, ಶತಮಾನೋತ್ಸವ ಕಟ್ಟಡದ ಭೂಮಿಪೂಜೆ ಹಾಗೂ ಸ್ಮರಣ ಸಂಚಿಕೆ ಬಿಡುಗಡೆ – ಇವೆಲ್ಲವೂ ಶಿವಮೊಗ್ಗ ಜಿಲ್ಲಾ ಸಂಸ್ಥೆಯ ಅತ್ಯುತ್ತಮ ಇತಿಹಾಸ, ಮೌಲ್ಯಾಧಾರಿತ ಸೇವಾ ಪರಂಪರೆ ಮತ್ತು ಭವಿಷ್ಯದ ದೃಷ್ಟಿಯನ್ನು ಒಂದೇ ವೇದಿಕೆಯಲ್ಲಿ ಸಮ್ಮಿಲಿತಗೊಳಿಸಿದ ಅರ್ಥಪೂರ್ಣ ಹಾಗೂ ಸ್ಮರಣೀಯ ಕ್ಷಣವಾಗಿತ್ತು.

ಜನವರಿ 9 ರಿಂದ 13 ರವರೆಗೆ ಛತ್ತಿಸ್‌ಗಢ ರಾಜ್ಯದ ಬಲೋಡ್‌ನಲ್ಲಿ ಆಯೋಜಿಸಲಾಗಿದ್ದ ಪ್ರಪ್ರಥಮ ರಾಷ್ಟ್ರೀಯ ರೋವರ್ಸ್–ರೇಂಜರ್ಸ್ ಜಾಂಬೋರಿಯಲ್ಲಿ ರಾಜ್ಯದಿಂದ ನಿಗಧಿತ ಸಂಖ್ಯೆಯಲ್ಲಿ ಭಾಗವಹಿಸಿದ್ದ ನಮ್ಮ ತಂಡವು ವಿವಿಧ ವಿಭಾಗಗಳಲ್ಲಿ ಗಳಿಸಿದ ಪ್ರಶಸ್ತಿಗಳು ಹಾಗೂ ಮೆಚ್ಚುಗೆಗಳು ಸಂಸ್ಥೆಗೆ ಅಪಾರ ಹೆಮ್ಮೆ ತಂದಿದೆ.

ಜನವರಿ 15 ರಿಂದ 21 ರವರೆಗೆ ಕೊಂಡಜ್ಜಿಯ ನಮ್ಮ ತರಬೇತಿ ಕೇಂದ್ರದಲ್ಲಿ "ಯುವ ಆಪದ್‌ಮಿತ್ರ ಯೋಜನೆಯಡಿ ಆಯೋಜಿಸಲಾದ ವಿಪತ್ತು ನಿರ್ವಹಣಾ ತರಬೇತಿ ಶಿಬಿರದಲ್ಲಿ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ರೋವರ್ಸ್ ಮತ್ತು ರೇಂಜರ್ಸ್‌ಗಳು ಭಾಗವಹಿಸಿ, ತುರ್ತು ಸಂದರ್ಭಗಳಲ್ಲಿ ಸೇವೆ ಸಲ್ಲಿಸಲು ಅಗತ್ಯವಾದ ಮಹತ್ವದ ಕೌಶಲ್ಯಗಳನ್ನು ಪಡೆದುಕೊಂಡಿರುತ್ತಾರೆ .

ದಿನಾಂಕ 18–01–2026 ರಂದು ಬಳ್ಳಾರಿ ಜಿಲ್ಲೆಯ ತೋರಣಗಲ್ಲಿನಲ್ಲಿ ನಡೆದ ರಾಜ್ಯಮಟ್ಟದ ಗೀತಗಾಯನ ಸ್ಪರ್ಧೆ ಸಮಾರಂಭವು ಸಾಂಸ್ಕೃತಿಕ, ಶಿಸ್ತು, ಏಕತೆ ಮತ್ತು ಸೃಜನಶೀಲತೆಯ ಉತ್ಸವವಾಗಿ ಮೂಡಿಬಂದಿತು. ಈ ಸುಂದರ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಆಯೋಜಿಸಿಕೊಟ್ಟಿದ್ದಕ್ಕಾಗಿ ಜಿಂದಾಲ್ ಸಂಸ್ಥೆಗೆ ನಾನು ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಇದಲ್ಲದೆ, ದಿನಾಂಕ 14–01–2026 ರಂದು ಚೆನ್ನೈನ ಶ್ರೀ ಸಾಯಿರಾಮ್ ಶಿಕ್ಷಣ ಸಂಸ್ಥೆಯಲ್ಲಿ ರಾಜ್ಯಮಟ್ಟದ ಹಿಮಾಲಯ ವುಡ್ ಬ್ಯಾಡ್ಜ್ ಹೋಲ್ಡರ್ಸ್ ಸಮಾಗಮ ಯಶಸ್ವಿಯಾಗಿ ಜರುಗಿತು. ನಾನು ಈ ಸಮಾವೇಶದಲ್ಲಿ ಭಾಗವಹಿಸಿ ಭಾಗವಹಿಸಿದ ನೂತನ ಹೆಚ್.ಡಬ್ಲೂ.ಬಿ ಪುರಸ್ಕೃತರಿಗೆ ಹಾಗೂ ಇತರ ತರಬೇತಿ ನಾಯಕರುಗಳಿಗೆ ತರಬೇತಿ ಪಡೆಯಲು ಸೂಚಿಸಿದ್ದೇನೆ

ಇವುಗಳ ಜೊತೆಗೆ, ರಸ್ತೆ ಸುರಕ್ಷತಾ ಸಪ್ತಾಹದ ಅಂಗವಾಗಿ ರಾಜ್ಯಾದ್ಯಂತ ವಿವಿಧ ಭಾಗಗಳಲ್ಲಿ ನಮ್ಮ ಸ್ಕೌಟ್ಸ್ – ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳು ವೈವಿಧ್ಯಮಯ ಹಾಗೂ ಸೃಜನಶೀಲ ರೀತಿಯಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ನಡೆಸಿ, ಸಾಮಾಜಿಕ ಹೊಣೆಗಾರಿಕೆಯನ್ನು ಪ್ರದರ್ಶಿಸಿದ್ದಾರೆ.

ಒಟ್ಟಾರೆ, ಈ ಎಲ್ಲ ಚಟುವಟಿಕೆಗಳಿಂದಾಗಿ ಜನವರಿ ತಿಂಗಳು ನಮ್ಮ ರಾಜ್ಯ ಸಂಸ್ಥೆಗೆ ಮಹತ್ವದ ಮಾಸವಾಗಿ ಪ್ರತಿಬಿಂಬಿಸಿದೆ. ಈ ಎಲ್ಲಾ ಕಾರ್ಯಕ್ರಮಗಳಿಗೆ ಸಹಕಾರ, ಸಮರ್ಪಣೆ ಮತ್ತು ಉತ್ಸಾಹ ತೋರಿದ ಪ್ರತಿಯೊಬ್ಬರಿಗೂ ರಾಜ್ಯ ಸಂಸ್ಥೆಯಿಂದ ಹೃತ್ಪೂರ್ವಕ ಧನ್ಯವಾದಗಳು.

ಫೆಬ್ರವರಿ ತಿಂಗಳಲ್ಲಿ ರಾಷ್ಟ್ರ ಮತ್ತು ರಾಜ್ಯಮಟ್ಟದಲ್ಲಿ ವಿವಿಧ ಕಾರ್ಯಕ್ರಮಗಳು ಮತ್ತು ತರಬೇತಿಗಳು ನಡೆಯಲಿವೆ. ಪ್ರಮುಖವಾಗಿ, ಸ್ಕೌಟಿಂಗ್ ಮತ್ತು ಗೈಡಿಂಗ್ ಚಳವಳಿಯ ಸ್ಥಾಪಕರಾದ ರಾಬರ್ಟ್ ಬೇಡನ್ ಪೋವೆಲ್ ಮತ್ತು ಒಲೇವ್ ಬೇಡನ್ ಪೋವೆಲ್ ಅವರ ಜನ್ಮದಿನವಾದ ಫೆಬ್ರವರಿ 22 ರಂದು ಪ್ರತಿಯೊಬ್ಬ ಸ್ಕೌಟ್ ಮತ್ತು ಗೈಡ್ ಶ್ರದ್ಧಾಭಕ್ತಿಯಿಂದ ಈ ಮಹತ್ವದ ದಿನವನ್ನು ಆಚರಿಸಬೇಕು. ಫೆಬ್ರವರಿ ತಿಂಗಳಲ್ಲಿ ನಡೆಯುವ ಪ್ರತಿಯೊಂದು ಕಾರ್ಯಕ್ರಮ ಮತ್ತು ಚಟುವಟಿಕೆಗಳಲ್ಲಿ ನಾವೆಲ್ಲರೂ ಸಕ್ರಿಯವಾಗಿ ಪಾಲ್ಗೊಂಡು, ಯಶಸ್ವಿಗೊಳಿಸೋಣ.

ಈ ಸಂತಸದ ನಡುವೆಯೂ ಜನವರಿ ಮಾಸದಲ್ಲಿ ಕೆಲವು ದು:ಖಕರ ಘಟನೆಗಳೂ ಸಂಭವಿಸಿವೆ. ಸ್ಕೌಟ್ಸ್–ಗೈಡ್ಸ್ ಚಳುವಳಿಗೆ ಅಮೂಲ್ಯ ಹಾಗೂ ಅನನ್ಯ ಸೇವೆ ಸಲ್ಲಿಸಿದ ಹಿರಿಯ ಮುತ್ಸದ್ದಿ ನಾಯಕರಾದ ಶ್ರೀ ಕೆ.ನರಸಿಂಹಮೂರ್ತಿ ಅವರು ದಿನಾಂಕ 20–01–2026 ರಂದು ದೈವಾಧೀನರಾಗಿದ್ದು ನೋವು ತಂದಿದೆ. ಶ್ರೀಯುತರು ಶತಮಾನದ ಇತಿಹಾಸವುಳ್ಳ ಚಾಮುಂಡಿ ಸ್ಕೌಟ್ ಮುಕ್ತ ದಳದ ನಾಯಕರಾಗಿ, ರಾಜ್ಯ ಸಂಸ್ಥೆಯ ಸಹಾಯಕ ರಾಜ್ಯ ಆಯುಕ್ತರಾಗಿ ಹಾಗೂ ಬೆಂಗಳೂರು ಉತ್ತರ ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರಾಗಿ ಸ್ಕೌಟಿಂಗ್–ಗೈಡಿಂಗ್ ಚಳುವಳಿಯ ಬೆಳವಣಿಗೆಗೆ ಅಪಾರ ಕೊಡುಗೆ ನೀಡಿದ್ದಾರೆ.

ನಮ್ಮ ಸಂಸ್ಥೆಗೆ ಗೌರವಪೂರ್ವಕ ಸೇವೆ ಸಲ್ಲಿಸಿದ ಮತ್ತೊಬ್ಬ ಹಿರಿಯ ನಾಯಕಿ, ರಾಷ್ಟ್ರೀಯ ಸಂಸ್ಥೆಯಲ್ಲಿ ನಿರ್ದೇಶಕರಾಗಿ ಹಾಗೂ ರಾಜ್ಯ ಸಂಸ್ಥೆಯಲ್ಲಿ ರಾಜ್ಯ ಸಂಘಟನಾ ಆಯುಕ್ತರಾಗಿ ಸೇವೆ ಸಲ್ಲಿಸಿದ್ದ ಶ್ರೀಮತಿ ಪಿ.ಸರೋಜಾ ಅವರು ದಿನಾಂಕ 14–01–2026 ರಂದು ದೈವಾಧೀನರಾದರು. ಅವರ ಸಮರ್ಪಿತ ಸೇವೆ ಸ್ಮರಣೀಯವಾದುದು.

ರಾಜ್ಯದ ಹಿರಿಯ ಮುತ್ಸದ್ದಿ ನಾಯಕ, ಮಾಜಿ ಸಚಿವರಾಗಿದ್ದ, ಶತಾಯುಷಿ, ಡಾ.ಭೀಮಣ್ಣ ಖಂಡ್ರೆ ಅವರು ನಮ್ಮನಗಲಿದ್ದಾರೆ. ಅವರು ಸ್ವಾತಂತ್ರ್ಯ ಹೋರಾಟ, ಕರ್ನಾಟಕ ಏಕೀಕರಣ ಚಳವಳಿ, ಶಿಕ್ಷಣ ಮತ್ತು ಸಹಕಾರ ಕ್ಷೇತ್ರಗಳಲ್ಲಿ ಅಮೂಲ್ಯ ಸೇವೆ ಸಲ್ಲಿಸಿ, ಸರಳ ಜೀವನಶೈಲಿ, ದೃಢ ಸೈದ್ಧಾಂತಿಕ ನಿಲುವು ಮತ್ತು ವಚನ ಸಾಹಿತ್ಯದ ಪ್ರಚಾರದ ಮೂಲಕ ಸಮಾಜಕ್ಕೆ ಮಾರ್ಗದರ್ಶನ ನೀಡಿದವರು.

ನಿಟ್ಟೆ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರಾಗಿದ್ದ ಶ್ರೀ ವಿನಯ್ ಹೆಗ್ಡೆ ಅವರು ಇತ್ತೀಚೆಗೆ ನಿಧನರಾಗಿದ್ದಾರೆ. ಅವರು ಸ್ಕೌಟಿಂಗ್–ಗೈಡಿಂಗ್ ಚಳುವಳಿಗೆ ನೀಡಿದ ನಿರಂತರ ಸಹಕಾರ ಮತ್ತು ಪ್ರೋತ್ಸಾಹ ಸದಾ ಸ್ಮರಣೀಯವಾಗಿದೆ.

ಈ ಎಲ್ಲ ಮಹನೀಯರುಗಳ ಆತ್ಮಗಳಿಗೆ ಚಿರಶಾಂತಿಯನ್ನು ಕರುಣಿಸಲಿ ಮತ್ತು ಕುಟುಂಬ ಸದಸ್ಯರು ಹಾಗೂ ಅಭಿಮಾನಿಗಳಿಗೆ ದು:ಖವನ್ನು ಸಹಿಸುವ ಶಕ್ತಿ ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ಎಲ್ಲರಿಗೂ ಶುಭವಾಗಲಿ. ಮಹಾಶಿವರಾತ್ರಿಯ ಹಾರ್ದಿಕ ಶುಭಾಶಯಗಳು

ಸ್ಕೌಟ್ಸ್ ಮತ್ತು ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಪಿ.ಜಿ.ಆರ್. ಸಿಂಧ್ಯ)
ರಾಜ್ಯ ಮುಖ್ಯ ಆಯುಕ್ತರು

ಆಹಾರ ದೈವಿಕ ಸಂಪತ್ತು, ಅದನ್ನು ಸಂರಕ್ಷಿಸೋಣ
ಆಹಾರವನ್ನು ಉಳಿಸಿ, ಭವಿಷ್ಯವನ್ನು ಕಾಪಾಡಿ!

ಫೆಬ್ರವರಿ 2026ರ ಮಾಹೆಯ ಕಾರ್ಯಕ್ರಮ ಮತ್ತು ಚಟುವಟಿಕೆಗಳು

ಕ್ರ. ಸಂ.	ಶಿಬಿರಗಳು	ಸ್ಥಳ	ದಿನಾಂಕಗಳು	ಭಾಗವಹಿಸುವ ಜಿಲ್ಲೆಗಳು
1	ಭಾ.ಸ್ಕೌ&ಗೈ ಮತ್ತು ನೆಹರು ಯುವ ಕೇಂದ್ರ ಜಂಟಿ ಆಶ್ರಯದಲ್ಲಿ "ಯುವ ಆಪದ್‌ಮಿತ್ರ ಯೋಜನೆ"ಯ ಅಡಿಯಲ್ಲಿ ಮೇರಾ ಯುವ ಭಾರತ್ ಸ್ವಯಂ ಸೇವಕರುಗಳಿಗೆ ವಿಪತ್ತು ನಿರ್ವಹಣಾ ತರಬೇತಿ ಶಿಬಿರ	ಡಾ॥ ವಿ.ಎಸ್. ಆಚಾರ್ಯ ಸ್ಕೌಟ್–ಗೈಡ್ ಜಿಲ್ಲಾ ತರಬೇತಿ ಕೇಂದ್ರ, ಪ್ರಗತಿನಗರ, ಉಡುಪಿ ಜಿಲ್ಲೆ	01.02.2026 ರಿಂದ 07.02.2026	ಉಡುಪಿ
2	ಭಾ.ಸ್ಕೌ&ಗೈ ರೋವರ್ಸ್–ರೇಂಜರ್ಸ್‌ಗಳಿಗೆ "ಯುವ ಆಪದ್ ಮಿತ್ರ ಯೋಜನೆಲಿ" ಅಡಿಯಲ್ಲಿ ಮೇರಾ ನಿರ್ವಹಣಾ	ಡಾ॥ ಆನಿಬೆಸೆಂಟ್ ಸ್ಕೌಟ್–ಗೈಡ್ ರಾಜ್ಯ ತರಬೇತಿ & ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ	3 ರಿಂದ 9 ಫೆಬ್ರವರಿ 2026	ಬೆಂಗಳೂರು ನಗರ
3	ರಾಜ್ಯ ಮಟ್ಟದ ರೊವರ್ಸ್–ರೇಂಜರ್ಸ್‌ಗಳಿಗೆ ಕಿನ್ನಳ ಪೇಂಟಿಂಗ್ ಶಿಬಿರ (EPRI ಸಹಬಾಗಿತ್ವದಲ್ಲಿ)	ಕಿನ್ನಾಳ / ಕೊಪ್ಪಳ	11 ರಿಂದ 14 ಫೆಬ್ರವರಿ 2026	ಎಲ್ಲಾ ಜಿಲ್ಲೆಗಳಿಂದ
4	ಭಾ.ಸ್ಕೌ&ಗೈ ಮತ್ತು ನೆಹರು ಯುವ ಕೇಂದ್ರ ಜಂಟಿ ಆಶ್ರಯದಲ್ಲಿ "ಯುವ ಆಪದ್‌ಮಿತ್ರ ಯೋಜನೆ"ಯ ಅಡಿಯಲ್ಲಿ ಮೇರಾ ಯುವ ಭಾರತ್ ಸ್ವಯಂ ಸೇವಕರುಗಳಿಗೆ ವಿಪತ್ತು ನಿರ್ವಹಣಾ ತರಬೇತಿ ಶಿಬಿರ	ಜಿಲ್ಲಾ ಸ್ಕೌಟ್–ಗೈಡ್ ತರಬೇತಿ ಕೇಂದ್ರ, ಪಿಲಿಕುಳ, ಮಂಗಳೂರು ದಕ್ಷಿಣ ಕನ್ನಡ ಜಿಲ್ಲೆ	09.02.2026 ರಿಂದ 15.02.2026	ದಕ್ಷಿಣ ಕನ್ನಡ & ಕೊಡಗು
5	ರೋವರ್ಸ್–ರೇಂಜರ್ಸ್‌ಗಳಿಗೆ ರಾಜ್ಯ ಪುರಸ್ಕಾರ ಪರೀಕ್ಷಾ ಶಿಬಿರ	ಡಾ॥ ಆನಿಬೆಸೆಂಟ್ ಸ್ಕೌಟ್–ಗೈಡ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ	10 ರಿಂದ 12 ಫೆಬ್ರವರಿ 2026	—
6	ರೋವರ್ಸ್–ರೇಂಜರ್ಸ್‌ಗಳಿಗೆ ರಾಜ್ಯ ಪುರಸ್ಕಾರ ಪರೀಕ್ಷಾ ಶಿಬಿರ	ಕೊಂಡಜ್ಜಿ ಬಸಪ್ಪ ಸ್ಕೌಟ್–ಗೈಡ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ಕೊಂಡಜ್ಜಿ, ಕೊಂಡಜ್ಜಿ ತಾಲ್ಲೂಕು, ದಾವಣಗೆರೆ ಜಿಲ್ಲೆ	10 ರಿಂದ 12 ಫೆಬ್ರವರಿ 2026	—
7	ಭಾ.ಸ್ಕೌ&ಗೈ ರೋವರ್ಸ್–ರೇಂಜರ್ಸ್‌ಗಳಿಗೆ ಯುವ ಆಪದ್ ಮಿತ್ರ ಯೋಜನೆ ಅಡಿಯಲ್ಲಿ ವಿಪತ್ತು ನಿರ್ವಹಣಾ ತರಬೇತಿ ಶಿಬಿರ	ವಾಸಂತಿ ಬಾಯಿ ಜಿಗಜಿಣಿ ಜಿಲ್ಲಾ ಸ್ಕೌಟ್–ಗೈಡ್ ತರಬೇತಿ ಕೇಂದ್ರ, ವಿಜಯಪುರ	10 ರಿಂದ 16 ಫೆಬ್ರವರಿ 2026	ಬಾಗಲಕೋಟೆ
8	ಮಹಾಶಿವರಾತ್ರಿ ಸೇವಾ ಶಿಬಿರ	ಚಿಕ್ಕಬಳ್ಳಾಪುರ	14 & 15 ಫೆಬ್ರವರಿ 2026	—
9	ಭಾ.ಸ್ಕೌ&ಗೈ ಮತ್ತು ನೆಹರು ಯುವ ಕೇಂದ್ರ ಜಂಟಿ ಆಶ್ರಯದಲ್ಲಿ "ಯುವ ಆಪದ್ ಮಿತ್ರ ಯೋಜನೆ"ಯ ಅಡಿಯಲ್ಲಿ ಮೇರಾ ಯುವ ಭಾರತ್ ಸ್ವಯಂ ಸೇವಕರುಗಳಿಗೆ ವಿಪತ್ತು ನಿರ್ವಹಣಾ ತರಬೇತಿ ಶಿಬಿರ	ಕೊಂಡಜ್ಜಿ ಬಸಪ್ಪ ಸ್ಕೌಟ್–ಗೈಡ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ಕೊಂಡಜ್ಜಿ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ	17.02.2026 ರಿಂದ 23.02.2026	ಶಿವಮೊಗ್ಗ & ಚಿಕ್ಕಮಗಳೂರು
10	ರಾಜ್ಯ ಮಟ್ಟದ ವಾಟರ್ ರಿಗೆಟ್ಟಾ ಶಿಬಿರ	ವಾಣಿವಿಲಾಸ ಸಾಗರ, ಚಿತ್ರದುರ್ಗ	23.2.2026 ರಿಂದ	36 ಜಿಲ್ಲೆಗಳಿಂದ
11	ಚಿಂತನಾ ದಿನಾಚರಣೆ		22.02.2026	ಎಲ್ಲಾ ಹಂತಗಳಲ್ಲಿ
12	ಶಿರಸಿ ಮಾರಿಕಾಂಭ ಜಾತ್ರ ಮಹೋತ್ಸವ (ರಾಜ್ಯ ಮಟ್ಟದ ಸೇವಾ ಶಿಬಿರ)	ಶಿರಸಿ	24 ಫೆಬ್ರವರಿ 2026 ರಿಂದ ಮಾರ್ಚ್ 4ರ ವರೆಗೆ	ಶಿರಸಿ
13	ರಾಷ್ಟ್ರ ಮಟ್ಟದ ಕಡಲ ತೀರ ಚಾರಣ/ ಸ್ವಚ್ಛತಾ ಕಾರ್ಯಕ್ರಮ	—	ಫೆಬ್ರವರಿ 2026	36 ಜಿಲ್ಲೆಗಳಿಂದ
14	ಸ್ಕೌಟ್–ಗೈಡ್ ಮಾಸಪತ್ರಿಕೆ ಶತಮಾನೋತ್ಸವ	—	ಫೆಬ್ರವರಿ 2026	—

ಸಂಪಾದಕೀಯ



29ನೇ ಕರ್ನಾಟಕ ರಾಜ್ಯ ಸ್ಕೌಟ್ಸ್ & ಗೈಡ್ಸ್ ಜಾಂಬೂರೇಟ್ ಯಶಸ್ವಿ ನಿರ್ವಹಣೆ :

ಮುಂದೇನು ...?

ಯಾವುದೇ ವ್ಯಕ್ತಿ ಬದುಕಿನಲ್ಲಿ ಯಶಸ್ಸನ್ನು ಗಳಿಸುವಲ್ಲಿ ಅವನು ತನ್ನ ಪ್ರತಿಭೆಯನ್ನು ಪಾಲನೆ, ಪೋಷಣೆ ಮಾಡಬೇಕು, ಬಹಳಷ್ಟು ವಿಶಿಷ್ಟ ವಿಷಯಗಳ ಬಗ್ಗೆ ವಿಶೇಷ ಜ್ಞಾನವನ್ನು ಹೊಂದಿರಬೇಕಲ್ಲದೆ, ತನ್ಮೂಲಕ ವಿವಿಧ ಸಾಮರ್ಥ್ಯಗಳನ್ನು ಹೊಂದಿರಬೇಕು ಎಂಬ ಮಾತು **(To Succeed in this world, you need to nurture your skills, have a lot of specialized knowledge and acquire many different talents)** ವ್ಯಕ್ತಿಯ ಸಾರ್ಥಕ ಬದುಕಿನಲ್ಲಿ ಮತ್ತು ಅವರ ಸರ್ವಾಂಗೀಣ ಅಭಿವೃದ್ಧಿಗೆ ಶಿಕ್ಷಣಾಸಕ್ತರೆಲ್ಲರೂ ವಹಿಸಬೇಕಾಗಿರುವ ಜವಾಬ್ದಾರಿಗಳನ್ನು ಸ್ಪಷ್ಟ ಪಡಿಸುವುದು.

ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಯ ವಿದ್ಯಾರ್ಜನೆಯು ಕೇವಲ ಪಠ್ಯ ಚಟುವಟಿಕೆಗಳಿಗೆ ಸೀಮಿತವಾಗದೆ ಅವರ ಸರ್ವಾಂಗೀಣ ಅಭಿವೃದ್ಧಿಯೊಂದಿನ ಗುಣಾತ್ಮಕ ಶಿಕ್ಷಣದ ಇನ್ನೊಂದು ಮುಖವಾಗಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿಯು ನಿರ್ವಹಣೆ ಆಗುತ್ತಿರುವುದು ಹರ್ಷದಾಯಕ, ಈ ಚಳುವಳಿಯು ವಿದ್ಯಾರ್ಥಿಗಳಲ್ಲಿ ಉಂಟು ಮಾಡುವ ಜ್ಞಾನ್ಗಾಜನೆ, ಕೌಶಲ್ಯಾಭಿವೃದ್ಧಿ, ಮನೋಭಾವನೆಗಳ ಬೆಳವಣಿಗೆಗಳನ್ನು ಒರೆಹಚ್ಚುವಲ್ಲಿ ಮತ್ತು ಅವರುಗಳಿಗೆ ಇನ್ನೂ ಹೆಚ್ಚಿನ ಅವಕಾಶಗಳನ್ನು ಮತ್ತು ಮೆರಗನ್ನು ನೀಡುವಲ್ಲಿ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಅವರಿಗೆ ರಾಷ್ಟ್ರ ಮಟ್ಟದಲ್ಲಿ ಜಾಂಬೂರಿಗಳನ್ನು ರಾಜ್ಯ ಮಟ್ಟದಲ್ಲಿ ಜಾಂಬೂರೇಟ್‌ಗಳನ್ನು ನಿಗದಿತ ಅವಧಿಗಳಲ್ಲಿ ನಿರ್ವಹಿಸುತ್ತಿರುವುದನ್ನು ಮನಗಾಣ ಬಹುದಾಗಿದೆ.

ಅದರಂತೆ ದಿನಾಂಕ: 27.12.2025 ರಿಂದ ದಿನಾಂಕ 01–01–2026 ರವರೆಗೆ ಫಿನಿಕ್ಸ್ ಪಬ್ಲಿಕ್ ಶಾಲೆ, ಹೊನಗ ಗ್ರಾಮ, ಬೆಳಗಾವಿ ಜಿಲ್ಲೆಯಲ್ಲಿ ಭಾರತ್ ಸ್ಕೌಟ್ಸ್ & ಗೈಡ್ಸ್ ಕರ್ನಾಟಕ, ಜಿಲ್ಲಾ ಪಂಚಾಯತ್ ಬೆಳಗಾವಿ ಮತ್ತು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ ಬೆಳಗಾವಿ ಇವರುಗಳ ಆಶ್ರಯದಲ್ಲಿ ಏರ್ಪಟ್ಟ 29ನೇ ಕರ್ನಾಟಕ ರಾಜ್ಯ ಸ್ಕೌಟ್ಸ್ – ಗೈಡ್ಸ್ ಜಾಂಬೂರೆಟ್ ಬಹಳಷ್ಟು ಅರ್ಥಗರ್ಭಿತ ಮತ್ತು ಪ್ರೇರಣಾತ್ಮಕ ಆಗಿ ನಿರ್ವಹಣೆ ಆಗಿರುವುದು ಅಭಿನಂದನಾರ್ಹ.

ಈ 7 ದಿವಸಗಳ ಜಾಂಬೂರೇಟ್, ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಭಾಗವಹಿಸಿದ್ದ ವಿದ್ಯಾರ್ಥಿಗಳಲ್ಲಿ, ಅವರುಗಳು ಬಾವಿ ಸತ್ಪ್ರಜೆಗಳಾಗುವಲ್ಲಿ ಮುಖ್ಯ ಅಂಶಗಳಾಗಿರುವ ಶಾಂತಿ, ಶಿಸ್ತು, ಸಂಯಮ, ಸಹಬಾಳ್ವೆ, ಸಮಾನತೆ, ಸಾಮಾಜಿಕ ಜವಾಬ್ದಾರಿಗಳು ಮುಂತಾದವುದಗಳನ್ನು ಅರಿತು ಕಾರ್ಯನುಷ್ಠಾನಗೊಳಿಸುವಲ್ಲಿ ಕಾರ್ಯ ಚಟುವಟಿಕೆಗಳು ಎಲ್ಲರ ಆದಾರಭಮಾನಕ್ಕೆ ಪಾತ್ರ ಅದವು.

ವಿದ್ಯಾರ್ಥಿಗಳಲ್ಲಿ ಪರಸ್ಪರ ಸಾಮಾಜಿಕ ಬದ್ಧತೆಯನ್ನು, ಸ್ನೇಹ ಪರತೆಯನ್ನು ವೃದ್ಧಿಸುವಲ್ಲಿ ಸಹಕಾರಿ ಆಗಿರುವುದನ್ನು ಮನಗಾಣಲಾಯ್ತಿತು.

ಸದರಿ ಸಂದರ್ಭದ ಎಲ್ಲಾ ದಿವಸಗಳಲ್ಲಿ ಹಮ್ಮಿಕೊಂಡಿದ್ದ ವಿವಿಧ ಕಾರ್ಯ ಚಟುವಟಿಕೆಗಳು, ಕೌಶಲ್ಯ ಪ್ರದರ್ಶನ ಕಾರ್ಯಕ್ರಮಗಳು, ಶೌರ್ಯ ಪ್ರದರ್ಶನ ಚಟುವಟಿಕೆಗಳು, ಜಿಲ್ಲಾ ವಿಶಿಷ್ಠ ಕಲೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು, ಇತ್ಯಾದಿಗಳು "ವಿಭಿನ್ನತೆಯಲ್ಲಿ ಏಕತೆಯನ್ನು ಸಾರುವಂತಹ" ಕಾರ್ಯಕ್ರಮಗಳಾಗಿದ್ದು ಎಲ್ಲರ ಮೆಚ್ಚುಗೆಗೆ ಪಾತ್ರ ವಾದವು.

ಈ ಕಾರ್ಯಕ್ರಮಗಳಲ್ಲಿ ಮಾನ್ಯ ಸಚಿವರುಗಳು, ಲೋಕಸಭಾ ಸದಸ್ಯರುಗಳು, ಶಾಸಕರುಗಳು, ವಿವಿದ ಇಲಾಖೆ ಅಧಿಕಾರಿಗಳು, ಗಣ್ಯರುಗಳು, ಶಿಕ್ಷಣಾಸಕ್ತರುಗಳು, ದಾನಿಗಳು ಮುಂತಾದವುಗಳರೆಲ್ಲರೂ ಸಕ್ರಿಯವಾಗಿ ಭಾಗವಹಿಸಿರುವುದಲ್ಲದೆ ಅವರೆಲ್ಲರು ಈ ಜಾಂಬೂರೇಟ್‌ನ ಮಹತ್ವದ ಬಗ್ಗೆ ಅರಿತು ಈ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿಯ ಕಾರ್ಯಕ್ರಮ ಮತು ಚಟುವಟಿಕೆಗಳನ್ನು ಎಲ್ಲಾ ಶಾಲಾ / ಕಾಲೇಜು ಹಂತಗಳಲ್ಲಿ ಸಮರ್ಥವಾಗಿ ಮತ್ತು ಸಮರ್ಪಕವಾಗಿ ನಿರ್ವಹಿಸುವಲ್ಲಿ ಅವರುಗಳೆಲ್ಲರೂ ಆಧ್ಯಕ್ರಮವಹಿಸುವುದಾಗಿ ತಿಳಿಸಿರುವುದು ಹರ್ಷದಾಯಕ.

ಈ ಜಾಂಬೂರೇಟ್ ಕೇವಲ ವಿದ್ಯಾರ್ಥಿಗಳ ಕೂಟ ಆಗಿರದೆ, ಅವರುಗಳು ಹೋದಲೆಲ್ಲಾ, ಕಂಡಲ್ಲೆಲ್ಲಾ ಕಲಿಯುವ, ಖುಷಿ ಪಡುವ ಮತ್ತು ತಮ್ಮ ಜ್ಞಾನ, ಕೌಶಲ್ಯತೆ ಮತ್ತು ಮನೋಭಾವನೆಗಳನ್ನು ವೃದ್ಧಿಸಿಕೊಳ್ಳುವಲ್ಲಿ ಹಲವಾರು ಅವಕಾಶ ಕಲ್ಪಿಸಿ ಕೊಡುವಲ್ಲಿ ಶ್ರಮಿಸಿದ ಜಿಲ್ಲಾ ಪಂಚಾಯತ್ ಬೆಳಗಾವಿ ಒಳಗೊಂಡಂತೆ ಸರ್ವರಿಗೂ ಅಭಿನಂದಿಸುತ್ತೇನೆ.

ಈ ಯಶಸ್ವಿ ಜಾಂಬೂರೇಟ್ ನಿರ್ವಹಣೆಯಲ್ಲಿ ಮಾನ್ಯ ಶ್ರೀ ಪಿ.ಜಿ.ಆರ್ ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಮತ್ತು ಶ್ರೀ ಗಜಾನನ ಮನ್ನಿಕೇರಿ, ಜಿಲ್ಲಾ ಮುಖ್ಯ ಆಯುಕ್ತರು ಬೆಳಗಾವಿ ರವರ ಪಾತ್ರ ಶ್ಲಾಘನೀಯ,

ಮುಂದೇನು.....?

* ಈ ಜಾಂಬೂರೇಟ್‌ನಲ್ಲಿ ಪಡೆದ ಅನುಭವಗಳನ್ನು, ದೊರೆತ ಪ್ರೋತ್ಸಾಹಗಳನ್ನು ವಿದ್ಯಾರ್ಥಿಗಳು, ಸ್ಕೌಟರ್/ಗೈಡರ್ಸ್‌ಗಳು ಇತರೆ ಸ್ಕೌಟ್ಸ್ ಗೈಡ್ಸ್ ನವರುಗಳು ಇದನ್ನು ಬರಿ ಸವಿನೆನಪಾಗಿ ಉಳಿಸಿ ಕೊಳ್ಳದೇ ಅದರ ಸವಿಯನ್ನು ತಮ್ಮ ತಮ್ಮ ಬದುಕಿನಲ್ಲಿ, ಸಂಸ್ಥೆಗಳಲ್ಲಿ ಕಾರ್ಯಗತ ಗೊಳಿಸುತ್ತಾ ಮುಂದುವರಿಸುವುದು ಅತ್ಯಗತ್ಯ. ವಿದ್ಯಾರ್ಥಿಗಳು ತಮ್ಮ ಸಂಸ್ಥೆಯ ಇತರೆ ಸಹಪಾಠಿಗಳೊಂದಿಗೆ ತಮ್ಮ ಅನುಭವನ್ನು ಹಂಚಿಕೊಂಡು ಅವರುಗಳು ಮುಂದೆ ಸಕ್ರೀಯವಾಗಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ನಲ್ಲಿ ಭಾಗವಹಿಸಲು ಪ್ರೇರೆಪಿಸುವುದು.

* ಸ್ಕೌಟರ್ಸ್/ಗೈಡರ್ಸ್‌ಗಳು ಇತರೆ ಸ್ಕೌಟ್ಸ್–ಗೈಡ್ಸ್‌ನವರು ತಮ್ಮ ಅನುಭವಗಳನ್ನು ಬಳಸಿಕೊಂಡು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಎಲ್ಲಾ ಹಂತಗಳಲ್ಲೂ ವೃದ್ಧಿಸುವಲ್ಲಿ ಕ್ರಮವಹಿಸುವುದು.

* ಸ್ಕೌಟರ್/ಗೈಡರ್ಸ್‌ಗಳು ಈ ಜಾಂಬೂರೇಟ್‌ನಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳೆಲ್ಲರೊಂದಿಗೆ ಸಭೆ ನಡೆಸುತ್ತಾ ಅವರುಗಳು ಇನ್ನೂ ಹೆಚ್ಚಿನ ಪ್ರಾವೀಣ್ಯತೆ ಹೊಂದುವಲ್ಲಿ ಮತ್ತು ಇತರೆ ವಿದ್ಯಾರ್ಥಿಗಳಿಗೆ ಆದರ್ಶ ಪ್ರಾಯರಾಗುವಲ್ಲಿ ಮಾರ್ಗದರ್ಶನ ನೀಡಿ ಸ್ಕೌಟ್ಸ್ ಗೈಡ್ಸ್ ಚಳುವಳಿಯ ಅಭಿವೃದ್ಧಿಗೆ ಪ್ರೋತ್ಸಾಹಿಸುವುದು.

*ಇಂತಹ ವಿಶೇಷ ಕಾರ್ಯಕ್ರಮಗಳ ಯಶಸ್ವಿ ನಿರ್ವಹಣೆಗೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಲಹೆ ಸಹಕಾರ ನೀಡಿದವರೆಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತಾ, ಅವರುಗಳು ತಮ್ಮನ್ನು ಇನ್ನೂ ಹೆಚ್ಚು ಈ ಚಳುವಳಿಯಲ್ಲಿ ತೊಡಗಿಸಿಕೊಂಡು ಪ್ರೋತ್ಸಾಹಿಸುವುಲ್ಲಿ ಅನುವು ಮಾಡಿಕೊಡುವುದು.

ಒಟ್ಟಿನಲ್ಲಿ ಡಿಸೆಂಬರ್ 2025 ಮತ್ತು ಜನವರಿ 2026ರಲ್ಲಿ ಬಹಳಷ್ಟು ಸ್ಕೌಟ್ಸ ಗೈಡ್ಸ್ ತರಬೇತಿಗಳು, ಚಟುವಟಿಕೆಗಳು, ಕಾರ್ಯಕ್ರಮಗಳು, ಎಲ್ಲಾ ಹಂತಗಳಲ್ಲೂ ಯಶಸ್ವಿಯಾಗಿ ನಿರ್ವಹಣೆಯಾಗುವಲ್ಲಿ ಮತ್ತು ಇದಕ್ಕೆ ಕಳಸ ಪ್ರಾಯವಾಗಿ ಈ 29ನೇ ಕರ್ನಾಟಕ ರಾಜ್ಯ ಸ್ಕೌಟ್ಸ್ – ಗೈಡ್ಸ್ ಜಾಂಬೋರೆಟ್ ಬೆಳಗಾವಿಯಲ್ಲಿ ಆಗುವಲ್ಲಿ ಸಹಕರಿಸಿ ಪ್ರೋತ್ಸಾಹಿಸಿದ ಸರ್ವರಿಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಸಂಸ್ಥೆಯ ಪರವಾಗಿ ಅನಂತಾನಂತ ಗೌರವವನ್ನು ಈ ಮೂಲಕ ಸಲ್ಲಿಸಲು ಹರ್ಷಿಸುತ್ತೇನೆ.

ಹೊಸ ವರ್ಷದ ಶುಭಾಶಯಗಳೊಂದಿಗೆ, ಸ್ಕೌಟ್ಸ್ ಮತ್ತು ಗೈಡ್ಸ್ ವಂದನೆಗಳು,

(ಕೆ. ಗಂಗಪ್ಪಗೌಡ)
ಸಂಪಾದಕರು ಹಾಗೂ ರಾಜ್ಯ ಕಾರ್ಯದರ್ಶಿ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ





ದಿನಾಂಕ 26.12.2025 ರಿಂದ 01.01.2026ರವರೆಗೆ ಕುಂದಾನಗರಿ ಬೆಳಗಾವಿಯಲ್ಲಿ ಸ್ಕೌಟ್ಸ್–ಗೈಡ್ಸ್‌ನ ರಾಜ್ಯಮಟ್ಟದ 29ನೇ ಜಾಂಬೋರೇಟ್‌ನ್ನು ಆಯೋಜಿಸಲಾಗಿತ್ತು. 2004ರಲ್ಲಿ ಇದೇ ಬೆಳಗಾವಿಯಲ್ಲಿ ರಾಜ್ಯ ಜಾಂಬೋರೇಟ್ ಆಯೋಜಿಸಲಾಗಿದ್ದು, 21 ವರ್ಷಗಳ ನಂತರ ಪುನಃ ಬೆಳಗಾವಿ ಜಿಲ್ಲೆಯು ಎರಡನೇ ಬಾರಿಗೆ ಜಾಂಬೋರೇಟ್‌ನ ಆಯೋಜನೆಯ ಆತಿಥ್ಯ ವಹಿಸಿಕೊಂಡಿದ್ದು ಒಂದು ವಿಶೇಷವೇ ಆಗಿದೆ. ಈ ಬಾರಿಯ ಜಾಂಬೋರೇಟ್ ನಡೆದದ್ದು ಬೆಳಗಾವಿಯಿಂದ ಸುಮಾರು 20 ಕಿಲೋ ಮೀಟರ್ ದೂರದಲ್ಲಿರುವ "ಹೊನಗ" ಎಂಬ ಗ್ರಾಮದ ಫಿನಿಕ್ಸ್ ಪಬ್ಲಿಕ್ ಶಾಲೆಯ ಬೃಹತ್ತಾದ ಆವರಣದಲ್ಲಿ. ಇದು ನಗರದ ಜನಜಂಗುಳಿಯಿಂದ ದೂರವಾಗಿದ್ದು ಜಾಂಬೋರೇಟ್‌ನ ಚಟುವಟಿಕೆಗಳಿಗೆ ಸೂಕ್ತ ತಾಣವಾಗಿತ್ತು. ಸ್ಕೌಟ್ – ಗೈಡ್‌ಗಳಿಗೆ ತಂಗಲು ಗುಡಾರಗಳು, ಅಡುಗೆ ಹಾಗೂ ಊಟದ ಮನೆ, ಸಭಾಂಗಣ, ಸಾಮಗ್ರಿ ಮಳಿಗೆ, ಸಾಹಸ ಚಟುವಟಿಕೆಗಳು, ವಸ್ತು ಪ್ರದರ್ಶನ, ಸ್ಕೌಟ್ ಕೌಶಲ್ಯ ಪ್ರದರ್ಶನ, ಸುಸ್ಥಿರ ಅಭಿವೃದ್ಧಿ ಗುರಿಗಳು, ಯುವ ಆಪದ್‌ಮಿತ್ರ ಮತ್ತು ಆಸ್ಪತ್ರೆ ಮುಂತಾದವುಗಳಿಗೆಲ್ಲಾ ಈ ಆವರಣದಲ್ಲಿ ಸ್ಥಳಾವಕಾಶ ಒದಗಿಸಲಾಗಿತ್ತು. ನೆಹರು ತಾರಾಲಯದ ನಕ್ಷತ್ರ ವೀಕ್ಷಣೆಯ ಗುಮ್ಮಟ ಸಹ ಇದೇ ಆವರಣದಲ್ಲಿ ನಿರ್ಮಿಸಲಾಗಿತ್ತು.



ದಿನಾಂಕ 26.12.2025 ರಿಂದ ಸ್ಕೌಟ್ ಮತ್ತು ಗೈಡ್ಸ್‌ಗಳು ತಮ್ಮ ದಳನಾಯಕ – ನಾಯಕಿಯರೊಂದಿಗೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿ ನೊಂದಣಿ ಮಾಡಿಕೊಂಡರು. ಅವರುಗಳಿಗೆ ಗುಡಾರಗಳಲ್ಲಿ ವಸತಿ ಕಲ್ಪಿಸಲಾಯಿತು. ದಳನಾಯಕ–ನಾಯಕಿಯರು ಹಾಗೂ ಉಳಿದ ವಯಸ್ಕ ನಾಯಕರುಗಳಿಗೆ ಫೀನಿಕ್ಸ್ ಶಾಲೆಯಲ್ಲಿ ವಸತಿ ಕಲ್ಪಿಸಲಾಯಿತು. ಎಲ್ಲಾ ಸ್ಕೌಟ್ ಗೈಡ್‌ಗಳಿಗೆ ಹಾಗೂ ವಯಸ್ಕ ನಾಯಕರುಗಳಿಗೆ ಗುರುತಿನ ಕಾರ್ಡ್ ವಿತರಿಸಲಾಯಿತು. ಅಂದು ಸಂಜೆ ತಂಡನಾಯಕ–ನಾಯಕಿಯರ (Contigent Leader) ಮತ್ತು ಸಿಬ್ಬಂದಿ ವರ್ಗದವರ ಸಭೆ ನಡೆಸಿ ಜಾಂಬೋರೇಟ್‌ನ ದಿನ ನಿತ್ಯದ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಲಾಯಿತು. ಅಂದು ರಾತ್ರಿ ಬೆಳಗಾವಿಯ ಸ್ಥಳೀಯ ಸಾಂಸ್ಕೃತಿಕ ಕಾರ್ಯಕ್ರಮ ಪ್ರದರ್ಶಿಸಲಾಯಿತು.



ನೊಂದಾಣಿ ನಂತರ ಸ್ಕೌಟ್–ಗೈಡ್‌ಗಳನ್ನು ವಿವಿಧ ಉಪಶಿಬಿರಗಳಾಗಿ ವಿಂಗಡಿಸಲಾಯಿತು. ಸ್ಕೌಟ್ ವಿಭಾಗದಲ್ಲಿ 4 ಉಪಶಿಬಿರಗಳು ಮತ್ತು ಗೈಡ್ ವಿಭಾಗದಲ್ಲಿ 4 ಉಪಶಿಬಿರಗಳಾಗಿ ಮಾಡಲಾಯಿತು. ಅವುಗಳ ವಿವರ ಕೆಳಕಂಡಂತಿದೆ..

ಸ್ಕೌಟ್ ವಿಭಾಗದ ಉಪಶಿಬಿರಗಳು

ಡಿ.ಸಿ.ಪಾವಟಿ ಉಪಶಿಬಿರ

ಕ್ರ.ಸಂ	ಜಿಲ್ಲೆಯ ಹೆಸರು	ಸ್ಕೌಟ್ಸ್	ಸ್ಕೌಟ್ ಮಾಸ್ಟರ್	ಲೇಡಿ ಸ್ಕೌಟ್ ಮಾಸ್ಟರ್	ಒಟ್ಟು	
1	ಬೆಂಗಳೂರು ದಕ್ಷಿಣ	119	18	0	137	
2	ಬಾಗಲಕೋಟೆ	81	14	0	95	
3	ಗದಗ	86	6	0	92	
4	ಬಳ್ಳಾರಿ	82	8	0	90	
5	ಶಿವಮೊಗ್ಗ	47	4	0	51	
6	ಉಡುಪಿ	46	3	2	51	
7	ಯಾದಗಿರಿ	28	4		32	
8	ಚಾಮರಾಜನಗರ	16	3	0	19	
9	ಕೊಡಗು	7	1	0	8	
		512	61	2	575	
		63				
		575				

SUB CAMP STAFF - 4 MEMBERS		
SUB CAMP CHIEF:	ನಂಜುಡಪ್ಪ ಎಲ್.ಟಿ (ಎಸ್)	ಕೋಲಾರ
DEPUTY CHIEF:	ಹೆಚ್.ವಿ ಕೃಷ್ಣಯ್ಯ	ರಾಮನಗರ
STAFF MEMBER:	ರಾಮಪ್ರಸಾದ್	ಚಿಕ್ಕಬಳ್ಳಾಪುರ
STAFF MEMBER:	ಮಹಾದೇವಯ್ಯ	ಮೈಸೂರು

ಡಿ.ಎಸ್.ಕರ್ಕಿ ಉಪಶಿಬಿರ

ಕ್ರ.ಸಂ	ಜಿಲ್ಲೆಯ ಹೆಸರು	ಸ್ಕೌಟ್ಸ್	ಸ್ಕೌ.ಮಾ.	ಲೇ.ಸ್ಕೌ.ಮಾ	ಒಟ್ಟು
1	ಬೆಂಗಳೂರು ಗ್ರಾಮಂತರ	16	1		17
2	ಬಿ.ಬಿ.ಎಂ.ಪಿ.	20	8		28
3	ಚಿಕ್ಕಬಳ್ಳಾಪುರ	38	6		44
4	ಹಾವೇರಿ	48	6		54
5	ಕೊಪ್ಪಳ	59	7		66
6	ರಾಯಚೂರು	66	8	2	76
7	ಧಾರವಾಡ	80	9		89
8	ದಕ್ಷಿಣ ಕನ್ನಡ	98	3	3	104
9	ಬೆಂಗಳೂರು ಉತ್ತರ	87	11	8	106
		512	59	13	584
	TOTAL TENT	72			
		584			

SUB CAMP STAFF - 4 MEMBERS		
SUB CAMP CHIEF: -	ಡಾ. ನಾರಾಯಣಸ್ವಾಮಿ ಎಲ್.ಟಿ.(ಎಸ್)	ಕೋಲಾರ ಜಿಲ್ಲೆ
DEPUTY CHIEF: -	ನನ್ನೇಶ್	ಮೈಸೂರು ಜಿಲ್ಲೆ
STAFF MEMBER: -	ಮಂಜುನಾಥ್ ನಾಯಕ್	ಸಿರಸಿ
STAFF MEMBER: -	ಶ್ರೀನಿವಾಸ ಜಿ ಜೋಷಿ	ವಿಜಯನಗರ ಜಿಲ್ಲೆ

ಮಿರ್ಜಿ ಅನ್ನಾರಾಯ್ ಉಪಶಿಬಿರ

ಕ್ರ.ಸಂ	ಜಿಲ್ಲೆಯ ಹೆಸರು	ಸ್ಕೌಟ್ಸ್	ಸ್ಕೌ. ಮಾ.	ಲೇ.ಸ್ಕೌ ಮಾ		TOT
1	ದಾವಣಗೆರೆ ಜಿಲ್ಲೆ	90	5	3		98
2	ಚಿತ್ರದುರ್ಗ ಜಿಲ್ಲೆ	87	6			93
3	ವಿಜಯಪುರ ಜಿಲ್ಲೆ	82	7			89
4	ಚಿಕ್ಕಮಗಳೂರು ಜಿಲ್ಲೆ	79	7			86
5	ಮೈಸೂರು ಜಿಲ್ಲೆ	54	5			59
6	ಕಾರವಾರ ಜಿಲ್ಲೆ	50	5			55
7	ಬೆಂಗಳೂರು ಪೂರ್ವ	32	4			36
8	ಕಲಬುರ್ಗಿ ಜಿಲ್ಲೆ	52	5	1		58
9	ಮಧುಗಿರಿ ಜಿಲ್ಲೆ	12	1	1	0	14
		538	45	5	4	588
		50				
		588				

SUB CAMP STAFF - 4 MEMBERS		
SUB CAMP CHIEF:	ನಬಿ ಭಗವಾನ ಎ.ಎಲ್.ಟಿ. (ಸ್ಕೌ)	ಬೀದರ್ ಜಿಲ್ಲೆ
DEPUTY CHIEF:	ಎಸ್.ಬಿ.ಭಜಂತ್ರಿ ಎ.ಎಲ್.ಟಿ. (ಸ್ಕೌ)	ವಿಜಯಪುರ ಜಿಲ್ಲೆ
STAFF MEMBER:	ಸೈಯದ್ ಸಾಧಿಕ್	ಚಿಕ್ಕಮಗಳೂರು ಜಿಲ್ಲೆ
STAFF MEMBER:	ಬೀರಪ್ಪ ಕಡ್ಲಿಮಟ್ಟಿ	ಕೊಪ್ಪಳ ಜಿಲ್ಲೆ

ಬೆಟಗೇರಿ ಕೃಷ್ಣಶರ್ಮ ಉಪಶಿಬಿರ

ಕ್ರ.ಸಂ	ಜಿಲ್ಲೆಯ ಹೆಸರು	ಸ್ಕೌಟ್ಸ್	ಸ್ಕೌ. ಮಾ.	ಲೇ.ಸ್ಕೌ.ಮಾ	ಒಟ್ಟು
1	ಬೆಳಗಾವಿ ಜಿಲ್ಲೆ	300	31		331
2	ವಿಜಯನಗರ ಜಿಲ್ಲೆ	47	5		52
3	ತುಮಕೂರು ಜಿಲ್ಲೆ	36	3		39
4	ಬೀದರ್ ಜಿಲ್ಲೆ	33	8		41
5	ಹಾಸನ ಜಿಲ್ಲೆ	31	2	1	34
6	ಕೋಲಾರ	22	2		24
7	ರಾಮನಗರ ಜಿಲ್ಲೆ	17	4		21
8	ಶಿರಸಿ ಜಿಲ್ಲೆ	31	4		35
		517	59	1	577
		60			
		577			

SUB CAMP STAFF - 4 MEMBERS		
SUB CAMP CHIEF:	ನಾಗಾರಾಜು ಎಲ್‌ಟಿಎಸ್	ಬಳ್ಳಾರಿ ಜಿಲ್ಲೆ
DEPUTY CHIEF:	ಮಹೇಶ್ ಸಿ.ಎನ್. ಎಲ್‌ಟಿಎಸ್	ಚಿತ್ರದುರ್ಗ ಜಿಲ್ಲೆ
STAFF MEMBER:	ಸಿ. ಎಂ. ಕೆಂಗರ್	ಧಾರವಾಡ ಜಿಲ್ಲೆ
STAFF MEMBER:	ಶರಣಪ್ಪ	ಕೊಪ್ಪಳ ಜಿಲ್ಲೆ

ಗೈಡ್ ವಿಭಾಗದ ಉಪಶಿಬಿರಗಳು

ಮಲಪ್ರಭಾ ಉಪಶಿಬಿರ

S.N.	NAME OF THE DISTRICT	GUIDES	GC	CMT	TOT
1	ಬೆಂಗಳೂರು ದಕ್ಷಿಣ	85	14	1	100
2	ಬೆಂಗಳೂರು	77	6	1	84
3	ಗಧಗ	64	5	1	70
4	ಕೊಪ್ಪಳ	61	5	1	67
5	ದಕ್ಷಿಣ ಕನ್ನಡ	37	3	0	40
6	ವಿಜಯನಗರ	36	2	1	39
7	ಹಾಸನ	32	2	1	35
8	ಯಾದಗಿರಿ	30	3	1	34
9	ಬೆಂಗಳೂರು ಗ್ರಾಮಂತರ	10	1	0	11
		432	41	7	480
		48			
		480			

SUB CAMP STAFF - 4 MEMBERS

SUB CAMP CHIEF:	ಇಂದಿರ ಬರಂಗಿ	ಹಾವೇರಿ ಜಿಲ್ಲೆ
DEPUTY CHIEF:	ಜಯ ಚಪ್ಪರಮನೆ	ಮಂಡ್ಯ ಜಿಲ್ಲೆ
STAFF MEMBER:	ಗೀತಾ ಕಮ್ಮಾರ್	ಕೊಪ್ಪಳ ಜಿಲ್ಲೆ
STAFF MEMBER:	ಅಶ್ವಿನಿ ನೇತ್ರಿ	ವಿಜಯಪುರ ಜಿಲ್ಲೆ

ಘಟಪ್ರಭಾ ಉಪಶಿಬಿರ

S.N.	NAME OF THE DISTRICT	GUIDES	GC	TOT
1	ಧಾರವಡ ಜಿಲ್ಲೆ	80	7	88
2	ಹಾವೇರಿ ಜಿಲ್ಲೆ	64	6	71
3	ರಾಯಚೂರು ಜಿಲ್ಲೆ	57	6	64
4	ಉಡುಪಿ ಜಿಲ್ಲೆ	57	4	62
5	ಬೀದರ್ ಜಿಲ್ಲೆ	48	5	53
6	ಬಳ್ಳಾರಿ ಜಿಲ್ಲೆ	45	4	50
7	ತುಮಕೂರು ಜಿಲ್ಲೆ	30	4	35
8	ಬಿ.ಬಿ.ಎಂ.ಪಿ. ಜಿಲ್ಲೆ	20	2	23
9	ಕೊಡಗು	16	1	18
		417	39	464
		47		
		464		

SUB CAMP STAFF - 4 MEMBERS

SUB CAMP CHIEF:	ಅನ್ನಪೂರ್ಣ ಎಸ್ ಕಟಗಿ ಎ.ಎಲ್.ಟಿ(ಗೈ)	ಹಾವೇರಿ ಜಿಲ್ಲೆ
DEPUTY CHIEF:	ಸುವರ್ಣ ಹೆಗ್ಡೆ	ಹಾವೇರಿ ಜಿಲ್ಲೆ
STAFF MEMBER:	ವಿಜೇತ ಸಿ.ವೈ	ದಾವಣಗೆರೆ
STAFF MEMBER:	ಮಲ್ಲಮ್ಮ	ಚಿತ್ರದುರ್ಗ ಜಿಲ್ಲೆ

ಕೃಷ್ಣ ಉಪಶಿಬಿರ

S.N.	NAME OF THE DISTRICT	GUIDES	GC	TOT
1	ಬೆಳಗಾವಿ ಜಿಲ್ಲೆ	279	29	308
2	ದಾವಣಗೆರೆ ಜಿಲ್ಲೆ	70	8	78
3	ಮಧುಗಿರಿ ಜಿಲ್ಲೆ	15	2	17
4	ಚಿಕ್ಕಬಳ್ಳಾಪುರ ಜಿಲ್ಲೆ	10	1	11
5	ಚಾಮರಾಜನಗರ ಜಿಲ್ಲೆ	8	1	9
6	ಬೆಂಗಳೂರು ಪೂರ್ವ	8	0	8
7	ರಾಮನಗರ ಜಿಲ್ಲೆ	5	1	6
8	ಕೋಲಾರ	5	1	6
9	ಮಂಡ್ಯ	0	0	0
		400	43	443
		45		
		445		

SUB CAMP STAFF - 4 MEMBERS

SUB CAMP CHIEF:	ಶೋಭಾ ಬಿ ಪಾಟೀಲ್	ಹಾವೇರಿ ಜಿಲ್ಲೆ
DEPUTY CHIEF:	ಸುಧಾ ಜಿ	ಕಾರವಾರ ಜಿಲ್ಲೆ
STAFF MEMBER:	ಪಾರ್ವತಿ ಬೇವಿನ ಮರದ	ಗದಗ ಜಿಲ್ಲೆ
STAFF MEMBER: -	ದೀಪಿಕಾ	ಚಾಮರಾಜನಗರ ಜಿಲ್ಲೆ

ಹಿರಣ್ಯಕೇಶಿ ಉಪಶಿಬಿರ

S.N.	NAME OF THE DISTRICT	GUIDES	GC	TOT
1	ಬೆಳಗಾವಿ ಜಿಲ್ಲೆ	79	11	90
2	ದಾವಣಗೆರೆ ಜಿಲ್ಲೆ	74	7	81
3	ಮಧುಗಿರಿ ಜಿಲ್ಲೆ	66	4	70
4	ಚಿಕ್ಕಬಳ್ಳಾಪುರ ಜಿಲ್ಲೆ	54	7	61
5	ಚಾಮರಾಜನಗರ ಜಿಲ್ಲೆ	56	8	64
6	ಬೆಂಗಳೂರು ಪೂರ್ವ	31	4	35
7	ರಾಮನಗರ ಜಿಲ್ಲೆ	23	3	26
8	ಕೋಲಾರ	21	3	24
9	ಮಂಡ್ಯ	19	3	22
		423	50	473
		47		
		470		

SUB CAMP STAFF - 4 MEMBERS

SUB CAMP CHIEF:	ಅಮಲೋರ್ಪವ ಮೇರಿ ಎ.ಎಲ್.ಟಿ.	ಬೆಂಗಳೂರು
DEPUTY CHIEF:	ಹನುಮಕ್ಕ	ಚಿತ್ರದುರ್ಗ
STAFF MEMBER:	ಎಸ್. ಎಂ. ಹಿರೇಮಠ	ಗದಗ
STAFF MEMBER:	ರೂಪಾಂಜಲಿ ಓಣಿಮಣಿ	ಹಾವೇರಿ

ಜಾಂಬೋರೇಟ್‌ನ ಉದ್ಘಾಟನೆ



ದಿನಾಂಕ 27.12.2025ರಂದು ಜಾಂಬೋರೇಟ್‌ನ ಉದ್ಘಾಟನಾ ಸಮಾರಂಭ ಏರ್ಪಡಿಸಲಾಗಿತ್ತು. ಈ ಸಮಾರಂಭಕ್ಕೆ ಪೂರ್ವಭಾವಿಯಾಗಿ ಕಾರ್ಯಕ್ರಮದ ಅಂಗವಾದ ಅತಿಥಿಗಳ ಸ್ವಾಗತ, ಪ್ರಾರ್ಥನೆ, ಧ್ವಜಾರೋಹಣ, ಗೌರವಂದನೆ ಸ್ವೀಕಾರ, ಪಥಸಂಚಲನ ಮುಂತಾದವುಗಳ ಬಗ್ಗೆ ತಾಲೀಮು ನಡೆಯಿತು. ಶ್ರೀ ಎ.ಎಸ್ ಮಧುಸೂದನ್ ಅವಾಲ, ಅಪರ ಅಂತರಾಷ್ಟ್ರೀಯ ಆಯುಕ್ತರು, ನವದೆಹಲಿ, ಶ್ರೀ ರಾಜೇಶ್ ಅವಲಕ್ಕಿ, ರೋವರ್ ಸ್ಕೌಟ್ ನಾಯಕ ಶಿವಮೊಗ್ಗ, ಶ್ರೀ ಜಿಮ್ಮಿ ಸಿಕ್ವೇರಾ, ಜಿಲ್ಲಾ ಆಯುಕ್ತರು (ಸ್ಕೌಟ್), ಕೊಡಗು, ಇವರುಗಳ ನೇತೃತ್ವದಲ್ಲಿ ಸಿಬ್ಬಂದಿಯವರ ಸಹಕಾರದೊಂದಿಗೆ ಈ ತಾಲೀಮು ನಡೆಯಿತು.



ಸಂಜೆ ಸುಮಾರು 5:00 ಘಂಟೆ ವೇಳೆಗೆ ಉದ್ಘಾಟನಾ ಕಾರ್ಯಕ್ರಮ ಪ್ರಾರಂಭವಾಯಿತು. ಶ್ರೀ ಯು ಟಿ ಖಾದರ್, ಮಾನ್ಯ ಸಭಾಪತಿಗಳು, ವಿಧಾನಸಭೆ, ಕರ್ನಾಟಕ ಸರ್ಕಾರ ಇವರು ಉದ್ಘಾಟಕರಾಗಿ ಆಗಮಿಸಿದ್ದರು.



ಶ್ರೀ ಸತೀಶ ಲ. ಜಾರಕಿಹೊಳಿ, ಮಾನ್ಯ ಲೋಕೋಪಯೋಗಿ ಸಚಿವರು, ಕರ್ನಾಟಕ ಸರಕಾರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು, ಬೆಳಗಾವಿ ಇವರು ಅಧ್ಯಕ್ಷತೆ ವಹಿಸಿದ್ದರು . ಶ್ರೀ ಬಸವರಾಜ್ ಹೊರಟ್ಟಿ, ಮಾನ್ಯ ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್ ಬೆಂಗಳೂರು, ಶ್ರೀ ಮಧು ಬಂಗಾರಪ್ಪ, ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತೆ ಇಲಾಖೆ ಸಚಿವರು, ಕರ್ನಾಟಕ ಸರ್ಕಾರ, ಶ್ರೀ ಜಗದೀಶ್ ಶೆಟ್ಟರ್, ಮಾನ್ಯ ಮಾಜಿ ಮುಖ್ಯಮಂತ್ರಿಗಳು ಹಾಗೂ ಲೋಕಸಭಾ ಸದಸ್ಯರು, ಬೆಳಗಾವಿ, ಡಾ. ಕೆ.ಕೆ.ಖಂಡೇಲ್‌ವಾಲ್, ಮಾನ್ಯ ಮುಖ್ಯ ರಾಷ್ಟ್ರೀಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ನವದೆಹಲಿ, ಶ್ರೀ ಪಿ.ಜಿ.ಆರ್ ಸಿಂಧ್ಯ, ಮಾಜಿ ಸಚಿವರು ಹಾಗೂ ರಾಜ್ಯ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ, ಶ್ರೀ ಕೊಂಡಜ್ಜಿ ಬ. ಷಣುಖಪ್ಪ, ಉಪಾಧ್ಯಕ್ಷರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ, ಮುಕ್ತಿಮಠದ ಶ್ರೀಶ್ರೀಶ್ರೀ ಸೋಮೇಶ್ವರ ಸ್ವಾಮಿಗಳು, ಶ್ರೀವಿವೇಕ್‌ರಾವ್ ವಿ. ಪಾಟೀಲ್, ಮಾನ್ಯ ಅಧ್ಯಕ್ಷರು ಫೀನಿಕ್ಸ್ ಪಬ್ಲಿಕ್ ಶಾಲೆ ಹಾಗೂ ಮಾನ್ಯ ವಿಧಾನಪರಿಷತ್ ಸದಸ್ಯರು, ಇವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಜಾಂಬೋರೇಟ್‌ನ ವ್ಯವಸ್ಥೆ ಬಗ್ಗೆ ಹರ್ಷ ವ್ಯಕ್ತಪಡಿಸಿದರು. ಶ್ರೀ ಎಮ್ ಎ ಖಾಲಿದ್, ರಾಜ್ಯ ಆಯುಕ್ತರು (ಸ್ಕೌಟ್), ಶ್ರೀಮತಿ ಗೀತಾ ನಟರಾಜ್ ರಾಜ್ಯ ಆಯುಕ್ತರು (ಗೈಡ್), ಶ್ರೀ ಸಿ.ಎಸ್ ರೆಡ್ಡಿ, ರಾಜ್ಯ ಆಯುಕ್ತರು (ಸ್ಕೌಟ್) ವಯಸ್ಕ ಸಂಪನ್ಮೂಲ, ಶ್ರೀಮತಿ ಬಿ.ಏ ರಾಮಲತಾ, ರಾಜ್ಯ ಆಯುಕ್ತರು (ಗೈಡ್) ವಯಸ್ಕ ಸಂಪನ್ಮೂಲ, ಶ್ರೀ ಕೆ.ಗಂಗಪ್ಪ ಗೌಡ, ರಾಜ್ಯ ಕಾರ್ಯದರ್ಶಿ, ಶ್ರೀ ಟಿ ಪ್ರಭಾಕರ್, ರಾಜ್ಯ ಕೋಶಾಧಿಕಾರಿ, ಶ್ರೀ ಗಜಾನನ ಮನ್ನಿಕೇರಿ, ಜಿಲ್ಲಾ ಮುಖ್ಯ ಆಯುಕ್ತರು ಹಾಗೂ ಸಹಾಯಕ ರಾಜ್ಯ ಆಯುಕ್ತರು ಬೆಳಗಾವಿ ವಿಭಾಗ ಹಾಗೂ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಮುಖ್ಯ ಅತಿಥಿಗಳು ಆಗಮಿಸಿದಾಗ ಅವರನ್ನು ಆತ್ಮೀಯವಾಗಿ ಬರಮಾಡಿಕೊಳ್ಳಲಾಯಿತು. ಅತಿಥಿಗಳೆಲ್ಲರೂ ವೇದಿಕೆಯನ್ನು ಅಲಂಕರಿಸಿದ ನಂತರ ಸ್ಕೌಟ್–ಗೈಡ್ ಪ್ರಾರ್ಥನೆಯನ್ನು ಮಾಡಲಾಯಿತು. ನಂತರ ರಾಷ್ಟ್ರ ಧ್ವಜ, ಸ್ಕೌಟ್ ವಿಶ್ವಧ್ವಜ, ಗೈಡ್ ವಿಶ್ವಧ್ವಜ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಧ್ವಜ, ಜಾಂಬೋರೇಟ್ ಧ್ವಜ ಹಾಗೂ ಜಿಲ್ಲಾ ಧ್ವಜಗಳು ಇವುಗಳ ಆರೋಹಣವನ್ನು ವಿಧಿವತ್ತಾಗಿ ನಡೆಸಲಾಯಿತು. ನಂತರ ಧ್ವಜ ಗೀತೆ ಹಾಡಲಾಯಿತು. ಆನಂತರ ಅತಿಥಿಗಳು ತೆರೆದ ವಾಹನದಲ್ಲಿ ವೀಕ್ಷಣೆಗೆ ತೆರಳಿ ವೇದಿಕೆಗೆ ಆಗಮಿಸಿದರು. ನಂತರ ಜಿಲ್ಲಾವಾರು ತಂಡಗಳು ಪಥಸಂಚಲನ ನಡೆಸಿ ಗೌರವ ವಂದನೆ ಸಲ್ಲಿಸಿದರು. ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಶ್ರೀ ಗಜಾನನ ಮನ್ನಿಕೇರಿ ಇವರು ಎಲ್ಲರನ್ನು ಸ್ವಾಗತಿಸಿದರು. ಶ್ರೀ ಪಿ.ಜಿ.ಆರ್ ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಪ್ರಾಸ್ತಾವಿಕವಾಗಿ ಮಾತನಾಡಿ ಮಕ್ಕಳಲ್ಲಿ ಸೇವಾ ಮನೋಭಾವ ಮತ್ತು ಸಹಬಾಳ್ವೆ ನಾಯಕತ್ವ, ಬೆಳಸುವಲ್ಲಿ ಸ್ಕೌಟ್ ಚಳವಳಿಯ ಪಾತ್ರವನ್ನು ಒತ್ತಿ ಹೇಳಿದರು. ಇದೇ ಸಂದರ್ಭದಲ್ಲಿ ಶ್ರೀ ಯು. ಟಿ ಖಾದರ್ ರವರು ಜಾಂಬೋರೇಟ್ ಜ್ಯೋತಿಯನ್ನು ಬೆಳಗಿಸಿದರು. ಬೆಳಗಾವಿಯ ಸ್ಕೌಟ್ ಕುಮಾರ ಮಣಿಕಂಠ ಜ್ಯೋತಿಯನ್ನು ಹಿಡಿದು ಎಲ್ಲಾ ಜಿಲ್ಲಾ ಧ್ವಜಗಳ ಮುಂದೆ ಹಾದು ಬಂದ ನಂತರ ಶ್ರೀ ಗಜಾನನ ಮನ್ನಿಕೇರಿ ಹಾಗೂ ಶ್ರೀಮತಿ ಪ್ರಭಾವತಿ ಪಾಟೀಲ್‌ರವರು ಜ್ಯೋತಿಯನ್ನು ಬರಮಾಡಿಕೊಂಡರು.





ಘನತೆವೆತ್ತ ರಾಜ್ಯಪಾಲರು ಹಾಗೂ ರಾಜ್ಯ ಸಂಸ್ಥೆ ಪೋಷಕರು ಆದ ಶ್ರೀ ಥಾವರ್‌ಚಂದ್ ಗೆಹ್ಲೋಟ್ ಅವರ ಸಂದೇಶವನ್ನು ಓದಲಾಯಿತು.



ಥಾವರ್‌ಚಂದ್ ಗೆಹ್ಲೋಟ್
थावरचंद गेहलोत
THAAWARCHAND GEHLOT
Governor of Karnataka

No.GOV/KAR/MSG/542/2025

MESSAGE

I am glad to know that ***The Bharat Scouts and Guides, Karnataka*** *is celebrating the 29th Karnataka State Scouts and Guides Jamborette at Phoenix Public School, Honaga, Belagavi from 27.12.2025 to 01.01.2026, to bring together thousands of Scouts and Guides Students and Teachers from all over the State.*

The Scouts and Guides Movement plays a vital role in shaping disciplined, responsible and service-oriented citizen. Such Jamborettes provide an excellent platform for young minds to showcase their cultural talents, adventurous skills and leadership qualities, while fostering values of National integration, Brotherhood and Sisterhood, Social Service and patriotism, etc.,

I convey my best wishes to the Organizers, Volunteers and all the participating Scouts and Guides and Unit Leaders for the Grand Success of the Jamborette with a positive and unforgettable experiences. I wish the Jamborette all success and hope it will contribute greatly in developing Better World.

22.12.25

(Thaawarchand Gehlot)

Lok Bhavan, Bengaluru - 560 001 (Karnataka) Ph. 080-22254102 - 108

ಉದ್ಘಾಟನೆಯ ಅಂಗವಾಗಿ ಜಾಂಬೋರೇಟ್ ಬಲೂನ್‌ಗಳನ್ನು ಹಾರಿ ಬಿಡಲಾಯಿತು



ಇದೇ ಸಂದರ್ಭದಲ್ಲಿ ಶ್ರೀ ಎಮ್ ಎ ಖಾಲಿದ್ ರಾಜ್ಯ ಆಯುಕ್ತರು (ಸ್ಕೌಟ್) ಇವರು ಶ್ರೀ ಪಿ.ಜಿ.ಆರ್ ಸಿಂಧ್ಯರವರಿಗೆ ನೆನಪಿನ ಕಾಣಿಕೆಯನ್ನು ನೀಡಿ ಗೌರವಿಸಿದರು.




ವೇದಿಕೆ ಮೇಲಿದ್ದ ಗಣ್ಯರುಗಳು ಮಾಡಿದ ಭಾಷಣದ ವಿವರಗಳು ಕೆಳಗಿನಂತಿವೆ.



ಶ್ರೀ ಜಗದೀಶ್ ಶೆಟ್ಟರ್ , ಮಾನ್ಯ ಮಾಜಿ ಮುಖ್ಯಮಂತ್ರಿಗಳು ಮತ್ತು ಸಂಸದರು, ಬೆಳಗಾವಿ ಲೋಕಸಭೆ

"ಕಾರ್ಯಕ್ರಮದ ಮುಖ್ಯ ರೂವಾರಿಯಾಗಿರುವ ಪಿಜಿಆರ್ ಸಿಂಧ್ಯಾ ಅವರೊಂದಿಗೆ ಎಬಿವಿಪಿಯಲ್ಲಿ ಒಟ್ಟಾಗಿ ಕೆಲಸ ಮಾಡಿರುವುದನ್ನು ಸ್ಮರಿಸಿಕೊಂಡು ಈ ಸ್ಕೌಟ್ಸ್–ಗೈಡ್ಸ್ ಕಾರ್ಯಕ್ರಮದಿಂದ ವಿದ್ಯಾರ್ಥಿಗಳ ಜೀವನಕ್ಕೆ ಅನುಕೂಲವಾಗಲಿದೆ, ವಿದ್ಯಾರ್ಥಿಗಳು ಭವಿಷ್ಯದ ದಿನಗಳಲ್ಲಿ ಶಿಸ್ತುಬದ್ಧವಾಗಿ ಜೀವನ ನಡೆಸುವಂತಾಗಲು ಈ ಕಾರ್ಯಕ್ರಮದಿಂದ ಹೆಚ್ಚಿನ ಲಾಭವಾಗಲಿದೆ" ಎಂದು ತಿಳಿಸಿದರು.

ಶ್ರೀ ಬಸವರಾಜ ಹೊರಟ್ಟಿ,
ಮಾನ್ಯ ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್



"ಸ್ಕೌಟ್ ಗೈಡ್ಸ್ ಆಗುವುದು ಆದರ್ಶ ಜೀವನಕ್ಕೆ ಅನುಕೂಲ. ಭಾಗವಹಿಸಿದವರೆಲ್ಲರೂ ಜೀವನದಲ್ಲಿ ಅತೀ ಉನ್ನತ ಮಟ್ಟಕ್ಕೆ ಏರುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ತಿಳಿಸಿದರು. ಬಸವಣ್ಣನವರ ಕಾಯಕವೇ ಕೈಲಾಸ ಮಾತಿನಂತೆ ಈ ಕಾರ್ಯಕ್ರಮ ಭಾಗವಹಿಸಿದವರಿಗೆಲ್ಲಾ ಆದರ್ಶಪ್ರಾಯವಾಗಲಿ ಎಂದು ಹಾರೈಸಿ, ವಿದ್ಯಾರ್ಥಿಗಳು ದೇಶಪ್ರೇಮ ಬೆಳೆಸಿಕೊಂಡು ದೇಶಭಕ್ತರಾಗಿ, ಮುಂದಿನ ದಿನಗಳಲ್ಲಿ ಇವರೆಲ್ಲರೂ ಈ ದೇಶದ ಶ್ರೇಷ್ಠ ನಾಗರಿಕರಾಗಿ ಹೊರಹೊಮ್ಮುವ ನಾಗರಿಕರಾಗಬೇಕು" ಎಂದು ಹಾರೈಸಿದರು.



ಶ್ರೀ ಯು.ಟಿ ಖಾದರ್, ಮಾನ್ಯ ಸ್ಪೀಕರ್, ಕರ್ನಾಟಕ ವಿಧಾನಸಭೆ

"ಬಲಿಷ್ಠ ರಾಷ್ಟ್ರನಿರ್ಮಾಣ ಸ್ಕೌಟ್ಸ್–ಗೈಡ್ಸ್‌ಗಳಿಂದ ಸಾಧ್ಯ ಎಂದು ಹೇಳಿ, ಇವರು ನೀವು ಕೇವಲ ನಿಮ್ಮ ತಂದೆ–ತಾಯಿಯ ಸಂಪತ್ತು ಮಾತ್ರವಲ್ಲ. ಇಡೀ ದೇಶದ ಸಂಪತ್ತಾಗಬೇಕು. ನಾನು ಐದನೇ ತರಗತಿಯಲ್ಲೇ ಸೌಟ್ಸ್–ಗೈಡ್ಸ್ ಸೇರಿದ್ದೆ. ನಾನು ಇಂದು ಈ ಸ್ಥಾನ ಹೊಂದಲು ಸ್ಕೌಟ್ಸ್ – ಗೈಡ್ಸ್ ಕಾರಣ. ಭಾರತ ಜಗತ್ತಿನ ನಂಬರ್ ಒನ್ ಆಗಲು ನಿಮ್ಮಂತ ಶ್ರೇಷ್ಠ ವಿದ್ಯಾರ್ಥಿಗಳಿಂದ ಮಾತ್ರ ಸಾಧ್ಯ. ಆ ನಿಟ್ಟಿನಲ್ಲಿ ನೀವು ರೂಪುಗೊಳ್ಳಬೇಕು. ನೀವೆಲ್ಲರೂ ಸತ್ಪ್ರಜೆಯಾಗಲು ಸೌಟ್ಸ್–ಗೈಡ್ಸ್‌ನಿಂದ ಸಿಗುವ ತರಬೇತಿಯಿಂದ ಮಾತ್ರ ಸಾಧ್ಯ. ಮುಂದಿನ ಐದಾರು ವರ್ಷ ಕಷ್ಟ ಅನುಭವಿಸಬಹುದು. ಆದರೆ, ಇದು ನಿಮ್ಮ ಮುಂದಿನ ಬಾಳಿಗೆ ಬೆಳಕಾಗಲಿದೆ. ಕಾರ್ಯಕ್ರಮದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ, ಪಾಲಕ ಪೋಷಕರಿಗೆ ಮತ್ತು ವಿದ್ಯಾರ್ಥಿಗಳನ್ನು ಕರೆ ತಂದ ಶಿಕ್ಷಕರಿಗೂ ಅಭಿನಂದಿಸಿದರು. ಸಿಕ್ಕ ಅವಕಾಶವನ್ನು ಬದ್ಧತೆಯಿಂದ ಬಳಸಿಕೊಳ್ಳಲು ನಿಮಗೆ ಉತ್ತಮ ಅವಕಾಶ ಇದನ್ನ ಬಳಸಿಕೊಂಡು ಉತ್ತಮ ವ್ಯಕ್ತಿತ್ವ ರೂಪಿಸಿಕೊಂಡು ಮುಂದಿನ 50 ವರ್ಷದ ಗುರಿಯನ್ನಿಟ್ಟುಕೊಳ್ಳಿ".



ಶ್ರೀ ಶ್ರೀ ಶ್ರೀ ಶಿವಾಚಾರ್ಯ ಸ್ವಾಮೀಜಿಗಳು, ಮುಕ್ತಿ ಮಠ, ಬೆಳಗಾವಿ

"ಬೆಳಗಾವಿಯಲ್ಲಿ ನಡೆದಿರುವ ಸೌಟ್ಸ್ ಮತ್ತು ಗೈಡ್ಸ್ ಜಾಂಬೂರೇಟ್ ಮಕ್ಕಳ ಸರ್ವತೋಮುಖ ಅಭಿವೃದ್ಧಿಯ ಪ್ರೋತ್ಸಾಹಕ್ಕೆ ಮುನ್ನುಡಿ. ಇಂತಹ ಸಂಘಟನೆ ಸಂಘಟನಾತ್ಮಕ ಚಟುವಟಿಕೆಗಳಿಂದ ಮಕ್ಕಳ ವಿಕಾಸ ಸಾಧ್ಯ. ಇಲ್ಲಿನ ಪರಿಸರ ಮಕ್ಕಳ ಮನವನ್ನು ಆಕರ್ಷಿಸುತ್ತದೆ. ಸ್ಕೌಟ್ಸ್ ಮಕ್ಕಳ ಮೇಳಕ್ಕೆ ಶುಭವಾಗಲಿ, ಕಾರ್ಯಕ್ರಮ ಯಶಸ್ವಿಯಾಗಲಿ".

ಶ್ರೀ ಮಧು ಬಂಗಾರಪ್ಪ, ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸಚಿವರು, ಕರ್ನಾಟಕ ಸರ್ಕಾರ



"ಇದು ನನ್ನ ಇಲಾಖೆಗೆ ಸಂಬಂಧಿಸಿದ ಕಾರ್ಯಕ್ರಮ.

ಇಂದು ನನ್ನ ಕಣ್ಣು ತೆರೆದಿದೆ. ರಾಜ್ಯದ ವಿವಿಧ ಭಾಗದಿಂದ ತಮ್ಮ ಮಕ್ಕಳನ್ನು ಇಷ್ಟು ದೂರ ಕಳಿಸಿದ್ದಾರೆ. ನಮ್ಮ ಸರ್ಕಾರ ಮಾನವೀಯ ಮೌಲ್ಯದ ಮೇಲೆ ನಡೆಯುವ ಸರ್ಕಾರ. ಸ್ಕೌಟ್ಸ್ ಗೈಡ್ಸ್ ನ್ನು ಮುಂದಿನ ದಿನಗಳಲ್ಲಿ ಕೆಪಿಎಸ್ ಶಾಲೆಗಳಲ್ಲಿ ಕಡ್ಡಾಯವಾಗಲು ಪ್ರಯತ್ನ ಪಡುತ್ತೇನೆ. ನೀವೆಲ್ಲರೂ ಭಾರತದ ಉಜ್ವಲ ನಾಗರಿಕರಾಗಬೇಕು".



ಶ್ರೀ ಸತೀಶ್ ಜಾರಕಿಹೊಳಿ,

ಮಾನ್ಯ ಲೋಕೋಪಯೋಗಿ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರು

"ಪರಿಸರ ರಕ್ಷಣೆ ಸೇರಿದಂತೆ ವಿವಿಧ ಕಾರ್ಯಕ್ರಮಗಳಲ್ಲಿ ಸ್ಕೌಟ್ಸ್–ಗೈಡ್ಸ್‌ಗಳವರನ್ನು ಸಕ್ರಿಯವಾಗಿ ತೊಡಗಿಸಲು ಪ್ರಯತ್ನ ಮಾಡಲಾಗುತ್ತದೆ. ನಮಗೂ ಅವಕಾಶ ಸಿಕ್ಕಾಗ ದೇಶದಲ್ಲೇ ಒಂದು ಪ್ರಗತಿಶೀಲ ಸಂಸ್ಥೆಯನ್ನಾಗಿ ರೂಪಿಸಲು ಸಹಕರಿಸುವುದಾಗಿ ತಿಳಿಸಿ ಭವಿಷ್ಯತ್ತಿನಲ್ಲಿ ಇನ್ನೂ ಹೆಚ್ಚಿನ ಒತ್ತನ್ನು ಸ್ಕೌಟ್ಸ್ – ಗೈಡ್ಸ್‌ಗೆ ನೀಡುವುದಾಗಿ ಭರವಸೆ ನೀಡಿದರು".

ಡಾ. ಕೆ.ಕೆ ಖಂಡೇಲ್‌ವಾಲ್,

ಮುಖ್ಯ ರಾಷ್ಟ್ರೀಯ ಆಯುಕ್ತರು, ಭಾ.ಸ್ಕೌ.&ಗೈ, ನವದೆಹಲಿ



ಜಾಂಬೋರೇಟ್‌ನಲ್ಲಿ ಭಾಗವಹಿಸಿರುವ ಎಲ್ಲರಿಗೂ ಸ್ವಾಗತಿಸುತ್ತೇನೆ. ಭಯಗುಂದದೆ ಕಿತ್ತೂರು ರಾಣಿ ಚೆನ್ನಮ್ಮ ಹಾಗೂ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನಂತಹ ದೇಶಭಕ್ತರನ್ನು ಬೆಳಗಾವಿ ಜಿಲ್ಲೆ ನೀಡಿದೆ. ನಮ್ಮ ಸ್ಕೌಟ್ – ಗೈಡ್‌ಗಳು ಅವರಂತೆಯೇ ಬದ್ಧತೆ, ಧೈರ್ಯ ಮತ್ತು ನಡತೆಯನ್ನು ಮೈಗೂಡಿಸಿಕೊಳ್ಳಬೇಕು. ಜಾಂಬೊರೇಟ್‌ನ ಎಲ್ಲಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಪ್ರಬುದ್ಧಮಾನರಾಗಬೇಕು. ಈ ಕಾರ್ಯಕ್ರಮಕ್ಕಾಗಿ ಶ್ರಮಿಸಿದ ಎಲ್ಲಾ ಗಣ್ಯರಿಗೆ ನನ್ನ ಕೃತಜ್ಞತೆಗಳು ನೂತನ ಸಾಹಸದಲ್ಲಿ ಶುಭಕಾಮನೆಗಳು ಹಾಗೂ ಜಾಂಬೋರೇಟ್ ಯಶಸ್ಸಿಗೆ ನನ್ನ ಶುಭ ಹಾರೈಕೆಗಳು".



ಶ್ರೀ ಪಿ.ಜಿ.ಆರ್ ಸಿಂಧ್ಯ,

ಮಾಜಿ ಸಚಿವರು, ಹಾಗೂ ರಾಜ್ಯ ಮುಖ್ಯ ಆಯುಕ್ತರು

"ಮಕ್ಕಳಲ್ಲಿ ಸೇವಾ ಮನೋಭಾವ ಮತ್ತು ಸಹಬಾಳ್ವೆ ನಾಯಕತ್ವ, ಬೆಳಸುವಲ್ಲಿ ಸ್ಕೌಟ್ ಚಳವಳಿಯ ಪಾತ್ರವನ್ನು ಒತ್ತಿ ಹೇಳಿದರು".



ಜಾಂಬೋರೇಟ್‌ನ ವಿಶೇಷ ಅಂಚೆ ಲಕೋಟೆ ಬಿಡುಗಡೆ



ಶ್ರೀ ಕೊಂಡಜ್ಜಿ ಬ. ಷಣುಖಪ್ಪ, ಉಪಾಧ್ಯಕ್ಷರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಇವರು ಜಾಂಬೋರೇಟನ "ವಿಶೇಷ ಅಂಚೆ ಲಕೋಟೆಯನ್ನು" ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಬೆಳಗಾವಿಯ ಅಂಚೆ ಇಲಾಖೆಯ ಅಧಿಕಾರಿಗಳಾದ ಶ್ರೀ ಬಸವರಾಜ್ ವಾಲಿಕಾರ್ ಐ.ಪಿ.ಓ.ಎಸ್. ಹಿರಿಯ ಅಧೀಕ್ಷಕರು, ಬೆಳಗಾವಿ ಅಂಚೆ ಕಛೇರಿ, ಶ್ರೀ ಬಸವಂತಮಳಗಿ ಸಹಾಯಕ ಅಧೀಕ್ಷಕರು ಬೆಳಗಾವಿ ಉತ್ತರ ವಿಭಾಗ ಅಂಚೆ ಕಛೇರಿ, ಶ್ರೀ ಲಕ್ಷ್ಮಣ ಚವದಿಮನಿ, ಪೋಸ್ಟ ಮಾಸ್ಟರ್, ಮುಖ್ಯ ಅಂಚೆ ಕಛೇರಿ ಶ್ರೀ ಶ್ರೀನಿವಾಸ್ ಚವಾನ್, ಶ್ರೀ ಎಮ್ ಎ ಖಾಲಿದ್, ರಾಜ್ಯ ಆಯುಕ್ತರು (ಸ್ಕೌಟ್), ಶ್ರೀಮತಿ ಗೀತಾ ನಟರಾಜ್ ರಾಜ್ಯ ಆಯುಕ್ತರು (ಗೈಡ್), ಶ್ರೀ ಟಿ ಪ್ರಭಾಕರ್, ರಾಜ್ಯ ಕೋಶಾಧಿಕಾರಿ, ಶ್ರೀ ಸಿ ಎಸ್ ರೆಡ್ಡಿ, ರಾಜ್ಯ ಆಯುಕ್ತರು (ವ.ಸಂ), ಶ್ರೀ ಗಜಾನನ ಮನ್ನಿಕೇರಿ, ಜಿಲ್ಲಾ ಮುಖ್ಯ ಆಯುಕ್ತರು, ಬೆಳಗಾವಿ ಜಿಲ್ಲೆ, ಶ್ರೀಮತಿ ಪ್ರಭಾವತಿ ಪಾಟೀಲ್, ಜಿಲ್ಲಾ ಗೈಡ್ ಆಯುಕ್ತರು, ಶ್ರೀಮತಿ ಅರ್ಪಿತಾ ಕೊಂಡಜ್ಜಿ, ರಾಜ್ಯ ಸ್ಥಾನಿಕ ಆಯುಕ್ತರು (ಗೈಡ್) ಮುಂತಾದವರು ಉಪಸ್ಥಿತರಿದ್ದರು.

ಈ ಜಾಂಬೋರೇಟ್‌ನಲ್ಲಿ ಸ್ಕೌಟ್ಸ್-ಗೈಡ್ಸ್‌ಗಳಿಗೆ ಕೆಳಕಂಡ ಚಟುವಟಿಕೆಗಳನ್ನು ಆಯೋಜಿಸಲಾಗಿತ್ತು.

1. ಸಾಹಸ ಕಣಿವೆ
2. ಹೊರ ಸಂಚಾರ ಮತ್ತು ಸಮಾಜ ಸೇವೆ
3. ಸ್ಕೌಟ್ ಕೌಶಲ್ಯ
4. ಸುಸ್ಥಿರ ಅಭಿವೃದ್ಧಿ ಗುರಿ
5. ವಸ್ತು ಪ್ರದರ್ಶನ
6. ಶೈಕ್ಷಣಿಕ ಪ್ರವಾಸ
7. ಕಾಡಿನ ಜಾಡು
8. ಕೃಷಿಯಲ್ಲಿ ಕೃಷಿ
9. ಯುವ ವೇದಿಕೆ
10. ಧ್ವಜ ಸ್ತಂಭ ನಿರ್ಮಾಣ ಸ್ಪರ್ಧೆ
11. ಗುಡಾರ ನಿರ್ಮಾಣ ಸ್ಪರ್ಧೆ
12. ಪಟಾಲಂ ಅಡಿಗೆ ಸ್ಪರ್ಧೆ
13. ಜಿಲ್ಲಾ ದ್ವಾರ ಹಾಗೂ ಅಗ್ರಗಾಮಿ ಯೋಜನೆ
14. ರಂಗೋಲಿ ಸ್ಪರ್ಧೆ
15. ರಸಪ್ರಶ್ನೆ
16. ಬ್ಯಾಂಡ್‌ವಾದನ್ ಸ್ಪರ್ಧೆ
17. ರಾತ್ರಿ ಹೊರಸಂಚಾರ
18. ಜನಪದ ನೃತ್ಯ ಸ್ಪರ್ಧೆ
19. ಪಾರಂಪರಿಕ ನಡಿಗೆ ಸ್ಪರ್ಧೆ
20. ಅಗ್ನಿಶಾಮಕ ಪ್ರಾತಿಕ್ಷಿಕೆ
21. ವೀರರಾಣಿ ಕಿತ್ತೂರು ಚೆನ್ನಮ್ಮ ಮತ್ತು ಪುಣ್ಯಕೋಟಿ ನೃತ್ಯ ರೂಪಕಗಳು
22. ಪೋಲಿ ಕಿಟ್ಟಿ ನಾಟಕ
23. ಬೀಜದುಂಡೆ ತಯಾರಿಕೆ

ಸ್ಥಳೀಯ ಪ್ರತಿಭಾ ಪ್ರದರ್ಶನ





ದಿನಾಂಕ 27.12.2025 ರಂದು ಸಂಜೆ ಜಾಂಬೋರೇಟ್ ಸಭಾಂಗಣದಲ್ಲಿ ಸ್ಥಳೀಯ ಪ್ರತಿಭಾ ಪ್ರದರ್ಶನ ಏರ್ಪಡಿಸಲಾಗಿತ್ತು. ಶ್ರೀ ಜಯಕುಮಾರ್ ಹೆಬಳಿ, ಜಿಲ್ಲಾಧ್ಯಕ್ಷರು, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಬೆಳಗಾವಿ ಜಿಲ್ಲೆ ಮತ್ತು ಶ್ರೀ ಎನ್. ಶ್ರೀನಿವಾಸನ್ ಸಹಾಯಕ ರಾಜ್ಯ ಆಯುಕ್ತರು (ಸ್ಕೌಟ್) ಶ್ರೀ ಕೆ ಗಂಗಾಪ್ಪಗೌಡ ರಾಜ್ಯಕಾರ್ಯದರ್ಶಿ, ಶ್ರೀ ಗಜಾನನ ಮನ್ನಿಕೇರಿ, ಜಿಲ್ಲಾ ಮುಖ್ಯಆಯುಕ್ತರು, ಶ್ರೀಮತಿ ಪ್ರಭಾವತಿ ಪಾಟೀಲ್ ಜಿಲ್ಲಾ ಆಯುಕ್ತರು (ಗೈಡ್ಸ್) ಇವರುಗಳು ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ ಬೆಳಗಾವಿ ಜಿಲ್ಲೆಯ ವಿವಿಧ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರಸ್ತುತ ಪಡಿಸಲಾಯಿತು.

ದಿನಾಂಕ 28.12.2025

ಸ್ಕೌಟ್–ಗೈಡ್ ಕೌಶಲ್ಯ ಉದ್ಘಾಟನೆ





ಬೆಳಿಗ್ಗೆ 09.00 ಗಂಟೆಗೆ ಸ್ಕೌಟ್ –ಗೈಡ್ ಕೌಶಲ್ಯ ಉದ್ಘಾಟನೆ ನಡೆಯಿತು. ಶ್ರೀ ಕೊಂಡಜ್ಜಿ ಬ. ಷಣುಖಪ್ಪ, ರಾಜ್ಯ ಉಪಾಧ್ಯಕ್ಷರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ಇವರು ಈ ಚಟುವಟಿಕೆಯನ್ನು ಉದ್ಘಾಟಿಸಿದರು. ಶ್ರೀ ಕೆ.ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿ, ಶ್ರೀ ಪರಶುರಾಮ ದಡಗುಂಟಿ, ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ಬೆಳಗಾವಿ, ಶ್ರೀ ಎಸ್.ಬಿ.ಕೊಡ್ಲಿ, ವಿಶ್ರಾಂತ ಉಪನಿರ್ದೇಶಕರು, ಧಾರವಾಡ, ಶ್ರೀ ಆರ್ ಸಿ. ಹಲಗತ್ತಿ, ವಿಶ್ರಾಂತ ಉಪನಿರ್ದೇಶಕರು, ಹುಬ್ಬಳ್ಳಿ, ಶ್ರೀ ಎಸ್ ಡಿ. ಗಾಂಜಿ, ವಿಶ್ರಾಂತ ಉಪನಿರ್ದೇಶಕರು, ಧಾರವಾಡ, ಶ್ರೀಮತಿ ಆಶಾ ಪ್ರಸನ್ನಕುಮಾರ, ಉಪಾಧ್ಯಕ್ಷರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ಶ್ರೀಮತಿ ಪುಷ್ಪವಲ್ಲಿ, ರಾಜ್ಯ ಉಪಾಧ್ಯಕ್ಷರು, ಶ್ರೀ ಸಿದ್ಧರಾಮಸ್ವಾಮಿ, ರಾಜ್ಯ ಉಪಾಧ್ಯಕ್ಷರು, ಶ್ರೀ ಎ.ಎನ್ ಮಹೇಶ್, ರಾಜ್ಯ ಉಪಾಧ್ಯಕ್ಷರು, ಶ್ರೀ ಶಂಕರಪ್ಪ ಕೆ.ವಿ, ಸಹಾಯಕ ರಾಜ್ಯ ಆಯುಕ್ತರು, ಉಪಸ್ಥಿತರಿದ್ದರು. ಗಾಳಿಪಟ ತಯಾರಿಕೆ, ಅಗ್ಗಾಮಿ ಯೋಜನೆಗಳು, ಆಕರ್ಷಕ ಬಿತ್ತಿ ಪತ್ರಗಳ ತಯಾರಿಕೆ ಮುಂತಾದವುಗಳು ಈ ಶಿಬಿರದಲ್ಲಿ ಒಳಗೊಂಡಿದ್ದವು.

ಸಾಹಸಮಯ ಚಟುವಟಿಕೆಗಳು





ಶ್ರೀ ರಾಹುಲ ಶಿಂಧೆ, ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಬೆಳಗಾವಿ, ಇವರು ಈ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಶ್ರೀ ಸುಬೇದಾರ್ ಮೇಜರ್ ಶ್ರೀ ದೇವೇಂದ್ರ ರಜಪೂತ, ನಿವೃತ್ತ ಸೈನ್ಯಾಧಿಕಾರಿಗಳು, ಶ್ರೀ ಎಂ. ಜಿ. ದಾಸರ, ವಿಶ್ರಾಂತ ಉಪನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, ಶ್ರೀ ಆರ್. ವಿ. ನಿಂಬಾಳಕರ, ಜಿಲ್ಲಾ ತರಬೇತಿ ಆಯುಕ್ತರು (ಸ್ಕೌಟ್) ಉಪಸ್ಥಿತರಿದ್ದರು. ಶಿಲಾರೋಹಣ, ಹಗ್ಗದ ಸೇತುವೆ ಮೇಲೆ ನಡೆಯುವುದು, ಸರಳ ಅಡೆತಡೆಗಳನ್ನು ದಾಟುವುದು, ಅನಿರೀಕ್ಷಿತ ಕಾರ್ಯಗಳನ್ನು ಪೂರೈಸುವುದು ಇವೇ ಮುಂತಾದವು ಈ ಶಿಬಿರದಲ್ಲಿ ಒಳಗೊಂಡಿದ್ದವು. ಇದರಿಂದ ಸ್ಕೌಟ್–ಗೈಡ್‌ಗಳ ದೈಹಿಕ ಸಾಮರ್ಥ್ಯವನ್ನು ಒರೆಗೆ ಹಚ್ಚಲಾಗಿತ್ತು.

ಶೈಕ್ಷಣಿಕ ಪ್ರವಾಸ





ಅಂದು ಬೆಳಿಗ್ಗೆ 10 ಗಂಟೆಗೆ ಸ್ಕೌಟ್–ಗೈಡ್‌ಗಳಿಗೆ ಶೈಕ್ಷಣಿಕ ಪ್ರವಾಸ ಕಾರ್ಯಕ್ರಮವನ್ನು ಚಾಲನೆಗೊಳಿಸಲಾಯಿತು. ಶ್ರೀ ಅಶೋಕ ಸಿಂಧಗಿ, ಪ್ರಾಚಾರ್ಯರು, ಡಯಟ್, ಬೆಳಗಾವಿ ಇವರು ಈ ಕಾರ್ಯಕ್ರಮ ಉದ್ಘಾಟನೆ ಮಾಡಿದರು. ಕಾರ್ಯಕ್ರಮದಲ್ಲಿ ಶ್ರೀ ಎಂ.ಎ. ಖಾಲಿದ್, ರಾಜ್ಯ ಆಯುಕ್ತರು (ಸ್ಕೌಟ್), ಶ್ರೀ ಸಂಜು ಹುಲ್ಲೊಳಿ, ಪ್ರಾಚಾರ್ಯರು, ಡಯಟ್, ಚಿಕ್ಕೋಡಿ, ಶ್ರೀ ಜುನೇದಿ ಪಟೇಲ, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳು ಬೆಳಗಾವಿ, ಶ್ರೀ ಎಂ. ಪ್ರಭಾಕರ್ ಭಟ್, ರಾಜ್ಯ ಸಂಘಟನಾ ಆಯುಕ್ತರು (ಸ್ಕೌಟ್), ಶ್ರೀಮತಿ ಮಂಜುಳಾ ಸಿ. ರಾಜ್ಯ ಸಂಘಟನಾ ಆಯುಕ್ತರು (ಗೈಡ್), ಶ್ರೀ ಎಂ.ಎಸ್. ಸತೀಶ್. ಜಂಟಿ ರಾಜ್ಯ ಕಾರ್ಯದರ್ಶಿ, ಭಾ.ಸ್ಕೌ. ಗೈ ಕರ್ನಾಟಕ, ಶ್ರೀಮತಿ ಕೆ.ವಿ ಶಾಮಲಾ, ರಾಜ್ಯ ತರಬೇತಿ ಆಯುಕ್ತರು (ಗೈಡ್) ಉಪಸ್ಥಿತರಿದ್ದರು. ಬೆಳಗಾವಿ ಜಿಲ್ಲೆಯ ಶ್ರೀಮಂತ ಸಂಸ್ಕೃತಿ ಮತ್ತು ಪರಂಪರೆ ಬಗ್ಗೆ ಅರಿವು ಮೂಡಿಸುವುದು ಇದರ ಉದ್ದೇಶವಾಗಿತ್ತು. ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ವಿಶೇಷತೆಗಳ ಬಗ್ಗೆ ಹೆಚ್ಚಿನ ತಿಳುವಳಿಕೆ ನೀಡುವುದು ಈ ಪ್ರವಾಸದ ಉದ್ದೇಶವಾಗಿತ್ತು.

ಸರ್ಕಾರಿ ಇಲಾಖೆಗಳ ಪ್ರದರ್ಶನ ಮಳಿಗೆಗಳು



ಅಂದು ಬೆಳಿಗ್ಗೆ 09.00 ಘಂಟೆಗೆ ವಿವಿಧ ಸರ್ಕಾರಿ ಇಲಾಖೆಗಳ ಕಾರ್ಯವೈಖರಿಯ ಬಗ್ಗೆ ಮಾಹಿತಿ ನೀಡುವ ಮಳಿಗೆಗಳನ್ನು ಉದ್ಘಾಟನೆ ಮಾಡಲಾಯಿತು. ಶ್ರೀ ಡಿ.ಪಿ.ಗಡಾದ, ಜಿಲ್ಲಾ ಆರೋಗ್ಯಾಧಿಕಾರಿಗಳು, ಬೆಳಗಾವಿ ಇವರು ಮಳಿಗೆಗಳನ್ನು ಉದ್ಘಾಟಿಸಿದರು. ಕೃಷಿ ಇಲಾಖೆ, ಅರಣ್ಯ ಇಲಾಖೆ, ರಾಜೈ ವಿಪತ್ತು ನಿರ್ವಹನಾ ಪ್ರಾಧಿಕಾರ, ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ, ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ ಇವೆ, ಮುಂತಾದವುಗಳ ಬಗ್ಗೆ ಮಾಹಿತಿ ನೀಡುವ ಮಳಿಗೆಗಳನ್ನು ಉದ್ಘಾಟಿಸಲಾಯಿತು, ಶ್ರೀ ಯಶ್ವಂತಕುಮಾರ, ಖಾದಿ ನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಬೆಳಗಾವಿ ಮತ್ತು ಶ್ರೀ ಎಫ್. ಜಿ ಚೆನ್ನ್ವರ, ಖಾದಿ ನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಮೂಡಲಾಗಿ ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಕೃಷಿ ಜಾಗೃತಿ ಕಾರ್ಯಕ್ರಮ

ಅದೇ ದಿನ ಬೆಳಿಗ್ಗೆ 10.00 ಘಂಟೆಗೆ ಕೃಷಿ ಜಾಗೃತಿ ಕಾರ್ಯಕ್ರಮ ಉದ್ಘಾಟನೆಗೊಂಡಿತು. ಶ್ರೀ ಹೆಚ್.ಗಿ ಕೋಳೇಕರ, ಸಹನಿರ್ದೇಶಕರು, ಕೃಷಿ ಇಲಾಖೆ, ಬೆಳಗಾವಿ ಇವರು ಕಾರ್ಯಕ್ರಮ ಉದ್ಘಾಟಿಸಿದರು. ಶ್ರೀ ಮಹಂತೇಶ ಮುರಗೋಡ, ಸಹನಿರ್ದೇರ್ಶಕರು, ತೋಟಗಾರಿಕೆ ಇಲಾಖೆ, ಜಿಲ್ಲಾ ಪಂಚಾಯತ್ ಬೆಳಗಾವಿ ಇವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ರಾಜೇಶೇಖರ ಪಾಟೀಲ್ ಸಹನಿರ್ದೇಶಕರು ಕರ್ನಾಟಕ ನೀರಾವರಿ ನಿಗಮ, ಶ್ರೀ ಮಹದೇವ ಪಟಗುಂದಿ, ಸಹಾಯಕ ಕೃಷಿ ನಿರ್ದೇಶಕರು, ಬೆಳಗಾವಿ, ಶ್ರೀ ಪ್ರವೀಣ ಮಹೇಂದ್ರಕರ, ಹಿರಿಯ ಸಹಾಯಕ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಬೆಳಗಾವಿ ಇವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ನಾಟಿ ಮಾಡುವುದು, ಕಳೆ ಕೀಳುವುದು, ಕೊಯ್ಲು ಮಾಡುವುದು, ಒಣಗಿಸುವುದು ಮುಂತಾದವುಗಳ ಕೃಷಿ ವಿಷಯಗಳ ಬಗ್ಗೆ ಸ್ಕೌಟ್ಸ್–ಗೈಡ್ಸ್‌ಗಳು ನೇರವಾಗಿ ಮಾಹಿತಿ ಪಡೆದರು.



ಆಹಾರ ಮೇಳ





ಅಂದು ಮಧ್ಯಾಹ್ನ 02.30ಕ್ಕೆ ಆಹಾರ ಮೇಳವನ್ನು ಉದ್ಘಾಟಿಸಲಾಯಿತು. ಶ್ರೀ ಮಹೇಶ ಬ. ಬೆಲ್ಲದ, ಖ್ಯಾತ ಉದ್ಯಮಪತಿಗಳು, ಈ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಸ್ಕೌಟ್-ಗೈಡ್‌ಗಳು ತಮ್ಮ ತಮ್ಮ ಜಿಲ್ಲೆಗಳ ವಿಶಿಷ್ಟ ಆಹಾರ ಪದಾರ್ಥಗಳನ್ನು ತಯಾರಿಸಿ ಪ್ರದರ್ಶನಕ್ಕೆ ಇಟ್ಟಿದ್ದರು. ಅತಿಥಿಗಳು ಹಾಗೂ ವೀಕ್ಷಕರು ಇವುಗಳನ್ನು ಸವಿದು ಆನಂದಿಸಿದರು.

ಜಾನಪದ ವೈಭವ

ಅಂದು ರಾತ್ರಿ 08.30 ಘಂಟೆಗೆ ಜಾನಪದ ವೈಭವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಗೀತಾ ನಟರಾಜ್, ರಾಜ್ಯ ಆಯುಕ್ತರು (ಗೈಡ್) ಇವರು ವಹಿಸಿದ್ದರು. ಶ್ರೀ ವೈ.ಜೆ ಭಜಂತ್ರಿ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬೆಳಗಾವಿ ನಗರ ಶ್ರೀ ಆರ್ ಕೆ ಆಂಜನೇಯ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬೆಳಗಾವಿ ಗ್ರಾಮೀಣ, ಶ್ರೀ ಪಿ. ರಾಮಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಖಾನಾಪುರ, ಶ್ರೀ ಸಿ ವೈ ತುಬಾಕದ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕಿತ್ತೂರು, ಶ್ರೀ ಎ.ಎ ಖಾಜಿ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸೌದತ್ತಿ, ಶ್ರೀ ಸಂಜೀವ ಕಾಂಬ್ಳೆ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ರಾಮದುರ್ಗ, ಶ್ರೀ ಬಿ.ವಿ ಕುಂಬಾರ, ಜಿಲ್ಲಾಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಚಿಕ್ಕೋಡಿ ಇವರುಗಳು ಅತಿಥಿಗಳಾಗಿ ಭಾಗವಹಿಸಿದ್ದರು.

ವಿವಿಧ ಜಿಲ್ಲೆಗಳು ತಮ್ಮ ತಮ್ಮ ಪ್ರದೇಶದ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿಬಿಂಬಿಸುವ ಕಂಸಾಳೆ, ಕೋಲಾಟ ಮುಂತಾದ ಜಾನಪದ ಕಲೆಗಳನ್ನು ಪ್ರದರ್ಶಿಸಲಾಯಿತು.



ದಿನಾಂಕ 29.12.2025

ಪೆಜೆಂಟ್ ಶೋ (ಸಾಂಪ್ರದಾಯಿಕ ನಡಿಗೆ)





ಅಂದು ಮಧಾಹ್ನ 02.00 ಘಂಟೆಗೆ ಸಾಂಪ್ರದಾಯಿಕ ನಡಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಶ್ರೀಮತಿ ಶ್ರದ್ಧಾ ಕಟವಟೆ, ನಿರ್ದೇಶಕಿ, ಜೈನ್ ಹೆರಿಟೇಜ್ ಶಾಲೆ, ಶ್ರೀಮತಿ ಮಹಾದೇವಿ ನಾಯಕ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ನಿಪ್ಪಾಣಿ, ಶ್ರೀಮತಿ ರೇವತಿ ಮಠದ, ಡಿ.ವೈ.ಪಿ.ಸಿ, ಚಿಕ್ಕೋಡಿ, ಶ್ರೀಮತಿ ಮೀನಾಕ್ಷಿ ಪಾಟೀಲ, ಹಿರಿಯ ಉಪನ್ಯಾಸಕರು, ಡಯಟ್, ಬೆಳಗಾವಿ, ಶ್ರೀಮತಿ ಉಮಾದೇವಿ ಹೀರೆಮಠ ಡಿ.ವೈ.ಪಿ.ಸಿ, ಬೆಳಗಾವಿ, ಶ್ರೀಮತಿ ಜೀನಾ ಕಾರದಗಿ, ಉಪನ್ಯಾಸಕರು, ಶಿಕ್ಷಣ ಮಹಾವಿದ್ಯಾಲಯ ಬೆಳಗಾವಿ, ಶ್ರೀಮತಿ ಸಾಧನಾ ಭದ್ರಿ, ತಾಲ್ಲೂಕಾ ದೈಹಿಕ ಶಿಕ್ಷಣ ಪರಿವೀಕ್ಷಕರು ಬೆಳಗಾವಿ ಗ್ರಾಮೀಣ, ಶ್ರೀಮತಿ ಜಾಹಿದಾ ಪಟೇಲ, ತಾಲ್ಲೂಕಾ ದೈಹಿಕ ಶಿಕ್ಷಣ ಪರಿವೀಕ್ಷಕರು, ಬೆಳಗಾವಿ ನಗರ ಇವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ವಿವಿಧ ಜಿಲ್ಲೆಗಳ ತಂಡಗಳು ತಮ್ಮ ಸಂಸ್ಕೃತಿ ಮತ್ತು ಆಚಾರ ವಿಚಾರಗಳನ್ನು ಪ್ರತಿಬಿಂಬಿಸುವ ವೇಷಭೂಷಣಗಳೊಂದಿಗೆ ಈ ಕಾರ್ಯಕ್ರಮ ನಡೆಸಿಕೊಟ್ಟರು. ವೀರರಾಣಿ ಚೆನ್ನಮ್ಮ, ಎಲ್ಲಮದೇವಿ, ಬೆದರುಗೊಂಬೆಗಳು, ಕರಗ ಡೊಳ್ಳು ಕುಣಿತ, ಕುವೆಂಪು, ಸಿದ್ಧರೂಢ ಸ್ವಾಮಿಗಳು, ಪುಟ್ಟರಾಜ ಗವಾಯಿ, ಮೊಹರಂ ಉತ್ಸವ, ಓಣಿಕೆ ಓಬವ್ವ, ಶಂಕರಾಚಾರ್ಯ, ಗವಿಸಿದ್ದೇಶ್ವರ ಜಾತ್ರೆ, ಯಕ್ಷಗಾನ, ಹುಲಿವೇಷ, ಮೈಸೂರು ಒಡೆಯರ ಮನೆತನ ಮುಂತಾದವು ಈ ಕಾರ್ಯಕ್ರಮದಲ್ಲಿ ಅನಾವರಣಗೊಂಡವು.

"ಪೋಲಿ ಕಿಟ್ಟಿ" ನಾಟಕ ಪ್ರದರ್ಶನ





ಸಂಜೆ 05.30 ಘಂಟೆಗೆ ಟಿ.ಪಿ ಕೈಲಾಸಂ ರವರ "ಪೋಲಿ ಕಟ್ಟಿ" ನಾಟಕ ಪ್ರದರ್ಶನ ಏರ್ಪಡಿಸಲಾಗಿತ್ತು. ಶ್ರೀ ಸಿದ್ದರಾಮ ಮನಹಳ್ಳಿ, ವಿಶ್ರಾಂತ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, ಇವರು ಈ ಕಾರ್ಯಕ್ರಮ ಉದ್ಘಾಟಿಸಿದರು.

ಶ್ರೀಮತಿ ಲೀಲಾವತಿ ಹಿರೇಮಠ, ಮಾನ್ಯ ಉಪನಿರ್ದೇಶಕರು, ಶಾ.ಶಿ. ಇಲಾಖೆ ಬೆಳಗಾವಿ, ಶ್ರೀ ಸೀತಾರಾಮು ಆರ್.ಎಸ್., ಮಾನ್ಯ ಉಪನಿರ್ದೇಶಕರು, ಶಾ.ಶಿ ಇಲಾಖೆ, ಚಿಕ್ಕೋಡಿ, ಶ್ರೀ ಬಸವರಾಜ ಮಿಲ್ಲಾನಟ್ಟಿ, ಡಿ.ವೈ.ಪಿ.ಸಿ, ಬೆಳಗಾವಿ, ಶ್ರೀ ಜಿ.ಬಿ ಬಳೆಗಾರ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಗೋಕಾಕ, ಶ್ರೀ ಪಿ.ಬಿ ಹಿರೇಮಠ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಮೂಡಲಗಿ, ಶ್ರೀ ಎಂ.ಆರ್.ಮಂಜಿ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಅಥಣಿ, ಶ್ರೀಮತಿ ಪ್ರಭಾವತಿ ಬಿ. ಪಾಟೀಲ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಹುಕ್ಕೇರಿ & ಚಿಕ್ಕೋಡಿ. ಶ್ರೀಮತಿ ಮಹಾದೇವಿ ನಾಯಕ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ನಿಪ್ಪಾಣಿ, ಶ್ರೀ ಬಸವರಾಜಪ್ಪ ಆರ್, ಕ್ಷೇತ್ರ ಶಿಕ್ಷಣಾಧಿಕಾರಿಗಳು, ರಾಯಬಾಗ, ಶ್ರೀ ಪಿ.ಬಿ ಮದನಭಾವಿ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕಾಗವಾಡ ಇವರುಗಳು ಅತಿಥಿಗಳಾಗಿ ಭಾಗವಹಿಸಿದ್ದರು.

ಕಿಟ್ಟಿ ಎಂಬ ಬಾಲಕ ಪೋಲಿ ಎನಿಸಿಕೊಂಡರೂ ಸಹ ತಾನು ಶಾಲೆಯಲ್ಲಿ ಸ್ಕೌಟ್ ದಳಕ್ಕೆ ಸೇರಿಕೊಂಡು ಸ್ಕೌಟ್ ಮಾಸ್ಟರ್‌ರ ನಿರ್ದೇಶನದಂತೆ ತಾನ್ನೊಬ್ಬ ನಿಜವಾದ ಸ್ಕೌಟ್ ಎಂಬುದನ್ನು ತೋರಿಸಿಕೊಡುವುದೇ, ಈ ನಾಟಕದ ಮುಖ್ಯ ತಿರುಳು. ಕೇವಲ ಬಾಹ್ಯ ಸ್ವರೂಪದಲ್ಲಿ ಸ್ಕೌಟ್ ಆಗಿರುವುದಕ್ಕೆ ಆಂತರಿಕವಾಗಿ ಸ್ಕೌಟ್ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು ಎನ್ನುವುದನ್ನು ಈ ನಾಟಕ ಪ್ರತಿಬಿಂಬಿಸುತ್ತದೆ.

ಜಾಂಬೂರೇಟ್ ಜಾಂಬೂರೇಟ್

ಸ್ಕೌಟ್ಸ್–ಗೈಡ್ಸ್ ಜಾಂಬೂರೇಟ್ ಜಾಂಬೂರೇಟ್
ಒಂದೇ ಧ್ವಜದ ನೆರಳಲ್ಲಿ ಸಹಬಾಳ್ವೆಯ ಉತ್ಸವ
ಸೇವೆ, ಶಿಸ್ತು, ತ್ಯಾಗ ಪಥದಲಿ ಸಾಗಿಸುವ ನಿತ್ಯೋತ್ಸವ
ಸ್ಕೌಟ್ಸ್–ಗೈಡ್ಸ್ ಉತ್ಸವ ಅತ್ಯುತ್ಸವ
ಜೀವನ ಮೌಲ್ಯ ಕಲಿಸುವ ಮಹಾ ಉತ್ಸವ

ಸದಾ ಸಿದ್ಧನಾಗು ಧೈರ್ಯದಲಿ
ಸಹಕಾರದ ಶಕ್ತಿ ಹೊಳೆಯುತ್ತದೆ
ಸ್ಕೌಟ್–ಗೈಡ್ ಹೆಸರಿನಲ್ಲೇ ಅಡಗಿದೆ
ದೇಶಸೇವೆಯ ಅಮೂಲ್ಯ ಮಂತ್ರ

ವಿವಿಧ ಭಾಷೆ, ವೇಷ, ಸಂಸ್ಕೃತಿ
ಒಂದೇ ನಗು, ಒಂದೇ ಸ್ನೇಹ ಕಥೆ
ಜಂಬೂರೇಟ್‌ನಲಿ ಬೆರೆತು ಹೋಗುವೆವು
ವಿಶ್ವವೇ ಒಂದು ಕುಟುಂಬ ಎಂಬ ಸತ್ಯದಲ್ಲಿ

ಧ್ವಜಾರೋಹಣದ ಹೊತ್ತಲ್ಲಿ ಗಂಭೀರ ವಾಗ್ದಾನ
ಸತ್ಯ, ಸೇವೆ, ಶೌರ್ಯದ ಸಂಕಲ್ಪ
ಸ್ಕೌಟ್–ಗೈಡ್ ಹೃದಯದಲ್ಲಿ ಬೆರೆಯುತ್ತದೆ
ಮಾನವೀಯತೆಯ ಅಚ್ಚಳಿಯ ಅರಿವು

ಬೆಳಗಿನ ಪ್ರಾರ್ಥನೆ, ಸಂಜೆಯ ಮನರಂಜನೆ
ಶಿಬಿರದ ಬದುಕೇ ಒಂದು ಪಾಠಾಲಯ
ಸ್ವಾವಲಂಬನೆ, ಶಿಸ್ತು, ಸಹಕಾರ, ಸತ್ಯ, ಶಾಂತಿ
ಪ್ರತಿ ಕ್ಷಣವೂ ನೀತಿ ಪಾಠ

ಜಂಬೂರೇಟ್ ನೆನಪುಗಳ ಖಜಾನೆ
ಜೀವನಪೂರ್ತಿ ಉಳಿಯುವ ಅನುಭವದ ತಾಣ
ಸ್ಕೌಟ್–ಗೈಡ್ ಹಾದಿಯಲ್ಲಿ ನಡೆದವರು
ನಾಳೆಯ ಉತ್ತಮ ನಾಗರಿಕರು

ದೇಶಸೇವೆಯ ದೃಢ ಸಂಕಲ್ಪ
ಸ್ಕೌಟ್–ಗೈಡ್ ದೇಶದ ಕಾವಲುಗಾರರು
ಸಮಾಜ ಸೇವೆಯೇ ನಮ್ಮ ಉಸಿರು
ಜಂಬೂರೇಟ್ ವೇದಿಕೆಯಲ್ಲಿ ನಿಂತು
ಸೇವೆ ಮಾಡುವೆವು ಜೀವಮಾನವಿಡೀ

– ಬೀರಪ್ಪ ಕಡ್ಲಿಮಟ್ಟಿ, ಕುಷ್ಟಗಿ ಜಿಲ್ಲೆ, ಕೊಪ್ಪಳ

Poem on Jamborette

Six days of scouting, where friendship have grown
With perfect arrangements and kindness well-shown
Three meals every day kept our energy high
Under Decembers cold an vast winter sky

Though nights were quite chilly, we learned to stay tough
With battery lights glowing when planning got rough
As badges were earned and this year finds its end
On this New Years Eve, we stand proud with a friend.-

-Poorvi Dasappanavar, Bagalakote.

ಬಂದಿದ್ದೇವೆ ಬೆಳಗಾವಿ ಜಾಂಬೋರೇಟ್‌ಗೆ
ಚೆನ್ನಮ್ಮ, ರಾಯಣ್ಣ ಹುಟ್ಟಿದ ನಾಡಿಗೆ
ಸ್ಕೌಟ್ಸ್ ಗೈಡ್ಸ್ ಸಂಸ್ಥೆಯ ರಾಜ್ಯ ಜಾಂಬೋರೇಟ್
ಜಿಲ್ಲೆಗಳ ಸಮ್ಮಿಲನವೇ ಈ ಜಾಂಬೋರೇಟ್

ಮಕ್ಕಳ ಮನಸೆಳೆಯುವ ಚಟುವಟಿಕೆಗಳು
ಬ್ಯಾಡ್ಜಿಗಾಗಿ ಅವರುಗಳ ಪರದಾಟಗಳು
ರೈತನ ಕಷ್ಟ ತಿಳಿಸುವ ಕೆಸರುಗದ್ದೆ ಓಟ
ಕಂಪ್ಯೂಟರ್ ಲ್ಯಾಬಲ್ಲಿ ರೋಬೋಟಿಕ್ಸ್ ಪಾಠ

ಮ್ಯಾಜಿಕ್ ಶೋ ನೋಡಿ ಮಕ್ಕಳು ಮೈಮರೆತರು
ವಿಟಯು, ಮುಕ್ತಿಮಠ ನೀಡಿ ಜ್ಞಾನವ ಪಡೆದರು
ಆಪತ್ತಿನ ಕರ್ತವ್ಯ ತಿಳಿಸುವ ಯುವ ಆಪದ ಮಿತ್ರ
ಎಲ್ಲವು ತಿಳಿಸುತ್ತದೆ ಪರಿಸರದಲ್ಲಿ ಮನುಜನ ಪಾತ್ರ

ಜಿಲ್ಲೆಗಳ ವೈಭವ ತಿಳಿಸುವ ಪೇಜೆಂಟ್ ಶೋಗಳು
ಮಕ್ಕಳ ಶಿಸ್ತನ್ನು ಪ್ರದರ್ಶಿಸುವ ಬ್ಯಾಂಡ್ ಡಿಸ್‌ಪ್ಲೇಗಳು
ಪ್ರತಿಭೆಗಳಿಗೆ ವೇದಿಕೆ ಜಾನಪದ ನೃತ್ಯಗಳು
ಮೋಜುಮಸ್ತಿಗಾಗಿ ಫನ್‌ಬೇಸ್ ಆಟಗಳು

ಅಡ್ವೆಂಚರ್ ವ್ಯಾಲಿ ಹೆಚ್ಚಿಸುವುದು ಧೈರ್ಯ
ಫಾರೆಸ್ಟ್ ವಾಕ್‌ನಲ್ಲಿ ನೋಡುವರು ನಿಸರ್ಗ
ಫೀನಿಕ್ಸ್ ಶಾಲೆಯಲ್ಲಿ ನಡೆಯುತ್ತಿರುವ ಜಾಂಬೋರೇಟ್
ಸಂಸ್ಥೆಯ ಕೀರ್ತಿಯನ್ನು ಸಾರುತ್ತಿರುವ ಜಾಂಬೋರೇಟ್

ಮಕ್ಕಳನ್ನು ಪ್ರೀತಿಸುವವರು ಪಿ.ಜೆ.ಆರ್.ಸಿಂಧಿಯಾ
ಅವರ ಮುಂದೆ ಚಿಕ್ಕದು ಹಿಮಾಚಲ ವಿಂಧ್ಯಾ
ಅವರಿಗೆ ಮಕ್ಕಳೆಂದರೆ ಬಹಳ ಅಚ್ಚುಮೆಚ್ಚು
ಸ್ಕೌಟ್ ಗೈಡ್ ಬೆಳವಣಿಗೆಯೇ ಅವರಿಗಿರುವ ಹುಚ್ಚು

– ಯು.ಆನುರಾಧಾ, ರಾಯಚೂರು.

ಜಿಲ್ಲಾವಾರು ಸಾಂಸ್ಕೃತಿಕ ಪ್ರದರ್ಶನ





ಅಂದು ರಾತ್ರಿ 08.00 ಘಂಟೆಗೆ ಜಿಲ್ಲಾವಾರು ಸಾಂಸ್ಕೃತಿಕ ಪ್ರದರ್ಶನ ಹಮ್ಮಿಕೊಳ್ಳಲಾಗಿತ್ತು. ಡಾ. ಭೀಮಶಿ ಜಾರಕಿಹೊಳಿ, ಜಿಲ್ಲಾಧ್ಯಕ್ಷರು, ಕರ್ನಾಟಕ ರಾಜ್ಯ ಕಾರ್ಯನಿರತ, ಪತ್ರಕರ್ತರ ಸಂಘ, ಬೆಳಗಾವಿ ಇವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಶ್ರೀ ಗುರುನಾಥ್ ಕಡಬೂರ, ಉಪನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಬೆಳಗಾವಿ ಇವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಸರಜು ಕಾಟ್ಕರ, ಖ್ಯಾತ ಸಾಹಿತಿಗಳು ಹಾಗೂ ಹಿರಿಯ ಪತ್ರಕರ್ತರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು.

ದಿನಾಂಕ: 30.12.2025

ಮಾದರಿ ಗ್ರಾಮಸಭೆ





ಅಂದು ಮಧ್ಯಾಹ್ನ 3.00 ಗಂಟೆಗೆ ಮಾದರಿ "ಗ್ರಾಮ ಸಭೆ" ಕಾರ್ಯಕ್ರಮವನ್ನು ಶ್ರೀ ಬಸವರಾಜ ಹೆಗ್ಗನಾಯಕ, ಉಪಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್, ಬೆಳಗಾವಿ ಇವರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಶ್ರೀ ಆನಂದ ಹೊಳೆಪ್ಪನವರು, ಜಿಲ್ಲಾಧ್ಯಕ್ಷರು, ಪಿ.ಡಿ.ಓ.ಸಂಘ, ಬೆಳಗಾವಿ, ಶ್ರೀ ಗೋಪಾಲ ಗುಡಸಿ, ಕಾರ್ಯದರ್ಶಿಗಳು, ಪಿ.ಡಿ.ಓ. ಸಂಘ, ಬೆಳಗಾವಿ, ಶ್ರೀ ಗಂಗಾಧರ ನಾಯಕ, ಪಿ.ಡಿ.ಓ, ಹೊನಗಾ, ಶ್ರೀಮತಿ ರೇವತಿ ಸೀಂಘೆ, ಪಿ.ಡಿ.ಓ, ಕಾಕತಿ, ಶ್ರೀಮತಿ ಸುನಿತಾ ಪಾಟೀಲ, ಪಿ.ಡಿ.ಓ. ಭೂತರಾಮನಹಟ್ಟಿ, ಶ್ರೀಮತಿ ಲೀಲಾ ಮೈತ್ರಿ, ಪಿ.ಡಿ.ಓ, ಕೇದನೂರ, ಶ್ರೀಮತಿ ಕೃಷ್ಣಾಬಾಯಿ ಬಂಡಾರಿ, ಪಿ.ಡಿ.ಓ, ಕಡೋಲಿ, ಶ್ರೀಮತಿ ನಂದಿನಿ ಕಲ್ಯಾಣಿ, ಪಿ.ಡಿ.ಓ., ಹಂದಿಗನೂರು, ಶ್ರೀ ಎನ್.ಮುಜಾವರ, ಪಿ.ಡಿ.ಓ., ಅಗಸಗಾ, ಶ್ರೀ ಎನ್.ಜೆ.ಪಕ್ಕೀರಪ್ಪ, ಪಿ.ಡಿ.ಓ, ವಂಟಮುರಿ, ಶ್ರೀ ವಿನಾಯಕ ಮಾಳಿ, ಪಿ.ಡಿ.ಓ, ಮಮದಾಪುರ, ಇವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಸಹಕಾರದೊಂದಿಗೆ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಗ್ರಾಮಪಂಚಾಯತಿ ಸಭೆಯಲ್ಲಿ ಸರಪಂಚ್, ಗ್ರಾಮೀಣಾಭಿವೃದ್ಧಿ ಅಧಿಕಾರಿ, ಕಾರ್ಯದರ್ಶಿ, ಸದಸ್ಯರುಗಳು ಮುಂತಾದ ಪಾತ್ರಗಳನ್ನು ಸ್ಕೌಟ್ಸ್–ಗೈಡ್ಸ್‌ಗಳು ಮತ್ತು ಸ್ಕೌಟ್ ಮಾಸ್ಟರ್‌ಗಳು ವಹಿಸಿಕೊಂಡು ಈ ವಿಡಂಬದ ನಾಟಕವನ್ನು ನಡೆಸಿಕೊಟ್ಟರು.

ಅನುಭವ ಮಂಟಪ ನಾಟಕ





ಅಂದು ಸಂಜೆ 5.30ಕ್ಕೆ "ಅನುಭವ ಮಂಟಪ" ನಾಟಕ ಪ್ರದರ್ಶನಗೊಂಡಿತು. ಶ್ರೀ ಆರ್.ಎಸ್.ಮುಳ್ಳೂರ, ವಿಶ್ರಾಂತ ಉಪನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, ಧಾರವಾಡ, ಶ್ರೀ ನಾಗರಾಜ ಕಾಳೆ, ವಿಶ್ರಾಂತ ಉಪನ್ಯಾಸಕರು, ಶ್ರೀ ಚಂದ್ರಶೇಖರ ಸಾವಳಗಿ, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ, ಶ್ರೀ ರಾಮು ಗುಗವಾಡ, ನಿಕಟಪೂರ್ವ ಪ್ರಧಾನ ಕಾರ್ಯದರ್ಶಿ, ಕ.ರಾ.ಪ್ರಾ.ಶಾ.ಸಿ. ಸಂಘ, ಬೆಂಗಳೂರು, ಡಾ॥ ಬಾಳಣ್ಣ ಈ ಚಿನಗುಡಿ, ಸಾಹಿತಿಗಳು ಮತ್ತು ರಾಜ್ಯ ಸಂಪನ್ಮೂಲ ವ್ಯಕ್ತಿಗಳು, ಧಾರವಾಡ, ಶ್ರೀ ಸಿದ್ದನಗೌಡ ಪಾಟೀಲ, ಮಾಜಿ ಅಧ್ಯಕ್ಷರು, ಬೆಳಗಾವಿ ಜಿಲ್ಲಾ ಮಾಧ್ಯಮಿಕ ಶಾಲಾ ನೌಕರರ ಸಂಘ ಇವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಶ್ರೀ ಸಿಕಂದರ್ ದಂಡಿನ, ನಿರ್ದೇಶನದಲ್ಲಿ ಈ ನಾಟಕ ಪ್ರದರ್ಶನಗೊಂಡಿತು. ಡಾ॥ ಬಾಳಣ್ಣ ಈ ಚಿನಗುಡಿ ರಚಿತ, ಅಲ್ಲಮ್ಮ ಪ್ರಭು ಹಾಗೂ ಬಸವಣ್ಣನವರ ಅನುಭವ ಮಂಟಪ ಪರಿಕಲ್ಪನೆಯನ್ನು ಕೇಂದ್ರವಾಗಿಟ್ಟುಕೊಂಡು ಈ ನಾಟಕ ಪ್ರದರ್ಶಿತಗೊಂಡಿತು. ಶರಣರ ಆದರ್ಶಗಳನ್ನು ಇಂದಿನ ತಲೆಮಾರಿಗೆ ತಲುಪಿಸುವಲ್ಲಿ ಈ ನಾಟಕ ಮಹತ್ವದ ಪಾತ್ರವಹಿಸಿತು.

ಭವ್ಯ ಶಿಬಿರಾಗ್ನಿ





ದಿನಾಂಕ 30 ಡಿಸೆಂಬರ್ 2025ರ ರಾತ್ರಿ ನಡೆದ ಭವ್ಯ ಶಿಬಿರಾಗ್ನಿ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ರಾಹುಲ್ ಶಿಂಧೆ ಮಾನ್ಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಬೆಳಗಾವಿ ಇವರು ನೆರವೇರಿಸಿದರು ಮುಖ್ಯ ಅತಿಥಿಗಳಾಗಿ ಶ್ರೀ ಭೋರಸೇ ಭೂಷಣ ಗುಲಾಬರಾವ್ ಪೊಲೀಸ್ ಆಯುಕ್ತರು ಬೆಳಗಾವಿ ಉಪಸ್ಥಿತರಿದ್ದರು ದಕ್ಷಿಣ ಕನ್ನಡ ಜಿಲ್ಲೆಯ ತುಳುನಾಡ ವೈಭವ, ಕಲ್ಬುರ್ಗಿ ಜಿಲ್ಲೆಯ ಕಂಸಾಳಿ ನೃತ್ಯ, ಕೊಪ್ಪಳ ಜಿಲ್ಲೆಯ ಪಿರಮಿಡ್ ಪ್ರದರ್ಶನ, ಶಿವಮೊಗ್ಗ ಜಿಲ್ಲೆಯ ಕೋಲಾಟನೃತ್ಯ, ವಿಜಯನಗರ ಜಿಲ್ಲೆಯ ಲಂಬಾಣಿನೃತ್ಯ ಇವೆ ಮುಂತಾದವುಗಳು ಕಾರ್ಯಕ್ರಮಕ್ಕೆ ಮೆರುಗನ್ನು ನೀಡಿದವು.

ಅಗ್ನಿಶಾಮಕದಳದ ಪ್ರಾತ್ಯಕ್ಷಿಕೆ



ಶ್ರೀ ರಂಗನಾಥ ರಾಥೋಡ್, ಡಿ.ಎಫ್.ಒ., ಬೆಳಗಾವಿ ಇವರ ನೇತೃತ್ವದಲ್ಲಿ ಈ ಕಾರ್ಯಕ್ರಮವು ನಡೆಯಿತು. ಅಗ್ನಿ ಅವಘಡಗಳು ಆಗದಂತೆ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು, ಅದು ಸಂಭವಿಸಿದಾಗ ಮಾಡಬೇಕಾದ ಕಾರ್ಯಗಳ ಬಗ್ಗೆ ಪ್ರಾತ್ಯಕ್ಷಿಕೆಯನ್ನು ನೀಡಲಾಯಿತು.

ಶಾರೀರಿಕ ಕವಾಯಿತು ಪ್ರದರ್ಶನ



ಪಿರಮಿಡ್ ರಚನೆ, ಮುಂತಾದ ಶಾರೀರಿಕ ಕವಾಯಿತುಗಳನ್ನು ಸ್ಕೌಟ್ಸ್–ಗೈಡ್ಸ್‌ಗಳು ಪ್ರದರ್ಶಿಸಿದರು. ವಿವಿಧ ಉಪಕರಣಗಳು ಹಾಗೂ ಸಂಗೀತ ಈ ಕಾರ್ಯಕ್ರಮಕ್ಕೆ ಮೆರಗು ನೀಡಿದವು.



ಮ್ಯಾಜಿಕ್ ಷೋ (ಜಾದು ಪ್ರದರ್ಶನ)

ಶ್ರೀ ವಿಕ್ರಂ, ಜಾದುಗಾರರು, ಇವರು ತಮ್ಮ ಕೈಚಳಕಗಳ ಮೂಲಕ ಜಾದು ಪ್ರದರ್ಶಿಸಿ ಮಕ್ಕಳಿಗೆ ಮನರಂಜನೆ ನೀಡಿದರು.

ದಿನಾಂಕ: 31.12.2025

ಸಮಾರೋಪ ಸಮಾರಂಭ

ಅಂದು ಸಂಜೆ 5 ಗಂಟೆಗೆ ಜಾಂಬೂರೇಟ್‌ನ ಸಮಾರೋಪ ಸಮಾರಂಭ ನಡೆಯಿತು. ಶ್ರೀ ಷ.ಭ. ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು, ಹಿರೇಮಠ, ಬೆಳಗಾವಿ ಇವರು ಕಾರ್ಯಕ್ರಮದ ಸಾನಿಧ್ಯವಹಿಸಿದ್ದರು. ಶ್ರೀ ಗಜಾನನ ಮನ್ನಿಕೇರಿ, ಉಪಾಧ್ಯಕ್ಷರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಹಾಗೂ ಜಿಲ್ಲಾ ಮುಖ್ಯ ಆಯುಕ್ತರು, ಬೆಳಗಾವಿ ಇವರು ಅಧ್ಯಕ್ಷತೆವಹಿಸಿದ್ದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಪಿ.ಜಿ.ಆರ್.ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು, ಶ್ರೀ ಮಾರುತಿರಾವ ಮುಳೆ, ಮಾನ್ಯ ವಿಧಾನ ಪರಿಷತ್ ಸದಸ್ಯರು, ಕರ್ನಾಟಕ, ಶ್ರೀ ವಿದ್ಯಾಶಂಕರ್, ಎಸ್., ಮಾನ್ಯ ಉಪಕುಲಪತಿಗಳು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ, ಡಾ॥ ಪ್ರಮೋದ ಕಟ್ಟಿ, ಮಾನ್ಯ ನಿರ್ದೇಶಕರು, ಇ.ಎಂ.ಪಿ.ಆರ್.ಎ. ಬೆಂಗಳೂರು, ಉಪಸ್ಥಿತರಿದ್ದರು.



ಇವರೆಲ್ಲರ ಉಪಸ್ಥಿತಿಯಲ್ಲಿ 29ನೇ ಕರ್ನಾಟಕ ರಾಜ್ಯ ಸ್ಕೌಟ್ಸ್–ಗೈಡ್ಸ್ ಜಾಂಬೋರೇಟ್ ಸಂಪನ್ನಗೊಂಡಿತು. ಮುಂದಿನ ಜಾಂಬೋರೇಟ್ ನಡೆಸುವ ಆತಿಥ್ಯವನ್ನು ವಹಿಸಿಕೊಂಡ ಬೆಂಗಳೂರು ದಕ್ಷಿಣ ಜಿಲ್ಲೆಗೆ ಜಾಂಬೋರೇಟ್ ಧ್ವಜವನ್ನು ಸಾಂಕೇತಿಕವಾಗಿ ಹಸ್ತಾಂತರಿಸಲಾಯಿತು.

ಈ ಸಮಾರಂಭದಲ್ಲಿ ಗಣ್ಯರು ಮಾಡಿದ ಭಾಷಣದ ತುಣುಕುಗಳು ಕೆಳಕಂಡಂತಿವೆ :



ಶ್ರೀ ಷ.ಭ.ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು, ಹಿರೇಮಠ, ಬೆಳಗಾವಿ – "ಸ್ಕೌಟ್ ಮತ್ತು ಗೈಡ್‌ಗಳು ವಿಶ್ವವನ್ನು ಬದಲಾಯಿಸುವ ಕಾರ್ಯವನ್ನು ತಮ್ಮ ಸ್ವಗೃಹಗಳಿಂದ ಪ್ರಾರಂಭಿಸಬೇಕು".



ಡಾ॥ ವಿದ್ಯಾಶಂಕರ್.ಎಸ್., ಉಪಕುಲಪತಿಗಳು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ – ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು, ಯುವಜನತೆಯು ದೇಶವನ್ನು ಮುನ್ನಡೆಸಬೇಕು ಮತ್ತು ತಾಂತ್ರಿಕ ಸಂಶೋಧನೆಗಳನ್ನು ಕೈಗೊಳ್ಳಬೇಕು".



ಡಾ॥ ಪ್ರಮೋದ ಕಟ್ಟಿ, ಮಾನ್ಯ ನಿರ್ದೇಶಕರು, ಇಂ.ಎಂ.ಪಿ.ಆರ್.ಪಿ., ಬೆಂಗಳೂರು – "ದೇಶದ ಸಮಗ್ರ ಬೆಳವಣಿಗೆ ಹಾಗೂ ಅಭಿವೃದ್ಧಿಗೆ ಸಕ್ರಿಯವಾಗಿ ಕೊಡುಗೆ ನೀಡಬಲ್ಲ ಭವಿಷ್ಯತ್ತಿನ ಪ್ರಜೆಗಳನ್ನು ಸ್ಕೌಟಿಂಗ್–ಗೈಡಿಂಗ್ ಬೆಳೆಸುತ್ತದೆ"



ಶ್ರೀ ಮಾರುತಿರಾವ್ ಮುಳೆ, ಮಾನ್ಯ ವಿಧಾನ ಪರಿಷತ್ ಸದಸ್ಯರು, ಕರ್ನಾಟಕ – "ಸ್ಕೌಟಿಂಗ್–ಗೈಡಿಂಗ್ ಮೂಲಕ ಯುವಜನತೆಯು ಸದಾ ಸಿದ್ಧ" ಎಂಬ ಅದ್ಭುತವಾದ ಕೌಶಲ್ಯವನ್ನು ಮೈಗೂಡಿಸಿಕೊಳ್ಳುತ್ತಾರೆ.



ಶ್ರೀ ಪಿ.ಜಿ.ಆರ್.ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ – "ದೇಶವನ್ನು ಬೆಳೆಸುವಲ್ಲಿ ಯುವಜನತೆಯು ಸಕ್ರಿಯವಾಗಿ ಪಾಲ್ಗೊಳ್ಳಲು ಸಹಕರಿಸುವುದೇ ಸ್ಕೌಟ್–ಗೈಡ್ ಚಳವಳಿಯಾಗಿದೆ".



ಸಂಗೀತ ರಸ ಸಂಜೆ



ಅಂದು ಸಂಜೆ ಶ್ರೀ ವಿಶ್ವನಾಥ ಹಾವೇರಿ, ಇವರ ನೇತೃತ್ವದಲ್ಲಿ ಸಂಗೀತ ರಸಸಂಜೆ ನಡೆಯಿತು. ದೇಶಭಕ್ತಿ ಗೀತೆಗಳು, ಜನಪದ ಗೀತೆಗಳು, ಲಘು ಸಂಗೀತ, ಸಮಕಾಲೀನ ಹಾಡುಗಳು ಇವುಗಳನ್ನು ಪ್ರಸ್ತುತಪಡಿಸಲಾಯಿತು. ಕಾರ್ಯಕ್ರಮದ ಅಂತ್ಯದಲ್ಲಿ ಹೊಸವರ್ಷವನ್ನು ಬರಮಾಡಿಕೊಳ್ಳುವ ಮೂಲಕ ಸಂಗೀತ ರಸಸಂಜೆ ಮುಕ್ತಾಯವಾಯಿತು.

ಪಾರಂಪರಿಕ ವೇಷಭೂಷಣ (ಉಡುಗೆ)



ತಮ್ಮ–ತಮ್ಮ ಜಿಲ್ಲೆಗಳ ಸಾಂಪ್ರದಾಯಕ ವೇಶಭೂಷಣಗಳನ್ನು ಧರಿಸಿ ಎಲ್ಲರ ಗಮನ ಸೆಳೆದರು.

ದಿನಾಂಕ: 01.01.2026.



ಸರ್ವಧರ್ಮ ಪ್ರಾರ್ಥನೆ.

ಅಂದು ಬೆಳಗ್ಗೆ 8.00 ಗಂಟೆಗೆ ನಾಡೋಜ ಡಾ॥ ಗೊ.ರು.ಚನ್ನಬಸಪ್ಪ ಇವರ ಅಧ್ಯಕ್ಷತೆಯಲ್ಲಿ ಸರ್ವಧರ್ಮ ಪ್ರಾರ್ಥನೆ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಶ್ರೀ ಪಿ.ಜಿ.ಆರ್.ಸಿಂಧ್ಯ, ಶ್ರೀ ಕೆ.ಗಂಗಪ್ಪಗೌಡ, ಶ್ರೀ ಗಜಾನನ ಮನ್ನಿಕೇರಿ, ಶ್ರೀಮತಿ ಮುಕ್ತ ಬಿ. ಕಾಗಲಿ, ಶ್ರೀಮತಿ ಪ್ರಭಾವತಿ ಪಾಟೀಲ, ಇತರ ರಾಜ್ಯ ಹಾಗೂ ಜಿಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು. ವಿವಿಧ ಧರ್ಮಗ್ರಂಥಗಳಿಂದ ಆಯ್ದಭಾಗಗಳ ಪಠಣ ಮಾಡಲಾಯಿತು.



ಅಂದು ಮಧ್ಯಾಹ್ನ ರಾಷ್ಟ್ರಧ್ವಜ, ವಿಶ್ವಸ್ಕೌಟ್ ಧ್ವಜ, ವಿಶ್ವಗೈಡ್ ಧ್ವಜ, ಭಾರತ್ ಸ್ಕೌಟ್ ಮತ್ತು ಗೈಡ್ ಧ್ವಜ ಮತ್ತು ಜಾಂಬೋರೇಟ್ ಧ್ವಜಗಳನ್ನು ವಿದ್ಯುಕ್ತವಾಗಿ ಅವರೋಹಣ ಮಾಡಲಾಯಿತು. ಆನಂತರ ಶ್ರೀ ಪಿ.ಜಿ.ಆರ್.ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಜಾಂಬೋರೇಟ್ ಮುಕ್ತಾಯಗೊಂಡಿದೆ ಎಂದು ಘೋಷಿಸುವ ಮೂಲಕ ರಾಜ್ಯದ 29ನೇ ರಾಜ್ಯ ಜಾಂಬೋರೇಟ್‌ಗೆ ತೆರೆಬಿದ್ದಿತು.





107ನೇ ರಾಜ್ಯ ಪರಿಷತ್ ಮಹಾಸಭೆ



ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯ 107ನೇ ರಾಜ್ಯ ಪರಿಷತ್ ವಾರ್ಷಿಕ ಮಹಾಸಭೆಯನ್ನು ದಿನಾಂಕ:28.12.2025ರಂದು ಬೆಳಗ್ಗೆ 11.00 ಗಂಟೆಗೆ ಫಿನಿಕ್ಸ್ ಪಬ್ಲಿಕ್ ಶಾಲೆ, ಹೊನಗಾ ಗ್ರಾಮ, ಬೆಳಗಾವಿಯಲ್ಲಿ ನೆರವೇರಿಸಲಾಯಿತು. ಸಾಮೂಹಿಕ ಪ್ರಾರ್ಥನೆ ನಂತರ ಶ್ರೀ ಕೆ.ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿಗಳು ಸರ್ವರನ್ನು ಸ್ವಾಗತಿಸುವ ಮೂಲಕ ಸಭೆಯು ಪ್ರಾರಂಭವಾಯಿತು.

ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪರವರು, ಉಪಾಧ್ಯಕ್ಷರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಇವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಚಿನ್ನಸ್ವಾಮಿ ರೆಡ್ಡಿ, ರಾಜ್ಯ ಆಯುಕ್ತರು (ಸ್ಕೌಟ್ಸ್) ವಯಸ್ಕ ಸಂಪನ್ಮೂಲ ಮತ್ತು ರಾಜ್ಯ ಸಂಸ್ಥೆಯ ಪದಾಧಿಕಾರಿಗಳು ದೀಪ ಬೆಳಗಿಸುವ ಮೂಲಕ ಸಭೆಯನ್ನು ಉದ್ಘಾಟಿಸಿದರು.

ಕರ್ನಾಟಕದ ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಸಿದ್ಧರಾಮಯ್ಯರವರು ಸಂಸ್ಥೆಯ 107ನೇ ವಾರ್ಷಿಕ ಸಾಮಾನ್ಯ ಮಹಾಸಭೆಗೆ ಶುಭಹಾರೈಸಿ ನೀಡಿದ್ದ ಸಂದೇಶವನ್ನು ಶ್ರೀಮತಿ ಆಶಾ ಪ್ರಸನ್ನಕುಮಾರ್, ಉಪಾಧ್ಯಕ್ಷರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಇವರು ಸಭೆಯಲ್ಲಿ ಓದಿದರು.

ನಂತರ ಶ್ರೀ ಕೆ.ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿಗಳು 107ನೇ ರಾಜ್ಯ ಪರಿಷತ್ ಸಭೆಯ ಅಜೆಂಡಾ ಪ್ರಕಾರ ಸಭೆಯನ್ನು ಪ್ರಾರಂಭಿಸಿ ನಡೆಸಿದರು. ಶ್ರೀಮತಿ ಸಿ.ಮಂಜುಳ, ರಾಜ್ಯ ಸಂಘಟನಾ ಆಯುಕ್ತರು (ಗೈಡ್ಸ್)ರವರು ನಿಧನಹೊಂದಿದ ಮಹನೀಯರುಗಳ ವಿವರಗಳನ್ನು ಓದಿದರು. ನಂತರ ಶ್ರೀ ಎಂ.ಪ್ರಭಾಕರ್‌ಭಟ್, ರಾಜ್ಯ ಸಂಘಟನಾ ಆಯುಕ್ತರು (ಸ್ಕೌಟ್ಸ್)ರವರು ಅನುಮತಿ ಪಡೆದು ಸಭೆಗೆ ಗೈರು ಹಾಜರಾದವರ ವಿವರಗಳನ್ನು ಸಭೆಗೆ ಓದಿ ತಿಳಿಸಿದರು. ಮುಂದುವರೆದಂತೆ, ಸಭೆಯು ಕಾರ್ಯಸೂಚಿಯಲ್ಲಿನ ವಿಷಯಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ಸಭೆಯ ಗೌರವಾನ್ವಿತ ಸದಸ್ಯರಿಂದ ಅನುಮೋದನೆ ಪಡೆಯಲಾಯಿತು. ನಂತರ ರಾಜ್ಯ ಸಂಸ್ಥೆ ಮತ್ತು ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಸಭೆಯಲ್ಲಿ ಸ್ಕೌಟ್–ಗೈಡ್ ಚಳವಳಿಯ ಅಭಿವೃದ್ಧಿಯ ಕುರಿತು ಮಾತನಾಡಿ ಮಾರ್ಗದರ್ಶನ ನೀಡಿದರು.

ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ, ಉಪಾಧ್ಯಕ್ಷರು ಹಾಗೂ ಪರಿಷತ್ ಸಭೆಯ ಅಧ್ಯಕ್ಷರು ಮಾತನಾಡಿ ಸಭೆಯ ಗೌರವಾನ್ವಿತ ಸದಸ್ಯರಿಗೆ ಅಭಿನಂದಿಸಿ, 2024–25ನೇ ಸಾಲಿನ ರಾಜ್ಯದ ಪ್ರಗತಿಯನ್ನು ಪ್ರಶಂಶಿಸಿದರು. ರಾಜ್ಯ ಮುಖ್ಯ ಆಯುಕ್ತರು 24 ಗಂಟೆಯೂ ಸಂಸ್ಥೆಯ ಬೆಳವಣಿಗೆಯ ಬಗ್ಗೆ ಚಿಂತಿಸಿ ತಮ್ಮ ಅಮೂಲ್ಯ ಸೇವೆಯನ್ನು ನಮ್ಮ ಸಂಸ್ಥೆಗೆ ನೀಡುತ್ತಿರುವುದು ಅಭಿನಂದನಾರ್ಹ ಎಂದು ತಿಳಿಸಿ, ಸ್ಕೌಟ್–ಗೈಡ್ ಚಳವಳಿಯನ್ನು ದಳ, ಸ್ಥಳೀಯ ಹಾಗೂ ಜಿಲ್ಲಾ ಸಂಸ್ಥೆಗಳ ಎಲ್ಲಾ ಪದಾಧಿಕಾರಿಗಳು ಕ್ರಿಯಾಶೀಲರಾಗಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಲು ಮಹಾಸಭೆಯ ಸದಸ್ಯರನ್ನು ಕೋರಿದರು

ಶ್ರೀ ಪಿ.ಜಿ.ಆರ್.ಸಿಂಧ್ಯರವರು, ಮಾನ್ಯ ರಾಜ್ಯ ಮುಖ್ಯ ಆಯುಕ್ತರು ಹಾಗೂ ಶ್ರೀ ಗಜಾನನ ಬಿ. ಮನ್ನಿಕೇರಿರವರು, ಜಿಲ್ಲಾ ಮುಖ್ಯ ಆಯುಕ್ತರು, ಬೆಳಗಾವಿ ಇವರುಗಳು ರಾಜ್ಯ ಪರಿಷತ್ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ಜಿಲ್ಲೆಗಳ ಜಿಲ್ಲಾ ಮುಖ್ಯ ಆಯುಕ್ತರುಗಳಿಗೆ 29ನೇ ಕರ್ನಾಟಕ ರಾಜ್ಯ ಸ್ಕೌಟ್ಸ್ ಗೈಡ್ಸ್ ಜಾಂಬೋರೇಟ್‌ನ ನೆನಪಿನ ಕಾಣಿಕೆಗಳನ್ನು ನೀಡಿ, ಗೌರವಿಸಿ, ಸನ್ಮಾನಿಸಿದರು.

29ನೇ ಸ್ಕೌಟ್–ಗೈಡ್ ಜಾಂಬೋರೇಟ್‌ನ್ನು ಆಯೋಜನೆಗೆ ಸ್ಥಳಾವಕಾಶ ಕಲ್ಪಿಸಿದ ಫಿನಿಕ್ಸ್ ಪಬ್ಲಿಕ್ ಶಾಲೆಯ ಅಧ್ಯಕ್ಷರು ಹಾಗೂ ಮಾಜಿ ವಿಧಾನ ಪರಿಷತ್ ಸದಸ್ಯರಾದ ಶ್ರೀ ವಿವೇಕ್ ಪಾಟೀಲ್ ಅವರಿಗೆ ಹಾಗೂ ಇದಕ್ಕೆ ಸಹಕಾರ ನೀಡಿದ ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ, ಸಹಾಯಕ ರಾಜ್ಯ ಆಯುಕ್ತರು (ಸ್ಕೌಟ್ಸ್) ಇವರುಗಳಿಗೆ ಮಾನ್ಯ ರಾಜ್ಯ ಮುಖ್ಯ ಆಯುಕ್ತರು ಧನ್ಯವಾದಗಳನ್ನು ತಿಳಿಸಿ, ಸಭೆಯ ಪರವಾಗಿ ಅಭಿನಂದಿಸಿದರು.

ಶ್ರೀ ಪಿ.ಜಿ.ಆರ್.ಸಿಂಧ್ಯ, ಮಾನ್ಯ ರಾಜ್ಯ ಮುಖ್ಯ ಆಯುಕ್ತರು ಮಾತನಾಡಿ, ಎಲ್ಲರೂ ಒಗ್ಗಟ್ಟಿನಲ್ಲಿ ತಂಡದಲ್ಲಿ ಕಾರ್ಯನಿರ್ವಹಿಸಬೇಕು, ಬೇಡನ್ ಪೋವೆಲ್‌ರವರ ಹ್ಯಾಟ್ರೋಲ್ ಪದ್ಧತಿಯನ್ನು ನಾವೆಲ್ಲರೂ ಅನುಸರಿಸಬೇಕೆಂದರು. ಕರ್ನಾಟಕ ರಾಜ್ಯದಲ್ಲಿ ಈಗಾಗಲೇ 2ನೇ ಹಂತದ ಪದಾಧಿಕಾರಿಗಳ ತಂಡ ರಚನೆಯಾಗಿದ್ದು, ಇದೇ ರೀತಿ, ಸ್ಥಳೀಯ ಮತ್ತು ಜಿಲ್ಲಾ ಮಟ್ಟದಲ್ಲಿ ಪದಾಧಿಕಾರಿಗಳ ತಂಡಗಳನ್ನು ಸಿದ್ಧಪಡಿಸಿ, ಕಾರ್ಯನಿರ್ವಹಿಸಬೇಕೆಂದರು. ಇಡೀ ದೇಶದಲ್ಲಿ ಸ್ಕೌಟ್ –ಗೈಡ್ ಚಳವಳಿ ಬೆಳೆಯಬೇಕು. ಸ್ಕೌಟಿಂಗ್–ಗೈಡಿಂಗ್ ಶಿಕ್ಷಣದ ಅವಿಭಾಜ್ಯ ಅಂಗವಾಗಬೇಕು ಎಂದರು. ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರ, ರಾಷ್ಟ್ರೀಯ ಮತ್ತು ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ, ಬೆಂಗಳೂರು ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯ ಸಹಯೋಗದೊಂದಿಗೆ ಯುವ ಆಪದಮಿತ್ರ ಯೋಜನೆಯ ಅಡಿಯಲ್ಲಿ ವಿಪತ್ತು ನಿರ್ವಹಣೆ ಬಗ್ಗೆ ರೋವರ್ಸ್–ರೇಂಜರ್ಸ್ ಮತ್ತು ದಳನಾಯಕರುಗಳಿಗೆ ವಿಪತ್ತು ನಿರ್ವಹಣಾ ತರಬೇತಿ ಶಿಬಿರಗಳನ್ನು ಆಯೋಜಿಸಲಾಗುತ್ತಿರುವುದನ್ನು ಸಭೆಯಲ್ಲಿ ತಿಳಿಸಿದರು. ಜೆ.ಪಿ.ನಗರದಲ್ಲಿ ಶ್ರೀ ಜಯಪ್ರಕಾಶ್ ನಾರಾಯಣರವರ ಹೆಸರಿನಲ್ಲಿ ತಾವು ಮುಕ್ತದಳವನ್ನು ಪ್ರಾರಂಭಿಸಿರುವುದಾಗಿ ತಿಳಿಸಿದರು.

ಬೆಳಗಾವಿಯಲ್ಲಿ ಆಯೋಜಿಸಿರುವ 29ನೇ ಕರ್ನಾಟಕ ರಾಜ್ಯ ಸ್ಕೌಟ್ಸ್–ಗೈಡ್ಸ್ ಜಾಂಬೋರೇಟ್‌ನ ಯಶಸ್ವಿ ನಿರ್ವಹಣೆಗೆ ಜಿಲ್ಲಾಡಳಿತದ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರುಗಳು ಮಾನ್ಯ ಜಿಲ್ಲಾಧಿಕಾರಿಗಳು, ಮಾನ್ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಶಿಕ್ಷಣ ಇಲಾಖೆಯ ಅಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಹಾಗೂ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಗಜಾನನ ಬಿ. ಮನ್ನಿಕೇರಿ, ಜಿಲ್ಲಾ ಆಯುಕ್ತರು (ಗೈಡ್ಸ್) ಶ್ರೀಮತಿ ಪ್ರಭಾವತಿ ಬಿ. ಪಾಟೀಲ್, ಜಿಲ್ಲಾ ಆಯುಕ್ತರು (ಸ್ಕೌಟ್ಸ್) ಶ್ರೀ ಲಕ್ಷ್ಮಣರಾವ್ ಯಕ್ಕುಂಡಿ, ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ವೆಂಕಟೇಶ್ ಎಸ್.ಬೀಳಗಿ ಮತ್ತು ಬೆಳಗಾವಿ ಜಿಲ್ಲಾ ಹಾಗೂ ಸ್ಥಳೀಯ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳಿಗೆ ಅಭಿನಂದನೆಗಳು ಹಾಗೂ ಧನ್ಯವಾದಗಳನ್ನು ತಿಳಿಸಿದರು.

ರಾಜ್ಯ ಸಂಸ್ಥೆಯಿಂದ ಸ್ಥಳೀಯ ಮತ್ತು ಜಿಲ್ಲಾ ಸಂಸ್ಥೆಗಳಿಗೆ ಬಿಡುಗಡೆಯಾಗುವ ಅನುದಾನ ಮತ್ತು ಇತರೆ ಆದಾಯದ ಮೂಲಗಳಿಂದ ಬಂದಂತಹ ಅನುದಾನಗಳ ಲೆಕ್ಕ–ಪತ್ರಗಳನ್ನು ಆಡಿಟ್ ಮಾಡಿಸಿ, ವರದಿಯನ್ನು ರಾಜ್ಯ ಸಂಸ್ಥೆಗೆ ಸರಿಯಾದ ಸಮಯಕ್ಕೆ ಸಲ್ಲಿಸಬೇಕೆಂದು ತಿಳಿಸಿದರು. ಸ್ಥಳೀಯ ಮತ್ತು ಜಿಲ್ಲಾ ಸಂಸ್ಥೆಗಳು ನಿವೇಶನ ಮತ್ತು ಸ್ವತ್ತುಗಳ ದಾಖಲಾತಿಗಳನ್ನು ಸರಿಯಾರಿ ನಿರ್ವಹಿಸಬೇಕು ಹಾಗೂ ಕಾಲಕಾಲಕ್ಕೆ ನವೀಕರಣ ಮಾಡಿಸಿ, ಸ್ವತ್ತುಗಳನ್ನು ಸಂರಕ್ಷಿಸಿ, ಅಭಿವೃದ್ಧಿಪಡಿಸುವ ಮೂಲಕ ಆದಾಯದ ಮೂಲಗಳನ್ನು ಹೆಚ್ಚಿಸಿಕೊಳ್ಳಬೇಕೆಂದರು.

ಸಂಸ್ಥೆಯ ಬೆಳವಣಿಗೆಗೆ ಶ್ರಮಿಸಿರುವ ಮಾಜಿ ರಾಜ್ಯ ಮುಖ್ಯ ಆಯುಕ್ತರುಗಳನ್ನು ಸಭೆಯಲ್ಲಿ ಸ್ಮರಿಸಿದರು ಹಾಗೂ ಅವರು ರಾಜ್ಯ ಮುಖ್ಯ ಆಯುಕ್ತರಾಗಿ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸಿದ ಕೊಂಡಜ್ಜಿ ಬಸಪ್ಪರವರ ಕುಟುಂಬಕ್ಕೆ ಧನ್ಯವಾದಗಳನ್ನು ಸಲ್ಲಿಸಿದರು.

ಸಂಸ್ಥೆಯ ಅನೇಕ ಪದಾಧಿಕಾರಿಗಳಿಗೆ ರಾಷ್ಟ್ರೀಯ ಸಂಸ್ಥೆಯಿಂದ ಸಿಲ್ವರ್ ಸ್ಟಾರ್, ಬಾರ್–ಟು–ಸಿಲ್ವರ್‌ಸ್ಟಾರ್ ಹಾಗೂ ಸಿಲ್ವರ್ ಎಲಿಫೆಂಟ್ ಪ್ರಶಸ್ತಿಗಳು ಲಭಿಸಿದ್ದು, ಅವರುಗಳಿಗೆ ರಾಜ್ಯ ಸಂಸ್ಥೆಯ ಪರವಾಗಿ ಅಭಿನಂದನೆಗಳನ್ನು ಸಲ್ಲಿಸಿದರು.

26 ಸೆಪ್ಟೆಂಬರ್ 2026ರಂದು ಬೆಂಗಳೂರಿನ ಲೋಕಭವನದಲ್ಲಿ ಗೌರವಾನ್ವಿತ ರಾಜ್ಯಪಾಲರಿಂದ ಜಿಲ್ಲಾ ಮುಖ್ಯ ಆಯುಕ್ತರಿಗೆ, ಜಿಲ್ಲಾ ಕಾರ್ಯದರ್ಶಿಯವರಿಗೆ ಹಾಗೂ ಲೀಡರ್ ಟ್ರೈನರ್‌ಗಳಿಗೆ ಸನ್ಮಾನವನ್ನು ಏರ್ಪಡಿಸಲಾಗಿತ್ತು. ಸದರಿ ಸಂದರ್ಭದಲ್ಲಿ ಭಾಗವಹಿಸಲು ಸಾಧ್ಯವಾಗದಿದ್ದವರುಗಳಿಗೆ ಮಾನ್ಯ ರಾಜ್ಯ ಮುಖ್ಯ ಆಯುಕ್ತರು ಮತ್ತು ವೇದಿಕೆಯಲ್ಲಿರುವ ಗಣ್ಯರುಗಳು ಪ್ರಶಸ್ತಿಯನ್ನು ನೀಡಿ, ಗೌರವಿಸಿ ಅಭಿನಂದಿಸಿದರು.

ಉತ್ತರ ಪ್ರದೇಶದ ಲಕ್ನೋದಲ್ಲಿ ನಡೆದ ರಾಷ್ಟ್ರೀಯ ಜಾಂಬೂರಿ ಸಂದರ್ಭದಲ್ಲಿ ದಿನಾಂಕ: **26.11.2025**ರಂದು ರಾಷ್ಟ್ರೀಯ ಸಂಸ್ಥೆಯಿಂದ ನೀಡಲಾದ ಸಿಲ್ವರ್ ಸ್ಟಾರ್, ಬಾರ್–ಟು–ಸಿಲ್ವರ್ ಸ್ಟಾರ್, ಸಿಲ್ವರ್ ಎಲಿಫೆಂಟ್ ಪ್ರಶಸ್ತಿಯನ್ನು ಪಡೆದವರಿಗೆ ಉತ್ತರ ಪ್ರದೇಶದ ಗೌರವಾನ್ವಿತ ರಾಜ್ಯಪಾಲರಾದ ಶ್ರೀಮತಿ ಆನಂದಿ ಬೆನ್ ಪಟೇಲ್‌ರವರು, ರಾಜಭವನ, ಉತ್ತರ ಪ್ರದೇಶದಲ್ಲಿ ನೀಡಲಾಗಿದ್ದು, ಸಂಬಂಧಪಟ್ಟ ಪದಕಗಳನ್ನು ರಾಜ್ಯ ಪರಿಷತ್ ಸಭೆಯಲ್ಲಿ ಮಾನ್ಯ ರಾಜ್ಯ ಮುಖ್ಯ ಆಯುಕ್ತರು ಮತ್ತು ವೇದಿಕೆಯಲ್ಲಿದ್ದ ಗಣ್ಯರುಗಳು ನೀಡಿ ಗೌರವಿಸಿ ಅಭಿನಂದಿಸಿದರು.

2016–17ನೇ ಸಾಲಿನ ರಾಷ್ಟ್ರಪತಿ ಪ್ರಶಸ್ತಿ ಪಡೆದಿರುವ ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳಿಗೆ ರಾಷ್ಟ್ರೀಯ ಸಂಸ್ಥೆಯವರು ನೀಡಿರುವ ಕೋಟಾದನ್ವಯ ದಿನಾಂಕ:**31.08.2025**ರಂದು ಭಾರತ್ ಮಂಡಪಮ್, ನವದೆಹಲಿಯಲ್ಲಿ ನಡೆದ ರಾಷ್ಟ್ರಪತಿ ರ‍್ಯಾಲಿಯಲ್ಲಿ ಭಾಗವಹಿಸಿ ಶ್ರೀ ಮನ್ಸುಖ್ ಮಾಂಡವೀಯಾ, ಕಾರ್ಮಿಕ, ಉದ್ಯೋಗ, ಕ್ರೀಡಾ ಮತ್ತು ಯುವ ಸಬಲೀಕರಣ ಸಚಿವರು, ಭಾರತ ಸರ್ಕಾರ, ಇವರಿಂದ ಪ್ರಶಸ್ತಿಗಳನ್ನು ಸ್ವೀಕರಿಸಿರುತ್ತಾರೆ. ಈಗಾಗಲೇ ಬೆಂಗಳೂರು ದಕ್ಷಿಣ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ರಾಷ್ಟ್ರಪತಿ ಪ್ರಮಾಣ ಪತ್ರಗಳನ್ನು ಜಿಲ್ಲೆಗೆ ನೀಡಲಾಗಿರುತ್ತದೆ. ರಾಷ್ಟ್ರ ಪ್ರಶಸ್ತಿ ಪಡೆದಿದ್ದು, ಅನಿವಾರ್ಯ ಕಾರಣಗಳಿಂದಾಗಿ ರಾಷ್ಟ್ರಪತಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಭಾಗವಹಿಸಲಾಗದಿರುವ ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳಿಗೆ ಮಾನ್ಯ ರಾಜ್ಯ ಮುಖ್ಯ ಆಯುಕ್ತರು ಮತ್ತು ವೇದಿಕೆಯಲ್ಲಿರುವ ಗಣ್ಯರುಗಳು ಪ್ರಶಸ್ತಿ ನೀಡಿ ಗೌರವಿಸಿ ಅಭಿನಂದಿಸಿದರು.

ಮಾನ್ಯ ಮುಖ್ಯ ರಾಷ್ಟ್ರೀಯ ಆಯುಕ್ತರಾದ ಡಾ॥ ಕೆ.ಕೆ.ಖಂಡೇಲವಾಲಾರವರು ಮತ್ತು ಅಪರ ಮುಖ್ಯ ರಾಷ್ಟ್ರೀಯ ಆಯುಕ್ತರಾದ ಶ್ರೀ ಎಂ.ಎ.ಖಾಲಿದ್‌ರವರು ದಿನಾಂಕ:**27.12.2025**ರಂದು ನಡೆದ 29ನೇ ಕರ್ನಾಟಕ ರಾಜ್ಯ ಸ್ಕೌಟ್ಸ್–ಗೈಡ್ಸ್ ಜಾಂಬೂರೇಟ್‌ನ ಉದ್ಘಾಟನಾ ಸಮಾರಂಭದಲ್ಲಿ ಶ್ರೀ ಪಿ.ಜಿ.ಆರ್.ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರವರ ಸೇವೆಯನ್ನು ಶ್ಲಾಘಿಸಿ, ರಾಷ್ಟ್ರೀಯ ಸಂಸ್ಥೆಯಿಂದ ನೀಡಿರುವ ಸ್ಮರಣಿಕೆಯನ್ನು ಶ್ರೀ ಎಂ.ಎ.ಖಾಲಿದ್‌ರವರು ಸಭೆಯ ಸದಸ್ಯರುಗಳಿಗೆ ಪ್ರದರ್ಶಿಸಿ ರಾಜ್ಯ ಮುಖ್ಯ ಆಯುಕ್ತರಿಗೆ ನೀಡಿದರು.

ಶ್ರೀ ಗಜಾನನ ಬಿ. ಮನ್ನಿಕೇರಿ, ಜಿಲ್ಲಾ ಮುಖ್ಯ ಆಯುಕ್ತರು ಮಾತನಾಡಿ, 29ನೇ ಕರ್ನಾಟಕ ರಾಜ್ಯ ಸ್ಕೌಟ್ಸ್ ಮತ್ತು ಗೈಡ್ಸ್ ಜಾಂಬೂರೇಟ್‌ನ ಆಚರಣೆಯ ಈ ಸಂದರ್ಭದಲ್ಲಿ ಬೆಳಗಾವಿಯಲ್ಲಿ 107ನೇ ರಾಜ್ಯ ಪರಿಷತ್ ಸಭೆಯನ್ನು ನೆರವೇರಿಸುತ್ತಿರುವುದು ಸಂತೋಷದ ವಿಷಯ. ಮಾನ್ಯ ರಾಜ್ಯ ಮುಖ್ಯ ಆಯುಕ್ತರ ಆಶಯದಂತೆ, ಸದಸ್ಯರುಗಳೆಲ್ಲರೂ ಜಾಂಬೂರೇಟ್‌ಗೆ ಆಗಮಿಸಿ, ಯಶಸ್ವಿ ನಿರ್ವಹಣೆಗೆ ಸಹಕಾರ ನೀಡುತ್ತಿರುವುದಕ್ಕೆ ಧನ್ಯವಾದಗಳನ್ನು ತಿಳಿಸಿದರು. ಈ ಜಾಂಬೂರೇಟ್‌ನ್ನು ಆಯೋಜಿಸಲು ಅವಕಾಶ ಮಾಡಿಕೊಟ್ಟ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್.ಸಿಂಧ್ಯರವರಿಗೆ ಆಭಾರಿಯಾಗಿದ್ದೇನೆಂದು ಸಭೆಗೆ ತಿಳಿಸಿದರು.

ಶ್ರೀ ಎಂ.ಪ್ರಭಾಕರ್‌ಭಟ್, ರಾಜ್ಯ ಸಂಘಟನಾ ಆಯುಕ್ತರು (ಸ್ಕೌಟ್ಸ್) ಇವರು ರಾಜ್ಯ ಮಟ್ಟದ ಮತ್ತು ವಿಭಾಗೀಯ ಮಟ್ಟದ ಪಾರಿತೋಷಕ ಪ್ರಶಸ್ತಿಗಳ ವಿವರಗಳನ್ನು ಸಭೆಯ ಗಮನಕ್ಕೆ ತಂದರು. ಪ್ರಶಸ್ತಿ ಪಡೆದ ಜಿಲ್ಲಾ ಪದಾಧಿಕಾರಿಗಳು ಪರ್ಯಾಯ ಪಾರಿತೋಷಕಗಳನ್ನು ಸ್ವೀಕರಿಸಿದರು. ಶ್ರೀ ಎಂ.ಎಸ್.ಸತೀಶ್, ಜಂಟಿ ರಾಜ್ಯ ಕಾರ್ಯದರ್ಶಿಗಳು (ಸ್ಕೌಟ್ಸ್)ರವರು ವಂದಿಸಿದರು. ಶ್ರೀಮತಿ ಕೆ.ವಿ.ಶಾಮಲ, ರಾಜ್ಯ ತರಬೇತಿ ಆಯುಕ್ತರು (ಗೈಡ್ಸ್)ರವರು ನಿರೂಪಿಸಿದರು. ರಾಷ್ಟ್ರಗೀತೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.



ರಾಜ್ಯ ಮಟ್ಟದ ಪಾರಿತೋಷಕ ಪ್ರಶಸ್ತಿಪಡೆದ ಜಿಲ್ಲೆಗಳ ವಿವರಗಳು



ಪ್ರಥಮ ಸ್ಥಾನ - ದಕ್ಷಿಣ ಕನ್ನಡ ಜಿಲ್ಲೆ
ಅಬ್ದುಲ್ ಗಫಾರ್ ಪರ್ಯಾಯ ಫಲಕ



ದ್ವಿತೀಯ ಸ್ಥಾನ - ಬೆಳಗಾವಿ ಜಿಲ್ಲೆ
ಜಸ್ಟೀಸ್ ಶಂಕರನಾರಾಯಣರಾವ್ ಪರ್ಯಾಯ ಫಲಕ



ತೃತೀಯ ಸ್ಥಾನ - ಉಡುಪಿ ಜಿಲ್ಲೆ
ಮೇಜರ್ ವೈ.ವಿ.ಕೆ. ಮೂರ್ತಿ ಪರ್ಯಾಯ ಫಲಕ

ವಿಭಾಗ ಮಟ್ಟದ ಪರ್ಯಾಯ ಫಲಕ – ಪ್ರಶಸ್ತಿಗಳು

ಬೆಂಗಳೂರು ವಿಭಾಗ



ಪ್ರಥಮ ಸ್ಥಾನ - ಬೆಂಗಳೂರು ದಕ್ಷಿಣ ಜಿಲ್ಲೆ

ವಿ.ಪಿ. ದೀನದಯಾಳು ನಾಯ್ಡು ಪರ್ಯಾಯ ಫಲಕ



ದ್ವಿತೀಯ ಸ್ಥಾನ - ಬೆಂಗಳೂರು ಉತ್ತರ ಜಿಲ್ಲೆ



ತೃತೀಯ ಸ್ಥಾನ - ದಾವಣಗೆರೆ

ಮೈಸೂರು ವಿಭಾಗ



ಪ್ರಥಮ ಸ್ಥಾನ - ಮೈಸೂರು ಜಿಲ್ಲೆ

ಜೆ.ಬಿ. ಮಲ್ಲಾರಾಧ್ಯ ಪರ್ಯಾಯ ಫಲಕ



ದ್ವಿತೀಯ ಸ್ಥಾನ - ಹಾಸನ ಜಿಲ್ಲೆ



ತೃತೀಯ ಸ್ಥಾನ - ಚಾಮರಾಜನಗರ ಜಿಲ್ಲೆ

ಬೆಳಗಾವಿ ವಿಭಾಗ



ಪ್ರಥಮ ಸ್ಥಾನ - ಧಾರವಾಡ ಜಿಲ್ಲೆ

ಕೊಂಡಜ್ಜಿ ಬಸಪ್ಪ ಪರ್ಯಾಯ ಫಲಕ



ದ್ವಿತೀಯ ಸ್ಥಾನ - ಬಾಗಲಕೋಟೆ ಜಿಲ್ಲೆ



ತೃತೀಯ ಸ್ಥಾನ - ಶಿರಸಿ ಜಿಲ್ಲೆ

ಕಲಬುರಗಿ ವಿಭಾಗ



ಪ್ರಥಮ ಸ್ಥಾನ - ರಾಯಚೂರು ಜಿಲ್ಲೆ

ಪ್ರೊ. ಪಿ. ಶಿವಶಂಕರ್ ಪರ್ಯಾಯ ಫಲಕ



ದ್ವಿತೀಯ ಸ್ಥಾನ - ಬೀದರ್ ಜಿಲ್ಲೆ



ತೃತೀಯ ಸ್ಥಾನ - ಕಲಬುರಗಿ ಜಿಲ್ಲೆ

29ನೇ ಕರ್ನಾಟಕ ರಾಜ್ಯ ಜಾಂಬೋರೇಟ್ ಬಗ್ಗೆ ಅನಿಸಿಕೆಗಳು

* ಫನ್ ಬೇಸ್‌ನ ಸೂಜಿದಾರ, ಲಗೋರಿ, ನಿಂಬೆ ಚಮಚ, ಚೆಂಡುದಾಂಡು ಆಟಗಳು ಮನೋರಂಜನೆ ಜೊತೆಗೆ ಏಕಾಗ್ರತೆಯನ್ನು ಹೆಚ್ಚಿಸಿತು. ಜಾಂಬೋರೇಟ್‌ನ ಯಶಸ್ಸಿಗೆ ಎಲ್ಲಾ ಸರ್ವೀಸ್ ರೋವರ್ಸ್, ರೇಂಜರ್ಸ್ ಮತ್ತು ಸಿಬ್ಬಂದಿವರ್ಗ ಬಹಳ ಶ್ರಮಿಸುತ್ತಿದ್ದಾರೆ. ಇದು ಜೀವನ ಪರ್ಯಂತ ನೆನಪಿನಲ್ಲಿ ಉಳಿಯಲಿದೆ. – ಪೂರ್ವಿ & ಹಂಸವೇಣಿ, ಸೇಂಟ್ ಜಾನ್ಸ್ ಆಂಗ್ ಮಾಧ್ಯಮ ಶಾಲೆ, ಅರಸೀಕೆರೆ, ಹಾಸನ.

* ಜಾಂಬೋರೇಟ್‌ನಲ್ಲಿ ಎಲ್ಲವೂ ಇಷ್ಟವಾಗುತ್ತಿದೆ. ಸ್ಕೌಟ್ ಸ್ಕಿಲ್ಲೋ ರಾಮಾ, ಟೆಂಟ್ ಮೇಕಿಂಗ್, ಲೀಫ್ ಆರ್ಟ್, ಕೈಟ್ ತಯಾರಿಕೆ, ಮಾಡೆಲ್ ತಯಾರಿಕೆ ಹೀಗೆ ಎಲ್ಲವೂ ಚೆನ್ನಾಗಿದ್ದವು. ನಾನು ನನ್ನ ಸ್ನೇಹಿತರೆಲ್ಲರೂ ಇಲ್ಲಿ ಆನಂದಿಸುತ್ತಿದ್ದೇವೆ. – ಝೈಬಾ ತಬಾಸುಮ್, ಕೆ.ಕೆ.ಆಂಗ್ಲ ಮಾಧ್ಯಮ ಶಾಲೆ, ಬೆಂಗಳೂರು ದಕ್ಷಿಣ.

* ನಾವು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಜ್ಞಾನ ಸಂಗಮಕ್ಕೆ ಶೈಕ್ಷಣಿಕ ಪ್ರವಾಸ ಕೈಗೊಂಡಿದ್ದೆವು. ಅಲ್ಲಿ ರೋಬೋಟ್ಸ್ ಜೊತೆಗೆ ಸಂವಾದ ಮಾಡುವ ರೀತಿ ಮನಕ್ಕೆ ಖುಷಿ ಕೊಟ್ಟಿತು. ಇನ್ನಿತರ ಇಂಜಿನಿಯರಿಂಗ್ ವಿಭಾಗದ ಪರಿಕರಗಳನ್ನು ನಮಗೆ ವೀಕ್ಷಿಸಲು ಅನುವು ಮಾಡಿಕೊಟ್ಟರು. ವೀಕ್ಷಣಾ ಕನ್ನಡಕವನ್ನು ನಮಗೆ ನೀಡುವುದರ ಮೂಲಕ ಅಂತರಿಕ್ಷದ ಅನುಭವವನ್ನು ತಿಳಿಸಿಕೊಟ್ಟರು. ಇತ್ತೀಚೆಗೆ ನಡೆದ ಆಪರೇಷನ್ ಸಿಂಧೂರಿನಲ್ಲಿ ಬಳಸಿದ ಡ್ರೋಣ್ ಬಗ್ಗೆ ಮಾಹಿತಿಯನ್ನು ನೀಡಿದರು.
– ಧ್ರುವ ಏಳುಕೋಟಿ, ಆಳ್ವಾಸ್ ಕನ್ನಡ ಮಾಧ್ಯಮ ಶಾಲೆ, ಮೂಡುಬಿದಿರೆ.

* ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು ನನಗೆ ಹೊಸ ವರ್ಷವನ್ನು ಹೊಸ ಚಿಂತನೆ ಹಾಗೂ ಭಾರತೀಯ ಮೌಲ್ಯಗಳೊಂದಿಗೆ ಸ್ವಾಗತಿಸುವ ಸಂಸ್ಕಾರ ನೀಡಿದೆ. ಇಲ್ಲಿನ ತರಬೇತಿಯು ಭಿನ್ನಾಭಿಪ್ರಾಯ ಮರೆತು ವಿಚಾರಗಳನ್ನು ಗೌರವಿಸುವ ಮತ್ತು ಬದುಕನ್ನು ಶಿಸ್ತಿನಿಂದ ಕಟ್ಟಿಕೊಳ್ಳುವ ಜೀವನ ಪಾಠ ಕಲಿಸಿದೆ. ಬೆಳಗಾವಿ ಜಾಂಬೋರೇಟ್‌ನಲ್ಲಿ ಭಾಗವಹಿಸಿದ ಈ ಕ್ಷಣಗಳು ನನ್ನ ಜೀವನದ ಅತ್ಯಂತ ಸ್ಮರಣೀಯ ಅನುಭವಗಳಾಗಿವೆ. ಈ ಪಯಣಕ್ಕೆ ಪ್ರೇರಣೆಯಾದವರಿಗೆ ನಾನು ಸದಾ ಚಿರಋಣಿ – ಮೌನೇಶ್ ಅ. ವಿಶ್ವಬ್ರಾಹ್ಮಣ, ಗಜೇಂದ್ರಗಢ, ಬಾಗಲಕೋಟೆ.

* Belgaum Stole the show ! Tasty benne dosas and Mirchi bajji is from all the different districts was Jamboree blast! Big shoutout to all districts for rolling in & making it unforgettable! It was the highlight for every scouter and guider. Being the event convener of fun games, chilling with friends was really fun. – Pallavi Nadkarni, Lady Cub Master, Belagavi.

* Belagavi became a home away from home. We prepared even before the Jamborette started, often pushing ourselves – but it was all worth it when the participants enjoyed the experience. That's what the spirit of Jamborette means to me : learning, teamwork and memories. – Latha, Ranger Leaders.

* I had an incredible experience ! The infrastructure from the tents to the 24/7 hot water – was top-notch. Safety was a priority with medical and police services available round the clock. The adventure activities like the forest trail were truly memorable. The food was delicious and well-served. - Danie–, Bijapura District.

* ಇದು ನನ್ನ ಎರಡನೇ ಜಾಂಬೋರೇಟ್. ಎಲ್ಲಾ ಮಕ್ಕಳು ಬಹಳ ಆನಂದದಿಂದ ಇಡೀ ಶಿಬಿರದಲ್ಲಿ ಭಾಗವಹಿಸಿದ್ದರು. ಫನ್ ಬೇಸ್, ಹೈಕಿಂಗ್ ಎಲ್ಲವೂ ಮಕ್ಕಳಿಗೆ ಇಷ್ಟವಾದವು. ಹೊಸ ವರ್ಷದ ಆಚರಣೆ ಬೆಸ್ಟ್ ಮೊಮೆಂಟ್. ಶಿಬಿರದಲ್ಲಿ ಏನೂ ಬೇಸರ ಆಗಿಲ್ಲ. ಊಟ, ನೀರು, ಶೌಚಾಲಯ ವ್ಯವಸ್ಥೆಯೂ ಅತ್ಯುತ್ತಮವಾಗಿತ್ತು. ಬೆಳಗಾವಿ ಜಿಲ್ಲೆಯೂ ಭಾರಿ ಇಷ್ಟವಾಯ್ತು.– ಮೀನಜ್ ಮಕಾಂದಾರ್, ಸಿಪಿಎಸ್ ಸ್ಕೂಲ್, ಗಂಗಾವತಿ, ಕೊಪ್ಪಳ.

* ಮಕ್ಕಳಿಗೆ ಇಂತಹ ಅತ್ಯುತ್ತಮ ವ್ಯವಸ್ಥೆ ಒಳಗೊಂಡಿರುವ ಶಿಬಿರದಲ್ಲಿ ಪಾಲ್ಗೊಳ್ಳುವ ಅವಕಾಶ ಸಿಕ್ಕಿದೆ. ಶಾಲೆ, ತರಗತಿ ಎಂದು ಹೆಚ್ಚಿನ ವಿದ್ಯಾರ್ಥಿಗಳು ಕೆರೆಗಳಲ್ಲಿರೋ ಕಪ್ಪೆಯ ಹಾಗೆ ಇರ್ತಾರೆ. ಶಿಬಿರದಲ್ಲಿ ಸಿಗೋ ಅನುಭವ ಅವರಿಗೆ ಜೀವನ ಪಾಠ, ಸಂಸ್ಕಾರವನ್ನು ಒದಗಿಸುತ್ತದೆ. ಶಿಬಿರದ ಊಟೋಪಚಾರ ಅತ್ಯುತ್ತಮವಾಗಿತ್ತು. ಟೆಂಟ್‌ವಾಸ ಒಳ್ಳೆಯ ಅನುಭವ ನೀಡಿತು. – ಕೀರ್ತಿ ಬಸಪ್ಪ ಲಗಳಿ, ಬಾಗೇಪಲ್ಲಿ ಚಿಕ್ಕಬಳ್ಳಾಪುರ.

* ಜಾಂಬೋರೇಟ್ ಸೂಪರ್ ಆಗಿತ್ತು. ಹಲವು ಹೊಸ ವಿಷಯ ಕಲಿತೆವು. ಬೇರೆ ಬೇರೆ ಜಿಲ್ಲೆಗಳ ಬಗ್ಗೆ, ಅಲ್ಲಿನ ಕಲೆ ಸಂಸ್ಕೃತಿಯ ಬಗ್ಗೆ ತಿಳಿದುಕೊಂಡೆವು. ದೇಶ ಸುತ್ತು,ಕೋಶ ಓದು ಎಂಬುದು ಸ್ಕೌಟ್ ಗೈಡ್ ಜಾಂಬೋರೇಟ್‌ನಿಂದ ಸಾಧ್ಯವಾಗಿದೆ. ಇಲ್ಲಿನ ಊಟ, ತಿಂಡಿ, ಸಿಹಿ ತಿನಿಸು ಎಲ್ಲವೂ ಚೆನ್ನಾಗಿದ್ದು, 30ನೇ ಜಾಂಬೋರೇಟ್‌ಗೆ ಕಾಯ್ತಾ ಇದ್ದೇವೆ. – ಸಂಜನಾ, ದಕ್ಷಿಣ ಕನ್ನಡ.

* ಬೆಳಗಾವಿಯ ಜಾಂಬೋರೇಟ್ ಒಳ್ಳೆಯ ಅನುಭವ ನೀಡಿದೆ. ನನ್ನ ಸ್ನೇಹಿತರ ಜೊತೆ ಬಹಳ ಗಮ್ಮತ್ತು ಮಾಡಿದ್ದೇನೆ, ಜೊತೆಗೆ ಬೇರೆ–ಬೇರೆ ಜಿಲ್ಲೆಗಳ ಹೊಸ ಸ್ನೇಹಿತರನ್ನೂ ಮಾಡಿಕೊಂಡೆ. ಫಾರೆಸ್ಟ್ ಟ್ರಯಲ್, ಕೆಸರುಗದ್ದೆ ಆಟ, ಹೀಗೆ ಬೇರೆ–ಬೇರೆ ಚಟುವಟಿಕೆ ಇದ್ವು. ಬಹಳ ಖುಷಿಯಿಂದ ಭಾಗವಹಿದೆವು ಹಾಗೂ ಟೆಂಟ್‌ವಾಸ ಮಾಡುವ ಅನುಭವವೇ ವಿಶಿಷ್ಟ.– ಅದಿತಿ, ಆಳ್ವಾಸ್ ಶಾಲೆ, ಮೂಡುಬಿದಿರೆ.

* ಇಲ್ಲಿ ಕೆಲಸ ಮಾಡುವುದು ನನಗೆ ತುಂಬಾ ಸಂತೋಷವನ್ನು ನೀಡಿತು. ಜಾಂಬೋರೇಟ್‌ನಲ್ಲಿ ಕೆಲಸ ಮಾಡುವಾಗ ಅದು ಎಂದಿಗೂ ಕಷ್ಟಕರವಾಗಿದೆ ಎಂದು ನನಗೆ ಅನಿಸಲಿಲ್ಲ. ಏಕೆಂದರೆ ಈ ಮಕ್ಕಳಲ್ಲಿ ನನಗೆ ನನ್ನ ಮೊಮ್ಮಕ್ಕಳನ್ನೇ ಕಾಣುವಂತೆ ಅನುಭವವಾಯಿತು. ಅವರ ಜೊತೆ ಇದ್ದಾಗ ಕೆಲಸವೂ ಸಂತೋಷಕರವಾಗಿತ್ತು.

ಬೆಳಗಾವಿಯ ಸ್ಕೌಟಿಂಗ್‌ನ ಬೇರುಗಳು...

ಸುಮಾರು 1915ರಲ್ಲಿಯೇ ಶ್ರೀ.ಎ.ಸಿ. ಮಿಲ್ಲರ್ ಎಂಬ ಆಂಗ್ಲ ಮಹಾಶಯರು ಬೆಳಗಾವಿಯ ಸರ್ದಾರ್ ಪ್ರೌಢಶಾಲೆಯಲ್ಲಿ ಭಾರತೀಯ ಮಕ್ಕಳಿಗಾಗಿ ಸ್ಕೌಟಿಂಗ್ ಕಲಿಸಲು ಪ್ರಯತ್ನಿಸಿದರು. ಆದರೆ ಮಿಲ್ಲರ್ ಈ ಪ್ರಯೋಗ ಸಾಧುವಲ್ಲ ಎಂಬ ಅಭಿಪ್ರಾಯ ಬ್ರಿಟಿಷ್ ಸರ್ಕಾರದ್ದಾಗಿತ್ತು. ಸ್ಥಳೀಯ ಯುವಕರನ್ನು ಸಮವಸ್ತ್ರ ಧರಿಸುವ ಗುಂಪುಗಳಾಗಿ ಮಾಡಿದ ಅವರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುವರೆಂಬ ಆತಂಕ ಅವರದ್ದಾಗಿತ್ತು. ಡಿಸೆಂಬರ್ 4, 1947ರಲ್ಲಿ ಸೇಂಟ್ ಪೌಲ್ ಪ್ರೌಢಶಾಲೆಯಲ್ಲಿ ಸರ್ದಾರ್ ಜೆ.ಎ. ಮಿರಾಂಡ ಅವರ ನಾಯಕತ್ವದಲ್ಲಿ ಪ್ರೌಢ ಶಾಲೆಯಲ್ಲಿ ಪ್ರಥಮ ಸ್ಕೌಟ್ ತಂಡ ಪ್ರಾರಂಭವಾಯಿತು. ಮುಂದೆ ಈ ತಂಡವು ಅತ್ಯುತ್ತಮ ಸ್ಕೌಟ್ ತಂಡಗಳಲ್ಲಿ ಒಂದು ಎಂಬ ಹೆಗ್ಗಳಿಕೆ ಗಳಿಸಿತು. 1950ರಲ್ಲಿ ಭಾರತ್ ಸ್ಕೌಟ್ಸ್–ಗೈಡ್ಸ್ ಸಂಸ್ಥೆ ಪ್ರಾರಂಭವಾದ ನಂತರ ಔಪಚಾರಿಕ ತಂಡಗಳು ಪ್ರಾರಂಭವಾದವು. ಕೇವಲ ಕೆಲವೇ ಸ್ಕೌಟ್ ತಂಡಗಳಿದ್ದು ಚಳುವಳಿಯು 1957ರ ಹೊತ್ತಿಗೆ ಜಿಲ್ಲೆಯಾದ್ಯಂತ ಬೃಹತ್ತಾಗಿ ಹರಡಿತ್ತು. ನವೆಂಬರ್ 16 1967ರಂದು ಜಿಲ್ಲಾ ಮೇಳ ನಡೆಯಿತು. ಪುನರ್ರಚನೆಗೊಂಡ ಬೆಳಗಾವಿಯಲ್ಲಿ ಸ್ಕೌಟಿಂಗ್ ಚಳವಳಿಯು ಸದೃಢಗೊಳ್ಳಲು ಹಲವು ವಿದ್ಯಾ ಸಂಸ್ಥೆಗಳ ಕಾರಣವಾದವು. ಅವುಗಳಲ್ಲಿ ಕೆ.ಎಲ್.ಇ. ಸಂಸ್ಥೆಯು ಪ್ರಮುಖವಾದುದು.

ರಾಜ್ಯ ಮಟ್ಟದ ವೃಕ್ಷಮಣಿಧಾರಕರ ಸಮಾವೇಶ

ದಿನಾಂಕ 03.01.2026 ರಿಂದ 05.01.2026 ರವರೆಗೆ ಕರ್ನಾಟಕ ರಾಜ್ಯ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ವತಿಯಿಂದ ವೃಕ್ಷಮಣಿಧಾರಕರ ಸಮಾವೇಶವನ್ನು ಶ್ರೀ ಸಾಯಿ ರಾಮ್ ಇನ್ಸಿಟ್ಯೂಷನ್, ತಾಂಬರಮ್, ಚೆನ್ನೈ, ಇವರ ಆಶ್ರಯದಲ್ಲಿ ಏರ್ಪಡಿಸಲಾಗಿತ್ತು. ದಿನಾಂಕ 03.01.2026 ರಂದು ಬೆಳಿಗ್ಗೆ 09.00ರಿಂದ 12.00 ಗಂಟೆಯವರೆಗೆ ನೋಂದಣಿ ಮಾಡಲಾಯಿತು. 31 ಜಿಲ್ಲೆಗಳಿಂದ 21 ಕಬ್ ಮಾಸ್ಟರ್ 127 ಸ್ಕೌಟ್ ಮಾಸ್ಟರ್, 03 ಆರ್‌ಎಸ್‌ಎಲ್‌ಗಳು, 11 ಫ್ಲಾಕ್ ಲೀಡರ್, 66 ಗೈಡ್ ಕ್ಯಾಪ್ಟನ್ಸ್, 9 ರೇಂಜರ್ ಲೀಡರ್ಸ್ ಒಟ್ಟು 237 ಮಂದಿ ನೋಂದಣಿ ಮಾಡಿದರು. ಬೆಳಿಗ್ಗೆ 11.30 ಗಂಟೆಗೆ ಧ್ವಜಾರೋಹಣ ಮಾಡುವುದರ ಮೂಲಕ ಸಮಾವೇಶವನ್ನು ಪ್ರಾರಂಭಿಸಲಾಯಿತು. ಮಧ್ಯಾಹ್ನ 02.00 ಗಂಟೆಗೆ ಉದ್ಘಾಟನಾ ಸಮಾರಂಭವನ್ನು ಹಮ್ಮಿಕೊಂಡಿದ್ದು, ಶ್ರೀ ಚಿನ್ನಸ್ವಾಮಿ ರೆಡ್ಡಿ, ರಾಜ್ಯ ಆಯುಕ್ತರು (ಸ್ಕೌಟ್) ವಯಸ್ಕ ಸಂಪನ್ಮೂಲ ಸ್ವಾಗತ ಕೋರಿದರು. ಶ್ರೀ ಸಾಯಿರಾಮ್ ಶಿಕ್ಷಣ ಸಮೂಹ ಸಂಸ್ಥೆಯ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಡಾ. ಸಾಯಿಪ್ರಕಾಶ್ ಲಿಯೋಮುತ್ತು, ಇವರು ಗಿಡಕ್ಕೆ ನೀರೆರೆಯುವುದರ ಮೂಲಕ ಸಮಾವೇಶವನ್ನು ಉದ್ಘಾಟಿಸಿ, 17 ಸುಸ್ಥಿರ ಅಭಿವೃದ್ಧಿ ಗುರಿಗಳ(ಎಸ್‌ಡಿಜಿ) ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಿದರು. ಈ ಸಂದರ್ಭದಲ್ಲಿ ಶ್ರೀಮತಿ ರಿಮ್ ಫ್ರಾನ್ಸಿಸ್ ಎಲ್.ಟಿ (ಸ್ಕೌಟ್), ಜಿಲ್ಲಾ ಕಾರ್ಯದರ್ಶಿ ಹಾಗೂ ಶ್ರೀ ಸಾಯಿರಾಮ್ ಸಂಸ್ಥೆಯ ರೋವರ್ ಸ್ಕೌಟ್ ಲೀಡರ್ ಹಾಗೂ ರೇಂಜರ್ ಲೀಡರ್ಸ್ ಉಪಸ್ಥಿತರಿದ್ದರು.

ಶ್ರೀಮತಿ ಬಿ.ವಿ ರಾಮಲತಾ, ರಾಜ್ಯ ಆಯುಕ್ತರು (ಗೈಡ್) ವಯಸ್ಕ ಸಂಪನ್ಮೂಲ, ಇವರು ಎಲ್ಲರನ್ನು ವಂದಿಸಿದರು. ಶ್ರೀಮತಿ ಸುನೀತಾ ಸಿಂಗ್, ಗೈಡ್ ನಾಯಕಿ, ಇವರು ಕಾರ್ಯಕ್ರಮ ನಿರೂಪಿಸಿದರು.

ಶ್ರೀ ಚಿನ್ನಸ್ವಾಮಿ ರೆಡ್ಡಿ ರಾಜ್ಯ ಆಯುಕ್ತರು (ಸ್ಕೌಟ್) ವ.ಸಂ, ಶ್ರೀಮತಿ ಬಿ.ವಿ ರಾಮಲತಾ ರಾಜ್ಯ ಆಯುಕ್ತರು (ಗೈಡ್) ವ.ಸಂ, ಶ್ರೀ ನಾಗೇಶ್ ಆರ್ ಶಿವಪೂರ್, ರಾಜ್ಯ ತರಬೇತಿ ಆಯುಕ್ತರು (ಸ್ಕೌಟ್), ಶ್ರೀ ಎಂ.ವಿ ಜನಾರ್ಧನ ಎಲ್.ಟಿ (ಸ್ಕೌಟ್) ರವರು ಸಂಸ್ಥೆಯ ಮೂಲಭೂತ ಅಂಶಗಳ ಬಗ್ಗೆ ತಂಡ ಬೋಧನೆ ವಿಧಾನದಲ್ಲಿ ತಿಳಿಸಿದರು. ಶ್ರೀಮತಿ ಕೆ.ವಿ ಶಾಮಲ, ರಾಜ್ಯ ತರಬೇತಿ ಆಯುಕ್ತರು(ಗೈಡ್) ಇವರು ವಿವಿಧ ಗುಂಪುಗಳನ್ನಾಗಿ ವಿಂಗಡಿಸಿ, ಅವರುಗಳು ಸಮಾವೇಶಕ್ಕೆ ಬಂದಿರುವ ವೈಯಕ್ತಿಕ ಉದ್ದೇಶಗಳ ಬಗ್ಗೆ ಬರೆಯಲು ತಿಳಿಸಿದರು. ಶ್ರೀ ಚಿನ್ನಸ್ವಾಮಿ ರೆಡ್ಡಿ ರಾಜ್ಯ ಆಯುಕ್ತರು (ಸ್ಕೌಟ್) ವ.ಸಂ ರವರು ಹಿಮಾಲಯ ವೃಕ್ಷಮಣಿ ಪ್ರಾರಂಭವಾದ ಬಗ್ಗೆ ಮತ್ತು ಶಿಬಿರದ ಉದ್ದೇಶಗಳ ಬಗ್ಗೆ ತಿಳಿಸಿದರು. ರಾತ್ರಿ 08.00 ಘಂಟೆಗೆ ಜರುಗಿದ ಶಿಬಿರಾಗ್ನಿ ಕಾರ್ಯಕ್ರಮದಲ್ಲಿ, ಸಮಾವೇಶದಲ್ಲಿ ಭಾಗವಹಿಸಿದ ಅಭ್ಯರ್ಥಿಗಳು ಹಾಡುಗಳನ್ನು ಹೇಳಿ ಮನರಂಜಿಸಿದರು.

ದಿನಾಂಕ 04.01.2026 ರಂದು ಬೆಳಿಗ್ಗೆ ಧ್ವಜಾರೋಹಣದ ನಂತರ ಶ್ರೀಮತಿ ಕೆ.ವಿ ಶಾಮಲ, ರಾಜ್ಯ ತರಬೇತಿ ಆಯುಕ್ತರು (ಗೈಡ್) ಇವರು ಈ ಕೆಳಕಂಡ ವಿಷಯಗಳ ಕುರಿತು ಮಾತನಾಡಿದರು.

1. ಹಿರಿಯ ಹಿಮಾಲಯ ವೃಕ್ಷಮಣಿಧಾರಕರು ಕಿರಿಯರಿಗೆ ನೀಡಬೇಕಾದ ಮಾರ್ಗದರ್ಶನ.
2. ಹಿಮಾಲಯ ವೃಕ್ಷಮಣಿಧಾರಕರು ಸ್ಥಳೀಯ ಮತ್ತು ಜಿಲ್ಲಾ ಮಟ್ಟದಲ್ಲಿ ನಿರ್ವಹಿಸಬೇಕಾದ ಕರ್ತವ್ಯಗಳು ಹಾಗೂ ಜವಾಬ್ದಾರಿಗಳು.
3. ಸಂಬಂಧಪಟ್ಟ ಜಿಲ್ಲಾ ಸಂಸ್ಥೆಯಲ್ಲಿ ವರ್ಷಕ್ಕೆ ಕನಿಷ್ಠ ಹತ್ತು ಪ್ರಾರಂಭಿಕ ಶಿಬಿರಗಳನ್ನು ಆಯೋಜಿಸಿ, ಆ ಅಭ್ಯರ್ಥಿಗಳು ಮೂಲ ತರಬೇತಿ ಪಡೆಯಲು ಪ್ರೇರೇಪಿಸುವುದು.
4. ಮೂಲ ತರಬೇತಿ ಪಡೆದ ಶಿಕ್ಷಕ–ಶಿಕ್ಷಕಿಯರು ಮುಂದುವರೆದ ತರಬೇತಿ ಪಡೆಯಲು ಪ್ರೋತ್ಸಾಹಿಸುವುದು.
5. ಸ್ಥಳೀಯ, ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ನಡೆಯುವ ಮೂಲ ಮತ್ತು ಮುಂದುವರೆದ ತರಬೇತಿ ಶಿಬಿರಗಳಲ್ಲಿ ಸಿಬ್ಬಂದಿಯಾಗಿ ಕಾರ್ಯನಿರ್ವಹಿಸಿ ಎ.ಎಲ್.ಟಿ ತರಬೇತಿಗೆ ಅರ್ಹತೆ ಪಡೆಯುವ ಬಗ್ಗೆ ಕ್ರಮ ಕೈಗೊಳ್ಳುವುದು.

ತರಬೇತಿ ಶಿಬಿರದಲ್ಲಿ ಹಿಮಾಲಯ ವೃಕ್ಷಮಣಿಧಾರಕರ ಪಾತ್ರದ ಬಗ್ಗೆ ಶ್ರೀ ಎಂ.ವಿ ಜನಾರ್ಧನ್ ಎಲ್.ಟಿ (ಸ್ಕೌಟ್) ರವರು ಗುಂಪು ಚರ್ಚೆಯ ಮೂಲಕ ಮಾಹಿತಿ ನೀಡಿದರು. ನಂತರ ಜಿಲ್ಲಾ ಪದಕ ಸಮಿತಿ, ಪದಕ ಬೋಧಕರು ಮತ್ತು ಪದಕ ಪರೀಕ್ಷಕರ ಬಗ್ಗೆ ಮಾಹಿತಿ ನೀಡಿದರು. ಸಮುದಾಯ ಅಭಿವೃದ್ಧಿ ಮತ್ತು ಪ್ರಧಾನಮಂತ್ರಿ ಪಾರಿತೋಷಕದ ಬಗ್ಗೆ ಶ್ರೀ ಸಿ. ಎಸ್ ರೆಡ್ಡಿ, ರಾಜ್ಯ ಆಯುಕ್ತರು (ಸ್ಕೌಟ್) ವ.ಸಂ ಇವರು ತಿಳಿಸಿದರು. ಉಪರಾಷ್ಟ್ರಪತಿ ಪದಕದ ಬಗ್ಗೆ ಶ್ರೀಮತಿ ಬಿ ವಿ ರಾಮಲತಾ, ರಾಜ್ಯ ಆಯುಕ್ತರು (ಸ್ಕೌಟ್) ವ.ಸಂ ಮಾಹಿತಿ ನೀಡಿದರು.

ಸಂಜೆ ನಡೆದ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಪಿ.ಜಿ.ಆರ್ ಸಿಂಧ್ಯ, ಮಾಜಿ ಸಚಿವರು ಕರ್ನಾಟಕ ಸರ್ಕಾರ ಹಾಗೂ ರಾಜ್ಯ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಇವರು ವಹಿಸಿದ್ದರು ಮತ್ತು ಡಾ. ಸಾಯಿಪ್ರಕಾಶ್ ಲಿಯೋಮುತ್ತು, ಶ್ರೀ ಸಾಯಿರಾಮ್ ಶಿಕ್ಷಣ ಸಮೂಹ ಸಂಸ್ಥೆಯ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಶ್ರೀ ಎಮ್.ಎಸ್ ಸತೀಶ್, ಜಂಟಿ ರಾಜ್ಯ ಕಾರ್ಯದರ್ಶಿ (ಸ್ಕೌಟ್), ಶ್ರೀ ಎಂ ಪ್ರಭಾಕರ್ ಭಟ್, ರಾಜ್ಯ ಸಂಘಟನಾ ಆಯುಕ್ತರು (ಸ್ಕೌಟ್), ಮತ್ತು ಶ್ರೀ ಎಮ್. ಎ ಚೆಲ್ಲಯ್ಯ, ಸಂಯೋಜಕರು, ರಾಜ್ಯ ತರಬೇತಿ ಕೇಂದ್ರ, ದೊಡ್ಡಬಳ್ಳಾಪುರ ಇವರುಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶ್ರೀ ಸಿ.ಎಸ್ ರೆಡ್ಡಿ, ರಾಜ್ಯ ಆಯುಕ್ತರು (ಸ್ಕೌಟ್), ವ.ಸಂ ಇವರು ಎಲ್ಲರನ್ನು ಸ್ವಾಗತಿಸಿದರು.

2024–25ನೇ ಸಾಲಿನಲ್ಲಿ, ಹಿಮಾಲಯ ವೃಕ್ಷಮಣಿ ಗಳಿಸಿದ ವಯಸ್ಕ ನಾಯಕ/ನಾಯಕಿಯರಿಗೆ ಸಂಬಂಧಪಟ್ಟ ರಾಜ್ಯ ತರಬೇತಿ ಆಯುಕ್ತರು ವಿಧಿಪೂರ್ವಕವಾಗಿ ಮಣಿಗಳನ್ನು ಹಾಗೂ ಪಿನ್‌ಗಳನ್ನು ನೀಡಿದರು. ಮುಖ್ಯ ಅತಿಥಿಗಳು ಪ್ರಮಾಣ ಪತ್ರಗಳನ್ನು ನೀಡಿದರು.

ಡಾ. ಸಾಯಿಪ್ರಕಾಶ್ ಲಿಯೋಮುತ್ತು ರವರು ಈ ಕೆಳಕಂಡ ಸ್ಕೌಟ್–ಗೈಡ್ ನಿಯಮದ 12 ಅಂಶಗಳ ಬಗ್ಗೆ ವಿದ್ವತ್‌ಪೂರ್ಣವಾಗಿ ಮಾತನಾಡಿದ್ದು ವಿಶೇಷವಾಗಿತ್ತು.

1.Be Trustworthy, 2.Be Loyal, 3.Be Helpful, 4.Be Friendly, 5.Be Courteous, 6.Be Kind
7.Be Obedient, 8.Be Cheerful, 9.Be Thrifty, 10.Be Brave, 11.Be Clean, 12.Be Reverant



ಶ್ರೀ ಪಿ.ಜಿ.ಆರ್ ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ತಮ್ಮ ಅಧ್ಯಕ್ಷೀಯ ನುಡಿಗಳಲ್ಲಿ " ನೀವುಗಳು ಸ್ಥಳೀಯ ಸಂಸ್ಥೆ ಹಂತದಲ್ಲಿ ಹೆಚ್ಚು–ಹೆಚ್ಚು ಪ್ರಾರಂಭಿಕ ಶಿಬಿರಗಳನ್ನು ಆಯೋಜಿಸಿರಿ. ನಿಮ್ಮದೇ ಆದ ದಳವನ್ನು ನಡೆಸುವುದರ ಜೊತೆಗೆ ನೆರೆಯ ಶಾಲಾ–ಕಾಲೇಜುಗಳಿಗೆ ಭೇಟಿ ನೀಡಿ ಸ್ಕೌಟ್–ಗೈಡ್, ರೋವರ್–ರೇಂಜರ್ ದಳಗಳನ್ನು ಪ್ರಾರಂಭಿಸಲು ಪ್ರೋತ್ಸಾಹಿಸಿ" ಎಂದು ಹೇಳಿದರು.

ಶ್ರೀಮತಿ ಬಿ.ವಿ ರಾಮಲತಾ ರಾಜ್ಯ ಆಯುಕ್ತರು (ಗೈಡ್) ವ.ಸಂ ಇವರು ಎಲ್ಲರನ್ನು ವಂದಿಸಿದರು.

ಶ್ರೀಮತಿ ರುಚಿತ; ರೇಂಜರ್ ನಾಯಕಿ ಇವರು ಕಾರ್ಯಕ್ರಮ ನಿರೂಪಣೆ ಮಾಡಿದರು. ರಾತ್ರಿ 08.00 ಘಂಟೆಗೆ ಭವ್ಯ ಶಿಬಿರಾಗ್ನಿಯನ್ನು ಏರ್ಪಡಿಸಲಾಗಿತ್ತು.

ದಿನಾಂಕ 05.01.2026ರಂದು ಬೆಳಿಗ್ಗೆ 07.00 ಘಂಟೆಗೆ ಸರ್ವಧರ್ಮ ಪ್ರಾರ್ಥನೆ ಮಾಡಲಾಯಿತು. ಧ್ವಜಾರೋಹಣ ಮತ್ತು ಉಪಹಾರದ ನಂತರ ಎಲ್ಲರೂ ಪ್ರೇಕ್ಷಣೆಯ ಸ್ಥಳಗಳ ವೀಕ್ಷಣೆಗೆ ತೆರಳಿದರು. ಡಾ. ಸಾಯಿಪ್ರಕಾಶ್ ಲಿಯೋಮುತ್ತು ರವರು ಇದಕ್ಕೆ ಬೇಕಾದ ಏರ್ಪಾಟುಗಳನ್ನು ಮಾಡಿದ್ದರು. ಸಂಜೆ 05.00 ಘಂಟೆಗೆ ಧ್ವಜಾವರೋಹಣ ಮತ್ತು ರಾಷ್ಟ್ರಗೀತೆಯೊಂದಿಗೆ ಸಮಾವೇಶ ಮುಕ್ತಾಯಗೊಂಡಿತು.



ಶಿಸ್ತು ಧ್ವಜದ ನೆರಳಲ್ಲಿ
ಸಾಹಸದ ಹೆಜ್ಜೆ ಹಾಕಿದೆವು
ಫೀನಿಕ್ಸ್ ಶಾಲೆಯ ನೆಲೆಯಲ್ಲಿ
ಜಾಂಬೂರೇಟ್ ಕನಸು ಕಂಡೆವು

ಆರ್ಮಿ ಸಾಹಸ ಧೈರ್ಯ ಕಲಿಸಿತು
ಮಾರ್ಚ್ ಪಾಸ್ಟ್ ಶಕ್ತಿ ತುಂಬಿತು
ಡೇ–ನೈಟ್ ಹೈಕ್ ದಾರಿಯಲ್ಲಿ
ಸ್ವಾವಲಂಬನೆ ಅರಳಿತು

ಸಂಸ್ಕೃತಿ, ಆಟ, ನಗು–ಹರ್ಷ
ಸ್ನೇಹದ ಬಂಧ ಗಟ್ಟಿಯಾದವು
ಈ ಶಿಬಿರ ನನ್ನ ಅನುಭವದಲ್ಲಿ
ಮರೆಯಲಾಗದ ನೆನಪಾಯಿತು

– ಸಿದ್ದಪ್ಪ ಪುಜಾರಿ, ಸ್ಕೌಟ್ ಮಾಸ್ಟರ್, ಬಾಗಲಕೋಟೆ



ಹನಿಗವನ

ಸರಸ್ವತಿಗೆ ಪುಸ್ತಕ ಚಂದ
ಲಕ್ಷ್ಮೀಗೆ ರೊಕ್ಕ ಚಂದ
ನಮಗೆ ಜಾಂಬೋರೇಟ್ ಚಂದ
ಪಂಚಮಿ ಕವನ
ಸೋಡಿಯಂ ಲವನ
ಮೇಲಿದೆ ಗಗನ
ಕೆಳಗಿದೆ ಭೂವನ
ಎಷ್ಟು ಚಂದ ಈ
ಜಾಂಬೋರೇಟ್‌ನ ಪಯಣ
ಟ್ವಿಂಕಲ್ ಟ್ವಿಂಕಲ್
ಲಿಟಲ್ ಸ್ಟಾರ್
ಜಾಂಬೋರೇಟ್
ಸೂಪರ್ ಸ್ಟಾರ್

– ಪ್ರಿಯಾ, ಲಕ್ಷ್ಮಣ, ತೆರಿಗುಣಸಿ, ಸರ್ಕಾರಿ ಪ್ರೌಢಶಾಲೆ, ಮುಗಳಖೋಡ

19ನೇ ರಾಷ್ಟ್ರೀಯ ಜಾಂಬೂರಿ (ಲಕ್ನೋ, ಉತ್ತರ ಪ್ರದೇಶ)





ದಿನಾಂಕ:23.11.2025 ರಿಂದ 29.11.2025 ರವರಿಗೆ ಡಿಫೆನ್ಸ್ ಎಕ್ಸ್ಪೋ ಗ್ರಾಂಡ್, ಲಕ್ನೋ, ಉತ್ತರ ಪ್ರದೇಶ. ಇಲ್ಲಿ ಉತ್ತರ ಪ್ರದೇಶ ರಾಜ್ಯ ಸರ್ಕಾರ ಮತ್ತು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಷ್ಟ್ರೀಯ ಸಂಸ್ಥೆ ಮತ್ತು ಉತ್ತರ ಪ್ರದೇಶ ರಾಜ್ಯ ಸಂಸ್ಥೆಯ ಸಹಯೋಗದಲ್ಲಿ 19ನೇ ರಾಷ್ಟ್ರೀಯ ಜಾಂಬೂರಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಸದರಿ ಜಾಂಬೂರಿಯಲ್ಲಿ ಕರ್ನಾಟಕ ರಾಜ್ಯದ ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್ ಸಿಂಧ್ಯ ರವರ ಮಾರ್ಗದರ್ಶನ ಮತ್ತು ನೇತೃತ್ವದಲ್ಲಿ ಕರ್ನಾಟಕ ರಾಜ್ಯ ತಂಡ ಪಾಲ್ಗೊಂಡಿತ್ತು. ಒಟ್ಟು 774 ವಿದ್ಯಾರ್ಥಿಗಳು, ದಳನಾಯಕರುಗಳು, ಅಧಿಕಾರಿಗಳು ಭಾಗವಹಿಸಿದ್ದರು.

ಶ್ರೀ ಎಲ್.ಟಿ.ಲೋಕೇಶ್ ಸಹಾಯಕ ರಾಜ್ಯ ಕಾರ್ಯದರ್ಶಿ ಸಂಪೂರ್ಣ ಜವಾಬ್ದಾರಿ ಮತ್ತು ತಂಡದ ನಾಯಕರು(ಸ್ಕೌಟ್ ವಿಭಾಗ), ಶ್ರೀಮತಿ ಮಮತ ಬಿ.ಎಲ್. ತಂಡದ ನಾಯಕಿ (ಗೈಡ್ಸ್ ವಿಭಾಗ) ಮತ್ತು ಶ್ರೀ ಎಂ.ಎಸ್ ಸತೀಶ್, ಜಂಟಿ ರಾಜ್ಯ ಕಾರ್ಯದರ್ಶಿ ಚಟುವಟಿಕೆಗಳ ನಾಯಕರಾಗಿ ಸೇವೆ ಸಲ್ಲಿಸಿದರು.

ದಿನಾಂಕ:24.11.2025 ರಂದು ಉತ್ತರ ಪ್ರದೇಶ ರಾಜ್ಯದ ಗೌರವಾನ್ವಿತ ರಾಜ್ಯಪಾಲರಾದ ಶ್ರೀಮತಿ ಆನಂದಿ ಬೆನ್ ಪಟೇಲ್ ರವರು ಉದ್ಘಾಟನೆ ಮಾಡಿ ಶುಭಹಾರೈಸಿದರು. ಈ ಸಂದರ್ಭದಲ್ಲಿ ಉತ್ತರ ಪ್ರದೇಶ ರಾಜ್ಯದ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಅಧ್ಯಕ್ಷರು ಹಾಗೂ ವಿಧಾನ ಪರಿಷತ್ತು ಸದಸ್ಯರು, ಮಾಜಿ ಸಚಿವರಾದ ಡಾ.ಮಹೇಂದ್ರ ಸಿಂಗ್, ರಾಷ್ಟ್ರೀಯ ಮುಖ್ಯ ಆಯುಕ್ತರಾದ ಡಾ ಕೆ.ಕೆ.ಖಂಡೇಲ್ ವಾಲ್, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮತ್ತು ಕರ್ನಾಟಕ ರಾಜ್ಯದ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್.ಸಿಂಧ್ಯ ರವರು ಸೇರಿದಂತೆ ಇತರೆ ಗಣ್ಯರು ಉಪಸ್ಥಿತರಿದ್ದರು.

ದಿನಾಂಕ:25.11.2025ರಂದು ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳ ಕಾರ್ಯಕ್ರಮವನ್ನು ಗೌರವಾನ್ವಿತ ಉತ್ತರ ಪ್ರದೇಶ ಮುಖ್ಯಮಂತ್ರಿಗಳಾದ ಶ್ರೀ ಯೋಗಿಅದಿತ್ಯನಾಥ್ ರವರು ಉದ್ಘಾಟಿಸಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ ಜಾಂಬೂರಿ ಯಶಸ್ವಿಯಾಗಲಿ ಎಂದು ಶುಭಹಾರೈಸಿದ್ದರು. ಈ ಕಾರ್ಯಕ್ರಮದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ. ಜಿ. ಆರ್. ಸಿಂಧ್ಯರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಜಾಂಬೂರಿಯಲ್ಲಿ ಸ್ಕೌಟ್ಸಬ್ ಕ್ಯಾಂಪ್ ನಂಬರ್ 18 ಮತ್ತು ಗೈಡ್ ಸಬ್ಕ್ಯಾಂಪ್ ನಂಬರ್ 30 ರಲ್ಲಿ ವಸತಿ ವ್ಯವಸ್ಥೆ ಮಾಡಲಾಗಿತ್ತು. ಮತ್ತು ಸಬ್ ಕ್ಯಾಂಪ್ 18 ರಲ್ಲಿ ಕರ್ನಾಟಕ ರಾಜ್ಯದ ಅಡುಗೆ ಮನೆ ನಿರ್ವಹಣೆ ಮಾಡಲಾಗಿತ್ತು.













ಜಾಂಬೂರಿಯಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಜಂಟಿ ಆಶ್ರಯದಲ್ಲಿ ಭವ್ಯ ಶಿಬಿರಾಗ್ನಿ, ಸ್ಕೌಟ್ಸ್ ಸ್ಕಿಲೋ ರಮಾ, ಕಲರ್ ಪಾರ್ಟಿ, ರಾಜ್ಯದ ವಸ್ತು ಪ್ರದರ್ಶನ, ಯುವ ವೇದಿಕೆ, ದೈಹಿಕ ಕವಾಯತು ಪ್ರದರ್ಶನ, ಪೇಜೆಂಟ್ ಶೋ, ಜಾನಪದ ನೃತ್ಯ, ಯತ್ನಿಕ್ ಶೋ, ಬ್ಯಾಂಡ್ ಪ್ರದರ್ಶನ, ರಾತ್ರಿ ಚಾರಣ, ಎಸ್.ಡಿ.ಜಿ ಹಬ್, ಗ್ಲೋಬಲ್‌ಡೆವಲೆಪ್‌ಮೆಂಟ್, ಸಾಹಸಮಯ ಚಟುವಟಿಕೆಗಳು, ಇಂಟಿಗ್ರೇಶನ್ ಚಟುವಟಿಕೆಗಳು,ಸ್ಕೌಟ್ ಕೌಶಲ್ಯ ಸೇರಿದಂತೆ ಇತರೆ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಭಾಗವಹಿಸಿರುತ್ತಾರೆ.ಎಲ್ಲಾ ಕಾರ್ಯಕ್ರಮಗಳಲ್ಲಿ ರಾಜ್ಯಕ್ಕೆ ಎ ಮತ್ತು ಬಿ ಗ್ರೇಡ್ ಪಡೆಯಲಾಗಿದೆ.

ದಿನಾಂಕ:25.11.2025ರಂದು ಗೌರವಾನ್ವಿತ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಯೋಗಿ ಅದಿತ್ಯನಾಥ್ ರವರು ಮಾತನಾಡಿದರು. ರಾಜ್ಯ ಮುಖ್ಯ ಆಯುಕ್ತರು ಈ ಸಂದರ್ಭದಲ್ಲಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ದಿನಾಂಕ:26.11.2025 ರಂದು ಕರ್ನಾಟಕದ ರಾಜ್ಯ ಮತ್ತು ಜಿಲ್ಲಾ ಸಂಸ್ಥೆಗಳ ಪದಾಧಿಕಾರಿಗಳ ಸೇವೆಯನ್ನು ಪರಿಗಣಿಸಿ ಸಿಲ್ವರ್ ಸ್ಟಾರ್, ಬಾರ್‌ಟು ಸಿಲ್ವರ್‌ಸ್ಟಾರ್, ಬೆಳ್ಳಿ ಆನೆ ಪ್ರಶಸ್ತಿಗಳನ್ನು ಉತ್ತರ ಪ್ರದೇಶ ಗೌರವಾನ್ವಿತ ರಾಜ್ಯಪಾಲರಾದ ಶ್ರೀಮತಿ ಆನಂದಿಬೆನ್ ಪಟೇಲ್ ರವರು ಪ್ರಧಾನ ಮಾಡಿದರು. ಒಟ್ಟು 18ಜನ ಹಾಜರಿದ್ದು ರಾಷ್ಟ್ರೀಯ ಸಂಸ್ಥೆಯ ಪ್ರಶಸ್ತಿಗಳನ್ನು ಸ್ವೀಕರಿಸಿದರು ನಂತರ ಜಾಂಬೂರಿ ಕಾರ್ಯಕ್ರಮ ವೀಕ್ಷಣೆ ಮಾಡಿ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗೆ ಶುಭಹಾರೈಸಿದರು. ದಿನಾಂಕ:27.11.2025 ರಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆಯ ವತಿಯಿಂದ ರಾಜ್ಯ ಮುಖ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ "ಕರ್ನಾಟಕ ದಿನಾಚರಣೆ" ಆಚರಿಸಿ ರಾಷ್ಟ್ರೀಯ ಸಂಸ್ಥೆ ಮತ್ತು ವಿವಿಧ ರಾಜ್ಯಗಳ ಗಣ್ಯರನ್ನು ಆಹ್ವಾನಿಸಿ ಅಭಿನಂಧಿಸಲಾಯಿತು. ದಿನಾಂಕ:28.11.2025 ರಂದು ಜಾಂಬೂರಿ ಸಮಾರೋಪ ಸಮಾರಂಭದಲ್ಲಿ ಮಾನ್ಯ ಗೌರವಾನ್ವಿತ ರಾಷ್ಟ್ರಪತಿಗಳಾದ ಡಾ॥ ದ್ರೌಪದಿ ಮುರ್ಮುರವರು ಭಾಗವಹಿಸಿ ವಿದ್ಯಾರ್ಥಿಗಳಿಂದ ಘನವಂದನೆ ಸ್ವೀಕರಿಸಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ ಶುಭಹಾರೈಸಿದರು. ದಿನಾಂಕ:29.12.2025ರಂದು ಸರ್ವ ಧರ್ಮ ಪ್ರಾರ್ಥನೆ ಮತ್ತು ಪ್ರಶಸ್ತಿ ಪತ್ರ ವಿತರಣಾ ಸಮಾರಂಭ ಮತ್ತು ಧ್ವಜಾಅವರೋಹಣ ಕಾರ್ಯಕ್ರಮದ ನಂತರ ಜಾಂಬೂರಿ ಮುಕ್ತಾಯಗೊಳಿಸಲಾಯಿತು.







- Nearly 70 Scouts and Guides from Carmel Jyothi High School, Doddaballapura, participated in the Cycle Rally held from their School Campus to Besant Park, covering a distance of 16 km (two ways). They carried placards with valuable Messages on the Environment.

Sri Nagaraj, DCC, Bengaluru Rural District, congratulated the participants and School Staff.



- M/S SIGNODE INDIA LIMITED, KIADB Industrial Area, Doddaballapura, presented a Grass Cutting Machine to Besant Park Training Centre on 30.12.2025 during their Annual Sports Meet, held at Besant Park.

Sri M. A. Chellaiah, Camp Co-ordinator, distributed the prizes to the winners of the competitions in the presence of Sri Subramanya, Senior Manager (HR), Sri M. S. Sandeep, Plant Manager, and others. They also assured continued support to the Training Centre in the future.

ರಾಜ್ಯ ಮಟ್ಟದ ಗೀತಗಾಯನ ಸ್ಪರ್ಧೆ







"ದಿನಾಂಕ: 18–01–2026ರಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ಕರ್ನಾಟಕ, ಜಿಂದಾಲ್ ಆದರ್ಶ ವಿದ್ಯಾಲಯ, ತೋರಣಗಲ್ಲು ಮತ್ತು ಬಳ್ಳಾರಿ ಜಿಲ್ಲಾ ಸಂಸ್ಥೆಯ ಸಹಯೋಗದೊಂದಿಗೆ ಕಬ್ಸ್, ಬುಲ್ ಬುಲ್ಸ್, ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್ ಮತ್ತು ದಳ ನಾಯಕರುಗಳಿಗೆ ರಾಜ್ಯ ಮಟ್ಟದ ಗೀತಗಾಯನ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು."

ಸದರಿ ದಿನದಂದು ಬೆಳಿಗ್ಗೆ 06.00 ಗಂಟೆಯಿಂದ ನೋಂದಣಿಯ ಮೂಲಕ ಪ್ರಾರಂಭವಾಗಿ ಸಮಯ 08.00 ಗಂಟೆಗೆ ಧ್ವಜಾರೋಹಣವನ್ನು ನೆರವೇರಿಸಿ, ತದನಂತರ 09.00 ಗಂಟೆಯಿಂದ EMPRI ಸಂಸ್ಥೆಯವರು ಮಕ್ಕಳಿಗೆ ಚಟುವಟಿಕೆಗಳನ್ನು ನಡೆಸಿ, ಮಕ್ಕಳಿಗೆ ಬಹುಮಾನಗಳನ್ನು ನೀಡಿದರು ಮತ್ತು ಸರಿಯಾಗಿ 11.00 ಗಂಟೆಗೆ ಉದ್ಘಾಟನೆಯನ್ನು ಶ್ರೀ.ಈ. ತುಕಾರಾಮ್, ಮಾನ್ಯ ಲೋಕಸಭಾ ಸದಸ್ಯರು, ಬಳ್ಳಾರಿ ರವರು ಉದ್ಘಾಟಿಸಿ, ಉದ್ಘಾಟಕರ ನುಡಿಯಲ್ಲಿ "ಮನುಷ್ಯ ಅಥವಾ ವಿದ್ಯಾರ್ಥಿಯ ಜೀವನದಲ್ಲಿ ಸೋಲು, ಗೆಲುವು ಸಹಜ ಅದನ್ನು ಮೆಟ್ಟಿನಿಂತು ಜೀವನದ ಗುರಿಯನ್ನು ಸಾಧಿಸಿಕೊಳ್ಳಬೇಕು" ಎಂದು ತಿಳಿಸಿ "ರಾಜ್ಯ ಮಟ್ಟದ ಜಾಂಬೋರೇಟ್ ನಮ್ಮ ಕ್ಷೇತ್ರದಲ್ಲಿ ತುಂಬಾ ಅದ್ದೂರಿಯಾಗಿ ನಡೆಸಿಕೊಡುತ್ತೇವೆ, ಹಾಗೂ ಸ್ಕೌಟ್ಸ್ ಗೈಡ್ಸ್ ಮಕ್ಕಳಿಗೆ ಉಚಿತವಾಗಿ ಸಮವಸ್ತ್ರ ನಿಡುತ್ತೇನೆ" ಎಂದು ತಿಳಿಸಿರುತ್ತಾರೆ, ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀ. ನಾಗೇಂದ್ರ ಪ್ರಸಾದ್, ಭಾ. ಆ. ಸೇ, ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿ ಅವರ ನುಡಿಯಲ್ಲಿ "ಶ್ರೀ.ಪಿ.ಜಿ.ಆರ್. ಸಿಂಧ್ಯ ರವರು ಖುದ್ದಾಗಿ ಕಾರ್ಯಕ್ರಮಕ್ಕೆ ಬರಲು ಆಹ್ವಾನಿಸಿದರು, ಅದು ನನಗೆ ದೊಡ್ಡ ಗೌರವ ಎಂದು ಭಾವಿಸಿ ಕಾರ್ಯಕ್ರಮಕ್ಕೆ ಹಾಜರಾಗಿರುತ್ತೇನೆ" ಎಂದು ತಿಳಿಸಿ, "ಸ್ಕೌಟಿಂಗ್, ಗೈಡಿಂಗ್ ಎನ್ನುವುದು ಜೀವನ ನಿರ್ಮಾಣಕ್ಕೆ ಅತ್ಯುತ್ತಮವಾದ ದಾರಿದೀಪ ಎಂದು ಹಾಗೂ ಬಳ್ಳಾರಿ ಜಿಲ್ಲೆಯಲ್ಲಿ ಸ್ಕೌಟ್ಸ್& ಗೈಡ್ಸ್ ಸಂಸ್ಥೆಯು ಸತತ 75 ವರ್ಷಗಳ ಚರಿತ್ರೆ ಇದೆ. ಹಲವಾರು ಘಟಕಗಳು ಪ್ರಾರಂಭವಾಗಿವೆ" ಎಂದು ತಿಳಿಸಿದ್ದಾರೆ, ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ.ಪಿ.ಜಿ.ಆರ್. ಸಿಂಧ್ಯ, ಮಾನ್ಯ ರಾಜ್ಯ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರವರು ವಹಿಸಿ, "ರಾಜ್ಯ ಮಟ್ಟದ ಗೀತಗಾಯನ ಸ್ಪರ್ಧೆಯನ್ನು ಆಯೋಜಿಸಿದಂತಹ ಜಿಂದಾಲ್ ಸಂಸ್ಥೆಗೆ ಅಭಿನಂದನೆಗಳನ್ನು ತಿಳಿಸಿ, ಮಕ್ಕಳಿಗೆ ಗೀತಗಾಯನ ಕಾರ್ಯಕ್ರಮದಿಂದ ಮುಂದಿನ ಭವಿಷ್ಯವನ್ನು ರೂಪಿಸಿಕೊಳ್ಳುವುದಕ್ಕೆ ಇದು ಪ್ರೇರಣೆ ನೀಡುತ್ತದೆ" ಎಂದು ತಿಳಿಸಿದರು ಹಾಗೆ ಮುಂದಿನ ದಿನಗಳಲ್ಲಿ ರಾಜ್ಯ ಮಟ್ಟದ ಸಂಗೀತ ತರಬೇತಿಯನ್ನು 7 ದಿನಗಳ ಕಾಲ ಆಯೋಜಿಸಲಾಗುವುದು ಪ್ರತಿಭೆ ಇರುವವರು ಬಂದು ಭಾಗವಹಿಸ ಬಹುದು ಎಂದು ತಿಳಿಸಿದರು. ಶ್ರೀಮತಿ ಮಲ್ಲೇಶ್ವರಿ ಜುಜಾರೆ ರವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ತದನಂತರ ವಿವಿಧ ವಿಭಾಗವಾರು ವಿಂಗಡಿಸಿ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್ ಹಾಗೂ ದಳನಾಯಕರ ಗೀತಾಗಾಯನ ಸ್ಪರ್ಧೆ ಪ್ರಾರಂಭಿಸಲಾಯಿತು, ಹಾಗೂ ಪಾರದರ್ಶಕತೆಯಿಂದ ಫಲಿತಾಂಶವನ್ನು ನೀಡಲಾಯಿತು,

ಸಂಜೆ 04.00 ಗಂಟೆಗೆ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ.ಪಿ.ಜಿ.ಆರ್.ಸಿಂಧ್ಯ, ಮಾನ್ಯ ರಾಜ್ಯ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕರವರು ವಹಿಸಿದ್ದರು ಮತ್ತು ಸ್ಪರ್ಧೆಯಲ್ಲಿ ಪ್ರಥಮ, ದ್ವಿತೀಯ, ತೃತಿಯ ಸ್ಥಾನ ಪಡೆದ ಮಕ್ಕಳಿಗೆ ಬಹುಮಾನ ನೀಡಿದರು ಹಾಗೂ ಅತಿಥಿಗಳಾಗಿ ಆಗಮಿಸಿದಂತಹ ಡಾ. ವಿರೂಪಾಕ್ಷಿ ಪೂಜಾರಹಳ್ಳಿ, ಮಾನ್ಯ ರಿಜಿಸ್ಟ್ರಾರ್‌ರವರು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿಜಯನಗರ ಜಿಲ್ಲೆ ಇವರು ಮಕ್ಕಳಿಗೆ ಬಳ್ಳಾರಿಯ ಇತಿಹಾಸದ ಕುರಿತು ಮಾಹಿತಿಯನ್ನು ನೀಡಿದರು. ನಂತರ ಶ್ರೀ. ಕುಮಾರಸ್ವಾಮಿ ಬಳಿಗಾರ್, ಪ್ರಾಂಶುಪಾಲರು, ಜಿಂದಾಲ್ ಆದರ್ಶ ವಿದ್ಯಾಲಯ, ತೋರಣಗಲ್ಲು ಅವರು ಶಾಲೆಗೆ "ರಾಜ್ಯ ಮಟ್ಟದ ಗೀತಾಗಾಯನ ಸ್ಪರ್ಧೆ" ಕಾರ್ಯಕ್ರಮ ಮಾಡಲು ಆಯ್ಕೆ ಮಾಡಿರುವುದಕ್ಕೆ ಮಾನ್ಯ ರಾಜ್ಯ ಮುಖ್ಯ ಆಯುಕ್ತರಿಗೆ ಧನ್ಯವಾದಗಳನ್ನು ತಿಳಿಸಿದರು ಹಾಗೂ ಮುಂದಿನ ದಿನಗಳಲ್ಲಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲು ನಮ್ಮ ಸಂಸ್ಥೆ ಯಾವಾಗಲೂ ಸಿದ್ಧ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಶ್ರೀ.ಎಂ.ಟಿ. ಮಲ್ಲೇಶಪ್ಪ, ಜಿಲ್ಲಾಉಪಾಧ್ಯಕ್ಷರು, ಶ್ರೀ. ಎಸ್. ವಿಜಯಸಿಂಹ, ಜಿಲ್ಲಾ ಕಾರ್ಯದರ್ಶಿ, ಡಾ. ಕುಪ್ಪಗಲ್ ವಿರೇಶ್, ಜಿಲ್ಲಾ ಆಯುಕ್ತರು(ಸ್ಕೌಟ್), ಶ್ರೀ. ಎಂ.ನಾಗರಾಜ್, ಜಿಲ್ಲಾ ತರಬೇತಿ ಆಯುಕ್ತರು, ಸಂಡೂರು ತಾಲೂಕಿನ ಕಾರ್ಯದರ್ಶಿಗಳಾದ ಶ್ರೀ.ಸೋಮಪ್ಪ, ತಾಲೂಕಿನ ಕಾರ್ಯದರ್ಶಿಗಳಾದ ಶ್ರೀ.ನಟರಾಜ್, ಸಂಡೂರು ಸ್ಥಳೀಯ ಖಜಾಂಚಿಗಳಾದ ಶ್ರೀ. ಮೊಹಮ್ಮದ್ ಜಾವೀದ್, ಬಳ್ಳಾರಿ ತಾಲೂಕಿನ ಕಾರ್ಯದರ್ಶಿಗಳಾದ ಶ್ರೀ.ದೊಡ್ಡ ಬಸಪ್ಪ, ಸ್ಕೌಟ್ ಮಾಸ್ಟರ್‌ಆದ ಶ್ರೀ.ರವಿ, ಶ್ರೀ. ಶ್ರೀಧರ್ ರವರು ಮತ್ತು ಜಿಂದಾಲ್‌ಆದರ್ಶ ವಿದ್ಯಾಲಯ ಶಾಲೆಯ ಸಿಬ್ಬಂದಿ ವರ್ಗ ದವರು ಹಾಗೂ ಸಂಘಟಕರುಗಳಾದ ಶ್ರೀ ಶರೀಫ್ ಹತ್ತಿಮತ್ತೂರ್, ಕೊಪ್ಪಳ, ಶ್ರೀ ಅಂಬಣ್ಣ, ರಾಯಚೂರು, ಶ್ರೀ ಸಿಬಿ ಪಾಟೀಲ್, ವಿಜಯನಗರ ಹಾಗೂ ಶ್ರೀ ಮಹಮ್ಮದ್ ಶರ್ಫುದ್ದಿನ್ ಬಳ್ಳಾರಿ ಇವರುಗಳು ತುಂಬಾ ಅತ್ಯತ್ತುಮವಾಗಿ ಕಾರ್ಯನಿರ್ವಹಿಸಿದರು,

– ಮಲ್ಲೇಶ್ವರಿ ಜುಜಾರೆ, ಎ.ಎಸ್.ಒ.ಸಿ & ರೇಂಜರಿಂಗ್ ಪ್ರಭಾರಿ

29ನೆಯ ಜಾಂಬೋರೇಟ್

ಚಿಣ್ಣರ ಚೆನ್ನರ ಚಿನ್ನದಂತಹ ಜಾಂಬೋರೆಟ್
ಚೆನ್ನಮ್ಮನ ಚೆಲುವಿನ ಭೂಮಿಯಲಿ ನಡೆದಾಯ್ತು
ಫೀನಿಕ್ಸ್ ಶಾಲೆಯ ಆವರಣವೆಲ್ಲವು ಪಾವನವಾಯ್ತು
ಮನವದು ಗೆಲೆದು ನಲಿದುಲಿದಂತಾಯ್ತು...॥1॥

ಹಸುರಿನ ಸಿರಿ ಸಂಪತ್ತಿನ ಆಗರದಲ್ಲಿ
ಉಸಿರಾಡಿದ ಮಕ್ಕಳ ಜಯಕಾರದಲಿ
ಬಿಸಿ ಬಿಸಿ ಊಟೋಪಚಾರದ ತೊಟ್ಟಿಲಲಿ
ಕಸಿವಿಸಿ ಇಲ್ಲದ ಭಲೆ ಉತ್ಸಾಹದ ಚಿಲುಮೆಯಲಿ॥2॥

ಮೂಡಣ, ಪಡುವಣ, ಬಡಗಣ, ತೆಂಕಣ
ಕಡಲ ತಡಿಯಿಂದ ಬೆಳವಲ ಬೀದರಣ್ಣ ತನ
ಕೂಡಿದ ಕನ್ನಡ ನಾಡಿನ ಮಕ್ಕಳ ಮಹಾಮೇಳ
ಜಡತೆಯ ನೀಗಿ ಜನಮನದಾಳವ ಗೆದ್ದಾಯ್ತು॥3॥

ಮಧುಸೂದನರ ಮುಂದಾಲೋಚನೆ ನನಸಾಯ್ತು
ಮುದ ನೀಡುವದರ ಜೊತೆ ಶಿಸ್ತು ಪಾಲನೆಯಾಯ್ತು
ಸಿಂದ್ಯಾಜಿಯವರ ದಣಿವರಿಯದ ಲಾಲನೆ ಪಾಲನೆ ಪಡೆದಾಯ್ತು
ಮಿಂದ ಮಕ್ಕಳ ಹರಕೆ ಹಿರಿಯಲ್ಲರಿಗೆ ದೊರೆತಾಯ್ತು॥4॥

ಗಡಗಡ ನಡುಗುವ ಚಳಿಯಲಿ ನಡುಗಿ
ಒಡನಾಡಿಗಳ ಜೊತೆ ಆಡುವೆಡೆಗಳಲಿ ಅಡಗಿ
ಎಡೆಬಿಡೆದೆ ನಡೆದ ಕಾರ್ಯಕ್ರಮದಲಿ ತೊಡಗಿ
ಗಡಿಬಿಡಿಯಿಂದ ಬಂದು ಬಾಗಿಯಾದರೆಲ್ಲಾಕಡಿಗಿ॥5॥

ಕಲಿಕೆಯ ನಲಿಕೆಯ ಒಂದು ವಾರದ ಪಾಠ
ನೆಲದ ಸಿರಿ ಸಂಪದ ವರ್ಧಿಸುವ ಜೀವನ ಪಾಠ
ಮಿಲನದ ಮಾತಿನ ಮಂಟಪದ ಸವಿನೆನಪಿನ ತೋಟ
ಆಲಿಸಿದೆವು ನೆನಪಿಸಿದೆವು ವೀರ ಸಂಗೊಳ್ಳಿ ರಾಯಣ್ಣನ ಆಟ॥6॥

ಎಲ್ಲಿ ಕಾಣೆ ಎಲ್ಲಿ ಕಾಣೆ ಎಲ್ಲಮ್ಮನ ಚೌಕಿ
ಎಲ್ಲಿ ಕಾಣೆ ಎಲ್ಲ ಕಾಣೆ, ಉಧೋ ಉಧೋ ತಾಯಿ
ಎಲ್ಲಿ ಕಾಣೆ ಎಲ್ಲ ಕಾಣೆ, ಉಧೋ ಉಧೋ ತಾಯಿ
ನಮ್ಮೆನ್ನೆಲ್ಲಾ ಕಾಯ್ದು ಕರುಣಿಸದ ನಮ್ಮಮ್ಮ ನಿನಗೆ
ಉಧೋ ಉಧೋ ತಾಯಿ ॥7॥

ಭಲ ಭಲ ಬೆಳಗಾವಿ ಬಂಧುಗಳೆ
ಭಳಿಕಾ ಬೆಳಗಾವಿ ಬಳಗದ ಸಹೋದರ ಸಹೋದರಿಯರೆ
ಕನ್ನಡಮ್ಮನ ಕರುಣೆಯ ಆಶಿರ್ವಾದವು ನಿಮಗಿರಲಿ
ಉನ್ನತ ಗುರಿಯೆಡೆ ಸಾಗುವ ಶಕ್ತಿಮುಕ್ತಿಯ ಆಶೀರ್ವಾದ ನಿಮಗೀಯಲಿ॥8॥

ಎಲ್ಲರ ಅಣ್ಣ ಬಿಪಿಯಣ್ಣ ಚಿಣ್ಣರ ಬದುಕಿಗೆ ಬಂಗಾರ
ಎಲ್ಲೆ ಇರಲಿ ಹೇಗೆ ಇರಲಿ ಮಕ್ಕಳೇ ದೇಶಕೆ ಶೃಂಗಾರ
ಎಲ್ಲರ ಅರಿತು ಹಾಕಿಕೊಟ್ಟಿರುವ ಮಾರ್ಗವೆ ನಮಗೆ ಆಧಾರಾ
ಬೆಲ್ಲದ ಬಾಳಿಗೆ ಭಾಗ್ಯವನರಸುವ ಸರ್ವರ ಬಾಳಿನ ಮಹಾದ್ವಾರಾ॥9॥

ವೀರ ವಿವೇಕರ ಶೂರ ಸುಭಾಶರ ಜೀವನವೆಮಗೆ ಆದರ್ಶ
ಪರಮಹಂಸ ಮಾತೆ ಶಾರದೆ ಅರವಿಂದರ ಅಡಿಸ್ಪರ್ಷ
ಕರಮ ಚಂದ ಮೋಹನ ಗಾಂಧಿ ನೆನೆಯಲು ಹರ್ಷ
ಭಾರತ ಮಾತೆಯ ಮಡಿಲ ಮಕ್ಕಳ ಜಯಗೀತೆಯ ವರ್ಷ

ರಚನೆ : ಎಮ್.ಆರ್. ಪಾಟೀಲ್, ಎಲ್.ಐ.(ಎಸ್), ಡಿ.ಐ.ಪಿ., ಹಾವೇರಿ

ರಾಜ್ಯ ಮಟ್ಟದ ರಾಜ್ಯ ಪುರಸ್ಕಾರ ಸ್ಕೌಟ್ಸ್ ಮತ್ತು ಗೈಡ್ಸ್ ಪರೀಕ್ಷಾ ಶಿಬಿರಗಳು :

ದಕ್ಷಿಣ ಕನ್ನಡ – ಕರ್ನಾಟಕ ರಾಜ್ಯ ಸಂಸ್ಥೆ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ವತಿಯಿಂದ ದಿನಾಂಕ 12.12.2025 ರಿಂದ 14.12.2025 ರವರೆಗೆ ಜಿಲ್ಲಾ ತರಬೇತಿ ಕೇಂದ್ರ ಪಿಲಿಕುಳದಲ್ಲಿ ರಾಜ್ಯ ಮಟ್ಟದ ರಾಜ್ಯ ಪುರಸ್ಕಾರ ಸ್ಕೌಟ್ಸ್ ಮತ್ತು ಗೈಡ್ಸ್ ಪರೀಕ್ಷಾ ಶಿಬಿರವು ನಡೆಯಿತು. ಪರೀಕ್ಷಾ ಶಿಬಿರದಲ್ಲಿ ಸ್ಕೌಟ್ ವಿಭಾಗದಲ್ಲಿ ಶಿಬಿರ ನಾಯಕರಾಗಿ ಶ್ರೀ ಆನಂದ ಅಡಿಗ, ಎಲ್.ಟಿ. (ಸ್ಕೌ), ಗೈಡ್ ವಿಭಾಗದ ನಾಯಕಿಯಾಗಿ ಶ್ರೀಮತಿ ಮೇಬಲ್ ಡಿಸೋಜ, ಎಎಲ್‌ಟಿ(ಗೈ) ಕಾರ್ಯನಿರ್ವಹಿಸಿದರು. ಸ್ಕೌಟ್ ವಿಭಾಗದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಿಂದ ಒಟ್ಟು 165, ಗೈಡ್ ವಿಭಾಗದಲ್ಲಿ ಒಟ್ಟು 135, ಉಡುಪಿ ಜಿಲ್ಲೆಯಿಂದ ಸ್ಕೌಟ್ ವಿಭಾಗದಲ್ಲಿ ಒಟ್ಟು 06 ಗೈಡ್ ವಿಭಾಗದಲ್ಲಿ ಒಟ್ಟು 08. ಒಟ್ಟು ವಿದ್ಯಾರ್ಥಿಗಳು 314 ಹಾಗೂ ಸ್ಕೌಟ್ ಮಾಸ್ಟರ್‌ಗಳು 13, ಗೈಡ್ ಕ್ಯಾಪ್ಟನ್‌ಗಳು 33 ಒಟ್ಟು 46 ಮಂದಿ ಶಿಬಿರದಲ್ಲಿ ಭಾಗವಹಿಸಿದರು.

***ಚಿಕ್ಕಮಗಳೂರು** – ದಿನಾಂಕ 5–12–2025 ರಿಂದ 7–12–2025ರ ವರೆಗೆ ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳ ರಾಜ್ಯ ಮಟ್ಟದ ರಾಜ್ಯ ಪುರಸ್ಕಾರ್ ಸ್ಕೌಟ್ಸ್ ಮತ್ತು ಗೈಡ್ಸ್‌ಗಳ ಪರೀಕ್ಷಾ ಶಿಬಿರವನ್ನು, ಜಿಲ್ಲಾ ಸ್ಕೌಟ್ ಭವನ ಚಿಕ್ಕಮಗಳೂರು ಇಲ್ಲಿ ಆಯೋಜಿಸಲಾಯಿತು. ಸ್ಕೌಟ್ ವಿಭಾಗದ ನಾಯಕರಾಗಿ ಶ್ರೀ ಗಂಗಾಧರಪ್ಪ ಮತ್ತು ಗೈಡ್ ವಿಭಾಗದ ನಾಯಕಿಯಾಗಿ ಶ್ರೀಮತಿ ಕಾತ್ಯಾಯಿನಿ ಕೆ.ಪಿ. ಎಲ್.ಟಿ.(ಜಿ) ಇವರುಗಳ ಮಾರ್ಗದರ್ಶನದಲ್ಲಿ ಪರೀಕ್ಷಾ ಶಿಬಿರವು ನಡೆಯಿತು. ಎರಡು ಜಿಲ್ಲೆಗಳಿಂದ ಒಟ್ಟು 195 ಸ್ಕೌಟ್ಸ್‌ಗಳು 259 ಗೈಡ್ಸ್‌ಗಳು ಭಾಗವಹಿಸಿದ್ದರು. ದಿನಾಂಕ 5–12–2025 ರಂದು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಎಂ.ಎನ್. ಷಡಕ್ಷರಿಯವರು ಉದ್ಘಾಟಿಸಿ ಪರೀಕ್ಷಾ ಶಿಬಿರಕ್ಕೆ ಆಗಮಿಸಿದ್ದ ಶಿಬಿರಾರ್ಥಿಗಳಿಗೆ ಶುಭಕೋರಿದರು. ದಿನಾಂಕ 6–12–2025 ರಂದು ಜಿಲ್ಲಾ ಸ್ಕೌಟ್ ಆಯುಕ್ತರು ಶ್ರೀ ಟಿ.ಕೆ. ಪಣಿರಾಜ್ ಮತ್ತು ಜಿಲ್ಲಾ ಗೈಡ್ ಆಯುಕ್ತರು ಶ್ರೀಮತಿ ಡಿ.ಎಸ್. ಮಮತ ರವರು ಭೇಟಿ ನೀಡಿ ಶಿಬಿರಾರ್ಥಿಗಳ ಯೋಗ ಕ್ಷೇಮ ವಿಚಾರಿಸಿದರು. ದಿನಾಂಕ 7–12–2025 ರಂದು ಬೆಳಿಗ್ಗೆ ಶೃಂಗೇರಿ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀಮತಿ ವರಲಕ್ಷ್ಮಿ ಇವರು ಪರೀಕ್ಷಾ ಶಿಬಿರಕ್ಕೆ ಭೇಟಿ ನೀಡಿ ಶಿಬಿರಾರ್ಥಿಗಳಿಗೆ ಶುಭಕೋರಿದರು. ಇದೇ ದಿವಸ ರಾಜ್ಯ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಎ.ಎನ್. ಮಹೇಶ್‌ರವರು ಭೇಟಿ ನೀಡಿ ಶಿಬಿರಾರ್ಥಿಗಳ ವ್ಯವಸ್ಥೆಯ ಬಗ್ಗೆ ವಿಚಾರ ಮಾಡಿ ಪರಿಶೀಲಿಸಿದರು. ಇದೇ ದಿವಸ ಅಂದರೆ 7–12–2025 ಬೆಳಿಗ್ಗೆ 7.30ಕ್ಕೆ ಚಿಕ್ಕಮಗಳೂರು ಫ್ರೀಡಂ ಪಾರ್ಕ್‌ನಲ್ಲಿ ಸರ್ವಧರ್ಮ ಪ್ರಾರ್ಥನೆ ನಡೆಯಿತು.

ರಾಯಚೂರು – ದಿನಾಂಕ: 19–12–2025 ರಿಂದ 21–12–2025ರ ವರಗೆ 2024–25ನೇ ಸಾಲಿನ ರಾಜ್ಯ ಮಟ್ಟದ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಪುರಸ್ಕಾರ ಪರೀಕ್ಷಾ ಶಿಬಿರವನ್ನು ಜ್ಞಾನ ಗಂಗಾ ಶಾಲೆ ಹಾಗೂ ಡಾನ್ ಬಾಸ್ಕೋ ಶಾಲೆ, ದೇವದುರ್ಗ ರಾಯಚೂರು ಜಿಲ್ಲೆ ಇಲ್ಲಿ ಆಯೋಜನೆ ಮಾಡಲಾಯಿತು. ಶಿಬಿರದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಗದ್ದಿ ಬಸಪ್ಪ, ಜಿಲ್ಲಾ ಕಾರ್ಯದರ್ಶಿಗಳು ಇವರು ವಹಿಸಿದ್ದರು. ಶ್ರೀ ಚಂದ್ರಶೇಖರ ಭಂಡಾರಿ, ಉಪನಿರ್ದೇಶಕರು (ಅ) ಹಾಗೂ ಪ್ರಾಂಶುಪಾಲರು ಇವರು ಸಸಿಗೆ ನೀರು ಹಾಕುವ ಮೂಲಕ ಶಿಬಿರವನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಜಿ. ಮಲ್ಲಿಕಾರ್ಜುನ ಕ್ಷೇತ್ರ ಶಿಕ್ಷಣಾಧಿಕಾರಿಗಳು ದೇವದುರ್ಗ, ಶ್ರೀ ಶಿವರಾಜ ಪೂಜಾರಿ ಸಮನ್ವಯಾಧಿಕಾರಿಗಳು ದೇವದುರ್ಗ, ಶ್ರೀಮತಿ ಆಲೀಯಾ ಖಾನಂ, ಜಿಲ್ಲಾ ಆಯುಕ್ತರು (ಗೈ), ಫಾ. ಜಾನ್‌ಪೌಲ್, ನಿರ್ದೇಶಕರು ಡಾನ್ ಬಾಸ್ಕೋ ಶಾಲೆ ದೇವದುರ್ಗ, ಶ್ರೀ ತಿರುಪತಿ ಸೂಗುರ್ ಅಧ್ಯಕ್ಷರು, ಶ್ರೀ ಶಿವಪ್ಪ ಹಸಮಕಲ್, ಕಾರ್ಯದರ್ಶಿಗಳು ಮಸ್ಕಿ ಇವರು ಆಗಮಿಸಿದ್ದರು. ಶ್ರೀ ರಂಗನಾಥ ಸಿ., ಕಾರ್ಯದರ್ಶಿಗಳು ಎಲ್ಲರನ್ನೂ ಸ್ವಾಗತಿಸಿದರು. ಸ್ಕೌಟ್ ವಿಭಾಗದ ಶಿಬಿರದ ನಾಯಕರಾಗಿ ಶ್ರೀ ಶಶಿಕಾಂತ್ ದೇಸಾಯಿ ALT (S) ರಾಜ್ಯ ಪರಿಷತ್ ಸದಸ್ಯರು ಹಾಗೂ ಗೈಡ್ ವಿಭಾಗದ ನಾಯಕಿಯಾಗಿ ಶ್ರೀಮತಿ ರಜನಿ. ಡಿ Pre-ALT (G) ರಾಜ್ಯ ಪರಿಷತ್ ಸದಸ್ಯರು ಕಾರ್ಯವನ್ನು ನಿರ್ವಹಿಸಿದರು. ಶಿಬಿರದ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಬಸವರಾಜ ಬೋರೆಡ್ಡಿ, ಜಿಲ್ಲಾ ಮುಖ್ಯ ಆಯುಕ್ತರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಗದ್ದಿ ಬಸಪ್ಪ, ಜಿಲ್ಲಾ ಕಾರ್ಯದರ್ಶಿಗಳು, ಫಾದರ್ ರುಬಿನ್ ಥಾಮಸ್, ಆಡಳಿತಾಧಿಕಾರಿಗಳು ಡಾನ್ ಬಾಸ್ಕೋ ಶಾಲೆ ದೇವದುರ್ಗ, ,ಶ್ರೀ ಬೀರಪ್ಪ ಶಂಭೋಜಿ, ಸಹಾಯಕ ಜಿಲ್ಲಾ ಆಯುಕ್ತರು/ಕಾರ್ಯದರ್ಶಿಗಳು ಸಿಂಧನೂರು, ಮಸ್ಕಿ ಇವರು ಆಗಮಿಸಿದ್ದರು.

ನಿಪುಣ್ ಪರೀಕ್ಷಾ ಶಿಬಿರ:

ನಿಪುಣ್ ಪರೀಕ್ಷಾ ಶಿಬಿರವು ದಿನಾಂಕ 12.12.2025 ರಂದು ಕೆ.ಎಸ್.ಎಸ್. ಕಾಲೇಜು, ಸುಬ್ರಹ್ಮಣ್ಯ, ದಕ್ಷಿಣ ಕನ್ನಡ ಜಿಲ್ಲೆ ಇಲ್ಲಿ ನಡೆಯಿತು. ಸಮಾರಂಭದ ಅಧ್ಯಕ್ಷತೆಯನ್ನು ಡಾ. ದಿನೇಶ್ ಪಿ.ಟಿ. ವಹಿಸಿದ್ದರು. ಶಿಬಿರವನ್ನು ಶ್ರೀಮತಿ ವಿಮಲಾ ರಂಗಯ್ಯ, ಜಿಲ್ಲಾ ಗೈಡ್ ಆಯುಕ್ತರು ಉದ್ಘಾಟಿಸಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರತಿಮ್ ಕುಮಾರ್ ಕೆ.ಎಸ್., ಅತಿಥಿಯಾಗಿ ಉಪಸ್ಥಿತರಿದ್ದರು. ಕೆ.ಎಸ್.ಎಸ್. ಕಾಲೇಜಿನ ರೋವರ್ ಸ್ಕೌಟ್ ಲೀಡರ್ ಶ್ರೀ ಮನೋಹರ ಸ್ವಾಗತಿಸಿದರು, ಕಾರ್ಯಕ್ರಮದ ನಿರೂಪಣೆ ಮತ್ತು ಧನ್ಯವಾದ ಶ್ರೀ ರಾಮ್‌ಪ್ರಸಾದ್ ಎಸ್. ನೆರವೇರಿಸಿದರು. ಶಿಬಿರದ ರೋವರ್ ವಿಭಾಗದ ನಾಯಕರಾಗಿ ಶ್ರೀ ಚಂದ್ರಾಕ್ಷ, ರೋವರ್ ಸ್ಕೌಟ್ ಲೀಡರ್, ಸೈಂಟ್ ಫಿಲೋಮಿನಾ ಕಾಲೇಜು, ಪುತ್ತೂರು ಹಾಗೂ ರೇಂಜರ್ ವಿಭಾಗದ ನಾಯಕಿಯಾಗಿ ಗೋವಿಂದದಾಸ ಕಾಲೇಜು, ಸುರತ್ಕಲ್‌ನ ಶ್ರೀಮತಿ ಅಪೇಕ್ಷ ಭಂಡಾರಿ ನಿರ್ವಹಿಸಿದರು.



ಬೆಂಗಳೂರು ಗ್ರಾಮಾಂತರ



ದಿನಾಂಕ 7.11.2025 ರಂದು ಸಂಸ್ಥಾಪನ ದಿನಾಚರಣೆ ಪ್ರಯುಕ್ತ ಮಾನ್ಯ ಶ್ರೀ ಬಸವರಾಜ್ ಎ.ಬಿ., ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇವರು ತಮ್ಮ ಕಚೇರಿಯಲ್ಲಿ ಸ್ಟ್ಯಾಂಪ್ ಬಿಡುಗಡೆ ಮಾಡಿ ಶುಭಾಶಯ ತಿಳಿಸಿದರು.



– ಜಿಲ್ಲಾ ಸಂಸ್ಥೆ ಬೆಂಗಳೂರು ಗ್ರಾಮಾಂತರ, ದಿನಾಂಕ 7.11.2025 ರಂದು ಸಂಸ್ಥಾಪನ ದಿನಾಚರಣೆಯ ಪ್ರಯುಕ್ತ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀಮತಿ ಅನುರಾಧರವರು ತಮ್ಮ ಕಚೇರಿಯಲ್ಲಿ ಸ್ಟ್ಯಾಂಪ್ ಬಿಡುಗಡೆ ಮಾಡಿ ಶುಭಾಶಯ ತಿಳಿಸಿದರು.

– ದಿನಾಂಕ 7.11.2025 ರಂದು ಸಂಸ್ಥಾಪನ ದಿನಾಚರಣೆ ಪ್ರಯುಕ್ತ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಡಿಡಿಪಿಐ ಶ್ರೀ ಬೈಲಾಂಜನಪ್ಪರವರು ತಮ್ಮ ಕಚೇರಿಯಲ್ಲಿ ಸ್ಟ್ಯಾಂಪ್ ಬಿಡುಗಡೆ ಮಾಡಿ ಶುಭಾಶಯ ತಿಳಿಸಿದರು.

– ದಿನಾಂಕ 7.11.2025 ರಂದು ಸಂಸ್ಥಾಪನ ದಿನಾಚರಣೆ ಪ್ರಯುಕ್ತ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಡಿಡಿಪಿಯು ಶ್ರೀ ಮೋಹನ್ ಕುಮಾರ್ ಎನ್.ರವರು ತಮ್ಮ ಕಚೇರಿಯಲ್ಲಿ ಸ್ಟ್ಯಾಂಪ್ ಬಿಡುಗಡೆ ಮಾಡಿ ಶುಭಾಶಯ ತಿಳಿಸಿದರು.

– ದಿನಾಂಕ 11.11.2025ರಂದು ಸಂಸ್ಥಾಪನ ದಿನಾಚರಣೆ ಪ್ರಯುಕ್ತ ನೆಲಮಂಗಲ ಸ್ಥಳೀಯ ಸಂಸ್ಥೆ ಅಧ್ಯಕ್ಷರಾದ ಶ್ರೀ ಸಿ.ಎನ್. ರಾಮಸ್ವಾಮಿಯವರು ಸ್ಟ್ಯಾಂಪ್ ಬಿಡುಗಡೆ ಮಾಡಿ ಶುಭಾಶಯ ತಿಳಿಸಿದರು.

– ಸರ್ಕಾರಿ ಪ್ರಥಮ ದರ್ಜೆ ಕಾಲೇಜು ದೇವನಹಳ್ಳಿ, ಇಲ್ಲಿ ರೇಂಜರ್ ಲೀಡರ್ ಶ್ರೀಮತಿ ಅನ್ನಪೂರ್ಣರವರ ನೇತೃತ್ವದಲ್ಲಿ ಧ್ವಜ ದಿನವನ್ನು ಆಚರಣೆ ಮಾಡಲಾಯಿತು.

– ಸ್ಥಳೀಯ ಸಂಸ್ಥೆ ನೆಲಮಂಗಲ ತಾಲೂಕು ಹಂತದ ಗೀತಗಾಯನ ಹಾಗೂ ತಾಲೂಕು ಪರಿಷತ್ ಸಭೆಯನ್ನು ನಡೆಸಲಾಯಿತು. ಈ ಸಭೆಯ ಅಧ್ಯಕ್ಷತೆಯನ್ನು ಶ್ರೀ ನಾಗರಾಜ್ ಜಿಲ್ಲಾ ಮುಖ್ಯ ಆಯುಕ್ತರು ವಹಿಸಿದ್ದರು. ಇದೇ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಶ್ರೀನಿವಾಸ್ ಪ್ರಸಾದ್, ಜಿಲ್ಲಾ ಆಯುಕ್ತರು ಗೈಡ್ಸ್ ಶ್ರೀಮತಿ ವಿಜಯಕುಮಾರಿ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳಾದ ಶ್ರೀ ಪ್ರಕಾಶ್ ಹೆಚ್ಚುವರಿ ಆಯುಕ್ತರಾದ ಶ್ರೀ ನಾಗೇಶ್ ವೇದವತಿ ಉಪಸ್ಥಿತರಿದ್ದರು.

– ದಿನಾಂಕ 15.11.2025 ರಿಂದ 16.11.2025 ರವರೆಗೆ ಚತುರ್ಥ ಚರಣ್ ಮತ್ತು ಹಿರಕ್ ಪಂಕ್ ಪರೀಕ್ಷೆಯನ್ನು ನಳಂದ ಶಾಲೆ ದೊಡ್ಡಬಳ್ಳಾಪುರ ಇಲ್ಲಿ ನಡೆಸಲಾಯಿತು.

ಬೆಂಗಳೂರು ದಕ್ಷಿಣ

– ದಿನಾಂಕ 09/01/2026 ರಂದು ಬೆಂಗಳೂರು ದಕ್ಷಿಣ ಜಿಲ್ಲೆಯ ಕೆ.ಆರ್.ಪುರಂ ಸ್ಥಳೀಯ ಸಂಸ್ಥೆಯ ವಾರ್ಷಿಕ ರ್ಯಾಲಿಯನ್ನು ಸಾಮ್ಯೂಯಲ್ ಪಬ್ಲಿಕ್ ಶಾಲೆಯಲ್ಲಿ ಆಯೋಜನೆ ಮಾಡಲಾಯಿತು. ಮುಖ್ಯ ಅತಿಥಿಗಳಾಗಿ ಶ್ರೀ ಟಿ.ಕೆ. ನಾರಾಯಣಸ್ವಾಮಿ, ಜಿಲ್ಲಾ ತರಬೇತಿ ಆಯುಕ್ತರು (ಸ್ಕೌಟ್ಸ್), ಶ್ರೀಮತಿ ವಿಕ್ಟೋರಿಯಾ ಅಮಲಾರಾಣಿ, ಜಿಲ್ಲಾ ಜಂಟಿ ಕಾರ್ಯದರ್ಶಿಗಳು (ಗೈಡ್ಸ್), ಗೌರವ ಅಥಿತಿಯಾಗಿ ಶ್ರೀಮತಿ ಕೆ.ವಿ. ಶಾಮಲ, ರಾಜ್ಯ ತರಬೇತಿ ಆಯುಕ್ತರು (ಗೈಡ್ಸ್), ಶ್ರೀ ಎಸ್.ಎಲ್.ವಿ. ಶೇಖರ್, ಅಧ್ಯಕ್ಷರು ಕೆ.ಆರ್.ಪುರಂ, ಸ್ಥಳೀಯ ಸಂಸ್ಥೆ, ಶ್ರೀ ಅಂತೋಣಿ ಸ್ವಾಮಿ, ಮಾಜಿ ಕಾರ್ಪೊರೇಟರ್ ಕೆ.ಆರ್.ಪುರಂ, ಶ್ರೀ ಉಮೇಶ್ ಸಾಮ್ಯೂಯಲ್ ಸಂಸ್ಥಾಪಕ ಪ್ರಾಂಶುಪಾಲರು ಸಾಮ್ಯೂಯಲ್ ಪಬ್ಲಿಕ್ ಸ್ಕೂಲ್, ಡಾ. ಮಾನಸ ಹೆಬ್ಬರ್ ಎ.ಡಿ.ಸಿ. (ಗೈಡ್ಸ್), ಶ್ರೀಮತಿ ಹೆಜ್ಸಲ್ ಬೆನೆಡಿಕ್ಟ್, ಶ್ರೀಮತಿ ಉಷ ದಾಮೋದರನ್ ಭಾಗವಹಿಸಿದ್ದರು. ರ್ಯಾಲಿಯಲ್ಲಿ 936 ಸ್ಕೌಟ್ಸ್, ಗೈಡ್ಸ್, ಕಬ್ಸ್–ಬುಲ್‌ಬುಲ್, ದಳನಾಯಕರುಗಳು ಭಾಗವಹಿಸಿದರು. ರ್ಯಾಲಿಯು ಧ್ವಜರೋಹಣದೊಂದಿಗೆ ಪ್ರಾರಂಭವಾಯಿತು. ಮತ್ತು ಪಥ ಸಂಚಲನದೊಂದಿಗೆ ರ್ಯಾಲಿಯ ಚಟುವಟಿಕೆಗಳು ಮುಂದುವರೆಯಿತು. ಸ್ಪರ್ಧೆಗಳ ಚಟುವಟಿಕೆಗಳು ಪ್ರವರ್ತಕ, ಬೆಂಕಿಯಿಲ್ಲದೆ ಅಡುಗೆ ಮಾಡುವುದು, ಚಿತ್ರಕಲೆ, ಹಾಡುಗಾರಿಕೆ, ಆರಿಸಿ ಮಾತನಾಡುವುದು, ರಂಗೋಲಿ, ತರಕಾರಿಯಿಂದ ಕೆತ್ತನೆ ಮಾಡುವುದು, ಹೂವಿನ ಗುಚ್ಚ ಮಾಡುವುದು ಇತ್ಯಾದಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಯಿತು.

– ಜನವರಿ ಮಾಹೆಯಲ್ಲಿ ರಸ್ತೆ ಸುರಕ್ಷತಾ ಜಾಗೃತಿ ಮತ್ತು ಮಾಸಾಚರಣೆಯ



ಅಂಗವಾಗಿ ಬೆಂಗಳೂರು ದಕ್ಷಿಣ ಜಿಲ್ಲೆಯ ದಳಗಳ ಹಂತದಲ್ಲಿ ಸ್ಥಳೀಯ ಪೋಲಿಸ್ ಸಿಬ್ಬಂದಿಯ ಸಹಾಯದೊಂದಿಗೆ ಜಾಥವನ್ನು ಆಯೋಜಿಸಲಾಗಿತ್ತು. ಜಾಥದಲ್ಲಿ ಕಬ್–ಬುಲ್‌ಬುಲ್, ಸ್ಕೌಟ್ಸ್–ಗೈಡ್ಸ್, ದಳ ನಾಯಕರುಗಳು, ಪೋಲಿಸ್ ಸಿಬ್ಬಂದಿಗಳು ಭಾಗವಹಿಸಿದರು.



ದಿನಾಂಕ 10/01/2026 ರಂದು ಬೆಂಗಳೂರು ದಕ್ಷಿಣ ಜಿಲ್ಲೆಯ ವಿಜಯನಗರ ಸ್ಥಳೀಯ ಸಂಸ್ಥೆಯ ವಾರ್ಷಿಕ ರ್ಯಾಲಿಯನ್ನು ಬಿ.ಜಿ.ಎಸ್. ಪಬ್ಲಿಕ್ ಶಾಲೆಯಲ್ಲಿ ಆಯೋಜನೆ ಮಾಡಲಾಯಿತು. ಡಾ. ನಿರ್ಮಲಾನಂದ ಮಹಾ ಸ್ವಾಮಿಜಿಯವರು ಆಶೀರ್ವಚನ ನೀಡಿದರು. ಸಮಾರೋಪ ಸಮಾರಂಭದಲ್ಲಿ ಶ್ರೀ ಟಿ.ಕೆ. ನಾರಾಯಣಸ್ವಾಮಿ, ಜಿಲ್ಲಾ ತರಬೇತಿ ಆಯುಕ್ತರು (ಸ್ಕೌಟ್ಸ್) ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು, ಅತಿಥಿಗಳಾಗಿ ಬಿ.ಜಿ.ಎಸ್. ಪಬ್ಲಿಕ್ ಶಾಲೆಯ ಪ್ರಾಂಶುಪಾಲರಾದ ಡಾ. ಶಾಲಿನಿ ಷಡಕ್ಷರಿ, ಸೆಕ್ರೆಡ್ ಚಿಲ್ಡ್ರನ್ ಶಾಲೆಯ ಸಂಸ್ಥಾಪಕ ಕಾರ್ಯದರ್ಶಿಗಳು ಮತ್ತು ವಿಜಯನಗರ ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ರಾಜು ಉಪಸ್ಥಿತರಿದ್ದರು. ರ್ಯಾಲಿಯಲ್ಲಿ 31 ಬನ್ನಿಗಳು, 284 ಸ್ಕೌಟ್ಸ್‌ಗಳು, 200 ಗೈಡ್ಸ್‌ಗಳು, 35 ಕಬ್ಸ್‌ಗಳು, 31 ಬುಲ್‌ಬುಲ್‌ಗಳು, 37 ದಳನಾಯಕರುಗಳು ಭಾಗವಹಿಸಿದರು. ರ್ಯಾಲಿಯು ಧ್ವಜರೋಹಣದೊಂದಿಗೆ ಪ್ರಾರಂಭವಾಯಿತು. ಪಥಸಂಚಲನದೊಂದಿಗೆ ರ್ಯಾಲಿಯ ಚಟುವಟಿಕೆಗಳು ಮುಂದುವರೆಯಿತು. ಬೆಂಕಿಯಿಲ್ಲದೆ ಅಡುಗೆ ಮಾಡುವುದು, ಫ್ಯಾನ್ಸಿಡ್ರೆಸ್, ಚಿತ್ರಕಲೆ, ಗುಡಾರ ಹಾಕುವುದು, ಇತ್ಯಾದಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಯಿತು.

ಬೆಂಗಳೂರು ಉತ್ತರ



– 75ನೇ ಭಾರತ್ ಸ್ಕೌಟ್ಸ್–ಗೈಡ್ಸ್ ಸ್ಥಾಪನಾದಿನ ಕಾರ್ಯಕ್ರಮದ ಅಂಗವಾಗಿ ಬೆಂಗಳೂರು ಉತ್ತರ ಜಿಲ್ಲೆ ಮತ್ತು ಮಲ್ಲೇಶ್ವರಮ್ ಸ್ಥಳೀಯ ಸಂಸ್ಥೆ ಆಶ್ರಯದಲ್ಲಿ ಬೃಹತ್ ಸೈಕಲ್ ಜಾಥಾ ಕಾರ್ಯಕ್ರಮವನ್ನು ಮಲ್ಲೇಶ್ವರಮ್ ಮುಖ್ಯ ರಸ್ತೆಯಲ್ಲಿ ಆಯೋಜಿಸಲಾಯಿತು. ಇದಕ್ಕೆ ವಿದ್ಯಾ ಮಂದಿರ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ರಾಜೇಶ್ವರಿ ಇವರು ಚಾಲನೆ ನೀಡಿದರು. ವಿವಿಧ ಶಾಲೆ ಕಾಲೇಜುಗಳಿಂದ 350 ಸೌಟ್ಸ್–ಗೈಡ್ಸ್ ರೋವರ್–ರೇಂಜರ್ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿ ಇವರು ಎಲ್ಲರನ್ನೂ ಸ್ವಾಗತಿಸಿದರು. ಶ್ರೀಮತಿ ಜ್ಯೋತಿರಂಗನಾಥ್ ಈ ಕಾರ್ಯಕ್ರಮವನ್ನು ಸಂಘಟಿಸಿದರು.

– ಜಿಲ್ಲಾ ಮಟ್ಟದ ಗೀತ ಗಾಯನವನ್ನು ಅಂಗವಾಗಿ ದಿನಾಂಕ 11–11–2025 ರಂದು ಆರ್.ಟಿ. ನಗರ ಪಬ್ಲಿಕ್ ಸ್ಕೂಲ್ ಇಲ್ಲಿ ಆಯೋಜಿಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಬಿ.ಆರ್. ಪ್ರಸನ್ನಕುಮಾರ್ ಇವರು ನೆರವೇರಿಸಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿ ಎಲ್ಲರನ್ನೂ ಸ್ವಾಗತಿಸಿದರು. ಕಾರ್ಯಕ್ರಮ ನಿರೂಪಣೆಯನ್ನು ಮಲ್ಲೇಶ್ವರಮ್ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಜ್ಯೋತಿರಂಗನಾಥ್ ನಿರ್ವಹಿಸಿದರು. ಆರ್.ಟಿ.ನಗರ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಸುನೀತ ಇವರು ಕಾರ್ಯಕ್ರಮವನ್ನು ಸಂಘಟಿಸಿದರು.

– ದಿನಾಂಕ 08–11–2025 ರಂದು ಯಲಹಂಕ ಸ್ಥಳೀಯ ಸಂಸ್ಥೆಯ ವತಿಯಿಂದ ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಡಿಲ್ಲಿ ಪಬ್ಲಿಕ್ ಸ್ಕೂಲ್ ಯಲಹಂಕ ಇಲ್ಲಿ ಆಯೋಜಿಸಲಾಯಿತು. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಬಿ.ಆರ್. ಪ್ರಸನ್ನಕುಮಾರ್ ಇವರು ಉದ್ಘಾಟಿಸಿದರು. ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ರಾಣಿ ಸುಸಾಯಿವರು ಶಿಬಿರಾರ್ಥಿಗಳಿಗೆ ಶುಭಾಶಯ ಕೋರಿದರು. ಗೈಡ್ಸ್ ವಿಭಾಗದ ನಾಯಕಿಯಾಗಿ ಶ್ರೀಮತಿ ಪೂರ್ಣಿಮ ಹಾಗೂ ಸ್ಕೌಟ್ಸ್ ವಿಭಾಗದ ನಾಯಕರಾಗಿ ಶ್ರೀಮತಿ ಶೋಭ ಪಿ.ಪಿ. ಇವರು ಕಾರ್ಯನಿರ್ವಹಿಸಿದರು. ಯಲಹಂಕ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಮೋಹನ್ ಕುಮಾರ್ ಶಿಬಿರವನ್ನು ಸಂಘಟಿಸಿದರು.

– ಚಾಮುಂಡಿ ಮುಕ್ತ ದಳ ಮಲ್ಲೇಶ್ವರಮ್ ಇಲ್ಲಿ ನವೆಂಬರ್ 7 ರಂದು ಸ್ಥಾಪನಾದಿನವನ್ನು ವಿಭಿನ್ನ ರೀತಿಯಲ್ಲಿ ಆಚರಿಸಲಾಯಿತು. ಮಲ್ಲೇಶ್ವರಮ್ ಪ್ರಮುಖ ರಸ್ತೆಗಳ ಮೂಲಕ ಪಥಚಲನ ನಡೆಸಲಾಯಿತು. ತದ ನಂತರ ವೃದ್ಧಾಶ್ರಮದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಂಡು ಅಲ್ಲಿಯ ನಿವಾಸಿಗಳಿಗೆ ಧಾನ್ಯ, ಸಾಮಗ್ರಿಗಳು, ಬಿಸ್ಕತ್ತು, ಹಣ್ಣು, ಸಿಹಿ ಪದಾರ್ಥಗಳನ್ನು ವಿತರಿಸುವ ಜೊತೆಗೆ ಭಜನೆ ಹಾಡುಗಳ ಮೂಲಕ ಮನರಂಜನಾ ಕಾರ್ಯಕ್ರಮ ನಡೆಸಲಾಯಿತು. ಈ ಕಾರ್ಯಕ್ರಮಕ್ಕೆ ದಳದ ನಾಯಕರಾದ ಶ್ರೀ ಕೆ. ನರಸಿಂಹಮೂರ್ತಿ ಚಾಲನೆ ನೀಡಿ ಶುಭ ಹಾರೈಸಿದರು. ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಹೇಮಂತ್ ಕುಮಾರ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಶುಭ ಕೋರಿದರು.


ನಮ್ಮ ನಾಡು ನುಡಿ ನಮ್ಮ ಹೆಮ್ಮೆ
ನಮ್ಮ ಕನ್ನಡ ನಮ್ಮ ಉಸಿರು
ನಮ್ಮ ಭಾಷೆ ನಮ್ಮ ಜೀವಾಳ
ನಮ್ಮ ನಾಡು

ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮ ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ಮುನಿರಾಜು ನೇತೃತ್ವದಲ್ಲಿ ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರಕಾಶರವರ ಮಾರ್ಗದರ್ಶನದಂತೆ ನಡೆಯಿತು. ಸದರಿ ಶಾಲೆಯ ಮುಖ್ಯ ಶಿಕ್ಷಕರು ಹಾಗೂ ಬಿ.ಆರ್.ಸಿ. ಕೇಂದ್ರದ ಸಮನ್ವಯಾಧಿಕಾರಿ ಶ್ರೀ ಕೆ ಹೆಚ್. ಪ್ರಸನ್ನಕುಮಾರ್, ಅಧ್ಯಕ್ಷೀಯ ನುಡಿಯನ್ನು ನುಡಿದರು. ತೀರ್ಪುಗಾರರಾಗಿ ಶ್ರೀಮತಿ ನಾಗರತ್ನ, ಶ್ರೀಮತಿ ಸುಷ್ಮಾ ಮೇಘಜೋಶಿ, ಶ್ರೀಮತಿ ವೆಂಕಟಲಕ್ಷ್ಮಮ್ಮ ಹಾಜರಿದ್ದರು.



ಚಿತ್ರದುರ್ಗ



– ಭರಮಸಾಗರದ ಡಿ.ವಿ.ಎಸ್. ಆಂಗ್ಲ ಮಾಧ್ಯಮ ಶಾಲೆಯಲ್ಲಿ ದಿನಾಂಕ 8/11/25 ರಂದು 75ನೇ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥಾಪನಾ ದಿನ ಮತ್ತು ಧ್ವಜ ದಿನಾಚರಣೆ ಹಾಗೂ ಕನಕದಾಸ ಜಯಂತಿಯನ್ನು ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಕನಕದಾಸರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು. ನಂತರ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಸಿದ್ದೇಶ್ವರವರು ಕನಕದಾಸರು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆಯ ಬಗ್ಗೆ ತಿಳಿಸಿದರು. ಸಂಸ್ಥಾಪನಾ ದಿನಾಚರಣೆಯ ವಿಶೇಷತೆಯನ್ನು ಗೈಡ್ ಕ್ಯಾಪ್ಟನ್ ಶ್ರೀಮತಿ ಪ್ರತಿಭಾರವರು ತಿಳಿಸಿದರು.

– ದಿನಾಂಕ : 11/11/2025 ರಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹೊಸದುರ್ಗ, ಕಾಲೇಜಿನಲ್ಲಿ ರೋವರ್ಸ್ ಮತ್ತು ರೇಂಜರ್ಸ್ ದಳ ಉದ್ಘಾಟನೆ ಹಾಗೂ ದೀಕ್ಷಾ ಸಮಾರಂಭವನ್ನು ಸಂಘಟಿಸಲಾಯಿತು. ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಅಶ್ವಥ್ ಯಾದವ್‌ರವರ ಅಧ್ಯಕ್ಷತೆಯಲ್ಲಿ ವೇದಿಕೆ ಕಾರ್ಯಕ್ರಮವನ್ನು ನಡೆಸಲಾಯಿತು. ಜಿಲ್ಲಾ ಸಂಸ್ಥೆಯ ಜಿಲ್ಲಾ ಆಯುಕ್ತರು (ಗೈಡ್) ಶ್ರೀಮತಿ ಸವಿತ ಶಿವಕುಮಾರ್ ಎಲ್., ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಕಾಲೇಜಿನ ಪ್ರಾಂಶುಪಾಲರು, ಅಧ್ಯಕ್ಷತೆಯ ನುಡಿಯಲ್ಲಿ ರೋವರ್ಸ್ – ರೇಂಜರ್ಸ್‌ಗಳು ಉತ್ತಮ ಸೇವೆಯನ್ನು ಮಾಡಿ ಕಾಲೇಜಿಗೆ ಕೀರ್ತಿಯನ್ನು ತರುವಂತೆ ಹಾರೈಸಿದರು.



– ದಿನಾಂಕ : 17/11/2025 ರಂದು ಎಸ್.ಪಿ.ಎಸ್.ಆರ್. ಪದವಿಪೂರ್ವ ಕಾಲೇಜು, ಪ್ರೌಢಶಾಲಾ ವಿಭಾಗ, ರಾಂಪುರ ಮೊಳಕಾಲ್ಮೂರು ತಾಲೂಕ್ ಇಲ್ಲಿ ಸ್ಕೌಟ್ ಮಾಸ್ಟರ್ ಮತ್ತು ಗೈಡ್ ಕ್ಯಾಪ್ಟನ್‌ಗಳಿಗೆ ಹಾಗೂ ಮುಖ್ಯೋಪಾಧ್ಯಾಯರಿಗೆ ಒಂದು ದಿನದ ಮಾಹಿತಿ ಶಿಬಿರ ಹಾಗೂ ಘಟಕ ನೊಂದಣಿ ಕಾರ್ಯಾಗಾರವನ್ನು ಸಂಘಟಿಸಲಾಯಿತು. ಈ ಕಾರ್ಯಾಗಾರದ ಉದ್ಘಾಟನೆಯನ್ನು ಶ್ರೀ ಎಂ.ಡಿ. ಮಂಜುನಾಥ್, ಅಧ್ಯಕ್ಷರು ಸ್ಥಳೀಯ ಸಂಸ್ಥೆ ರಾಂಪುರ, ಹಾಗೂ ಡಿ.ಕೆ.ಆರ್. ಗ್ರೂಪ್ ಮಾಲೀಕರು ನೇರವೇರಿಸಿದರು. ಕಾಲೇಜಿನ ಉಪ ಪ್ರಾಂಶುಪಾಲರಾದ ಶ್ರೀ ಕೆ.ಬಿ. ಓಂಕಾರಪ್ಪ, ಶ್ರೀ ಕೆ. ಶ್ರೀಕಾಂತ್ ರೆಡ್ಡಿ, ನಿರ್ದೇಶಕರು ಉಪಸ್ಥಿತರಿದ್ದರು.

– ದಿನಾಂಕ : 22/11/2025 ರಂದು ಜಿಲ್ಲಾ ಸಂಸ್ಥೆ ಚಿತ್ರದುರ್ಗ, ಜಿಲ್ಲಾ ಸ್ಕೌಟ್ ಸಭಾಂಗಣದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳಿಗೆ ದ್ವಿತೀಯ ಸೋಪಾನದಿಂದ ರಾಜ್ಯ ಪುರಸ್ಕಾರದವರೆಗೆ ಬರುವ 15 ಪ್ರವೀಣ್ಯತಾ ಪದಕಗಳ ಬಗ್ಗೆ ಜಿಲ್ಲಾ ಸಂಘಟಕರಾದ ಶ್ರೀ ಮಲ್ಲೇಶಪ್ಪ ಕೆ.ಟಿ. ಅವರು ನೀಡಿದರು.

ದಕ್ಷಿಣ ಕನ್ನಡ

– ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ, ಬಂಟ್ವಾಳ ತಾಲೂಕಿನ ಆರು ಸ್ಥಳೀಯ ಸಂಸ್ಥೆ ಹಾಗೂ ಬಾಲವಿಕಾಸ ಆಂಗ್ಲ ಮಾಧ್ಯಮ ಶಾಲೆ, ಶ್ರೀ ಮಣಿ ಇವರ ಸಹಭಾಗಿತ್ವದಲ್ಲಿ ದಿನಾಂಕ 02.12.2025 ರಂದು ಬಾಲ ವಿಕಾಸ ಆಂಗ್ಲ ಮಾಧ್ಯಮ ಶಾಲೆ, ಮಾಣಿ ಇಲ್ಲಿ ಬಂಟ್ವಾಳ ತಾಲೂಕು ಮಟ್ಟದ ಪ್ರಾರಂಭಿಕ ತರಬೇತಿ ಶಿಬಿರ ಹಾಗೂ ಪುನಶ್ಚೇತನ ಶಿಬಿರ ನಡೆಯಿತು. ಕಾರ್ಯಕ್ರಮವನ್ನು ಮಾಣಿ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಪ್ರಹ್ಲಾದ್ ಶೆಟ್ಟಿ ಇವರು ದೀಪ ಬೆಳಗಿಸಿ ಉದ್ಘಾಟಿಸಿದರು. ವೇದಿಕೆಯಲ್ಲಿ ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಬಿ.ಎಂ. ತುಂಬೆ, ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರತಿಮ್ ಕುಮಾರ್ ಕೆ.ಎಸ್., ಬಾಲ ವಿಕಾಸ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಶ್ರೀ ಮಹೇಶ್ ಶೆಟ್ಟಿ, ಶಿಬಿರ ನಾಯಕರು ಶ್ರೀ ಗುರುಮೂರ್ತಿ ನಾಯ್ಕಾಪು ಎಲ್.ಟಿ. (ಸ್ಕೌಟ್), ವಿದ್ಯಾ ಸಂಸ್ಥೆಯ ಮುಖ್ಯ ಶಿಕ್ಷಕಿ ಶ್ರೀಮತಿ ಸುಪ್ರಿಯಾ ಉಪಸ್ಥಿತರಿದ್ದರು. ಪ್ರಾರಂಭಿಕ ತರಬೇತಿ ಶಿಬಿರದಲ್ಲಿ ಒಟ್ಟು 36 ಮತ್ತು ಪುನಶ್ಚೇತನ ತರಬೇತಿ ಶಿಬಿರದಲ್ಲಿ ಒಟ್ಟು 16, ಒಟ್ಟು 52 ಶಿಕ್ಷಕ/ಶಿಕ್ಷಕಿಯರು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಫ್ಲಾಕ್ ಲೀಡರ್ ಶ್ರೀಮತಿ ಯಶೋಧ ನಿರೂಪಿಸಿದರು.

– ದ.ಕ. ಜಿಲ್ಲಾ ಸಂಸ್ಥೆ, ಮಂಗಳೂರು ಉತ್ತರ ತಾಲೂಕಿನ ಮುಲ್ಕಿ, ಮಂಗಳೂರು ಉತ್ತರ ಹಾಗೂ ಸುರತ್ಕಲ್ ಸ್ಥಳೀಯ ಸಂಸ್ಥೆ ಹಾಗೂ ವಿದ್ಯಾದಾಯಿನಿ ಆಂಗ್ಲ ಮಾಧ್ಯಮ ಶಾಲೆ, ಸುರತ್ಕಲ್ ಇವರ ಸಹಭಾಗಿತ್ವದಲ್ಲಿ ದಿನಾಂಕ 09.12.2025 ರಂದು ವಿದ್ಯಾದಾಯಿನಿ ಆಂಗ್ಲ ಮಾಧ್ಯಮ ಶಾಲೆ, ಸುರತ್ಕಲ್ ಇಲ್ಲಿ ಮಂಗಳೂರು ಉತ್ತರ ತಾಲೂಕು ಮಟ್ಟದ ಪ್ರಾರಂಭಿಕ ತರಬೇತಿ ಶಿಬಿರ ಹಾಗೂ ಪುನಶ್ಚೇತನ ಶಿಬಿರ ನಡೆಯಿತು. ಕಾರ್ಯಕ್ರಮವನ್ನು ಮಂಗಳೂರು ಉತ್ತರ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಶ್ರೀನಿವಾಸ್‌ಕಿಣಿ ದೀಪ ಬೆಳಗಿಸಿ ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿದ್ಯಾದಾಯಿನಿ ಆಂಗ್ಲ ಮಾಧ್ಯಮ ಶಾಲೆಯ ಪ್ರಾಂಶುಪಾಲರಾದ ಡಾ. ಶಶಿಕುಮಾರ್ ವಹಿಸಿದರು. ವೇದಿಕೆಯಲ್ಲಿ ಮಂಗಳೂರು ಉತ್ತರ ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಣಾಧಿಕಾರಿಗಳಾದ ಶ್ರಿ ಭರತ್, ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರತಿಮ್ ಕುಮಾರ್ ಕೆ.ಎಸ್., ವಿದ್ಯಾದಾಯಿನಿ ಕನ್ನಡ ಮಾಧ್ಯಮ ಶಾಲೆಯ ಮುಖ್ಯ ಶಿಕ್ಷಕ ಶ್ರೀ ವಸಂತ್, ಶಿಬಿರ ನಾಯಕ ಶ್ರೀ ಗುರುಮೂರ್ತಿ ನಾಯ್ಕಪು ಉಪಸ್ಥಿತರಿದ್ದರು. ಪ್ರಾರಂಭಿಕ ತರಬೇತಿ ಶಿಬಿರದಲ್ಲಿ ಒಟ್ಟು 34 ಮತ್ತು ಪುನಶ್ಚೇತನ ತರಬೇತಿ ಶಿಬಿರದಲ್ಲಿ 20 ಒಟ್ಟು 54 ಶಿಕ್ಷಕ/ಶಿಕ್ಷಕಿಯರು ಭಾಗವಹಿಸಿದ್ದರು.

– ದ.ಕ. ಜಿಲ್ಲಾ ಸಂಸ್ಥೆ ಹಾಗೂ ಮೂಡಬಿದಿರೆ ಸ್ಥಳೀಯ ಸಂಸ್ಥೆ ಇವರ ಸಹಭಾಗಿತ್ವದಲ್ಲಿ ದಿನಾಂಕ 11.12.2025 ರಂದು ಸ್ಕೌಟ್–ಗೈಡ್ ಕನ್ನಡ ಭವನ ಮೂಡಬಿದಿರೆ ಇಲ್ಲಿ ಮೂಡಬಿದಿರೆ ತಾಲೂಕು ಮಟ್ಟದ ಪ್ರಾರಂಭಿಕ ತರಬೇತಿ ಶಿಬಿರ ಹಾಗೂ ಪುನಶ್ಚೇತನ ಶಿಬಿರ ನಡೆಯಿತು. ಕಾರ್ಯಕ್ರಮವನ್ನು ಮೂಡಬಿದಿರೆ ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀಮತಿ ಪ್ರಫುಲ್ಲ ಇವರು ದೀಪ ಬೆಳಗಿಸಿ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಮೂಡಬಿದಿರೆ ತಾಲೂಕಿನ ಮಾನ್ಯಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ವಿರೂಪಾಕ್ಷಪ್ಪ, ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರತಿಮ್ ಕುಮಾರ್ ಕೆ.ಎಸ್., ಉಪಸ್ಥಿತರಿದ್ದರು. ಪ್ರಾರಂಭಿಕ ತರಬೇತಿ ಶಿಬಿರದಲ್ಲಿ ಒಟ್ಟು 45 ಮತ್ತು ಪುನಶ್ಚೇತನ ತರಬೇತಿ ಶಿಬಿರದಲ್ಲಿ ಒಟ್ಟು 18 ಒಟ್ಟು 63 ಶಿಕ್ಷಕ/ಶಿಕ್ಷಕಿಯರು ಭಾಗವಹಿಸಿದ್ದರು.

– ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ, ಮಂಗಳೂರು ದಕ್ಷಿಣ ತಾಲೂಕಿನ ಉಳ್ಳಾಲ, ಮಂಗಳೂರು ದಕ್ಷಿಣ ಹಾಗೂ ಗುರುಪುರ ಸ್ಥಳೀಯ ಸಂಸ್ಥೆ ಇವರ ಸಹಭಾಗಿತ್ವದಲ್ಲಿ ದಿನಾಂಕ 18.12.2025 ರಂದು ಕ್ಷೇತ್ರ ಸಂಪನ್ಮೂಲ ಕೇಂದ್ರ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಬೋಳಾರ ಮಂಗಳೂರು ಇಲ್ಲಿ ಮಂಗಳೂರು ದಕ್ಷಿಣ ತಾಲೂಕು ಮಟ್ಟದ ಪ್ರಾರಂಭಿಕ ತರಬೇತಿ ಶಿಬಿರ ಹಾಗೂ ಪುನಶ್ಚೇತನ ತರಬೇತಿ ಶಿಬಿರ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಂಗಳೂರು ದಕ್ಷಿಣ ತಾಲೂಕಿನ ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಈಶ್ವರ್‌ರವರು ವಹಿಸಿದ್ದರು. ಕಾರ್ಯಕ್ರಮವನ್ನು

ಶ್ರೀ ಅನಿಲ್ ದಾಸ್, ದಾಸ್ ಪ್ರಮೋಷನ್ಸ್, ಮಂಗಳೂರು ಇವರು ದೀಪ ಬೆಳಗಿಸಿ ಉದ್ಘಾಟಿಸಿದರು. ವೇದಿಕೆಯಲ್ಲಿ ಉಳ್ಳಾಲ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ.ಹೆಚ್. ಮಲಾರ್, ಉಪಸ್ಥಿತರಿದ್ದರು. ಪ್ರಾರಂಭಿಕ ತರಬೇತಿ ಶಿಬಿರದಲ್ಲಿ ಒಟ್ಟು 20 ಮತ್ತು ಪುನಶ್ಚೇತನ ತರಬೇತಿ ಶಿಬಿರದಲ್ಲಿ ಒಟ್ಟು 20, ಒಟ್ಟು 40 ಶಿಕ್ಷಕ/ಶಿಕ್ಷಕಿಯರು ಭಾಗವಹಿಸಿರುತ್ತಾರೆ.

– ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ, ಬೆಳ್ತಂಗಡಿ ತಾಲೂಕಿನ ಬೆಳ್ತಂಗಡಿ ಮತ್ತು ಮಡಂತ್ಯಾರು ಸ್ಥಳೀಯ ಸಂಸ್ಥೆ ಇವರ ಸಹಭಾಗಿತ್ವದಲ್ಲಿ ದಿನಾಂಕ 19.12.2025 ರಂದು ಎಸ್.ಡಿ.ಎಂ. ಆಂಗ್ಲ ಮಾಧ್ಯಮ ಶಾಲೆ, ಬೆಳ್ತಂಗಡಿ ಇಲ್ಲಿ ಬೆಳ್ತಂಗಡಿ ತಾಲೂಕು ಮಟ್ಟದ ಪ್ರಾರಂಭಿಕ ತರಬೇತಿ ಶಿಬಿರ ಹಾಗೂ ಪುನಶ್ಚೇತನ ತರಬೇತಿ ಶಿಬಿರ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬೆಳ್ತಂಗಡಿ ತಾಲೂಕಿನ ಮಾನ್ಯ ದೈಹಿಕ ಶಿಕ್ಷಣ ಪರಿವೀಕ್ಷಣಾಧಿಕಾರಿಗಳಾದ ಶ್ರೀಮತಿ ಸುಜಯ ವಿ ವಹಿಸಿದ್ದರು. ಕಾರ್ಯಕ್ರಮವನ್ನು ಎಸ್.ಡಿ.ಎಂ. ಆಂಗ್ಲ ಮಾಧ್ಯಮ ಶಾಲೆ, ಬೆಳ್ತಂಗಡಿಯ ಮುಖ್ಯ ಶಿಕ್ಷಕಿ ಶ್ರೀಮತಿ ಹೇಮಲತಾ ಇವರು ದೀಪ ಬೆಳಗಿಸಿ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಬೆಳ್ತಂಗಡಿ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಪದ್ಮಕುಮಾರ್, ಶ್ರೀ ಗುರುಮೂರ್ತಿ ನಾಯ್ಕಾಪು, ಎಲ್‌ಟಿ(ಸ್ಕೌ), ಉಪಸ್ಥಿತರಿದ್ದರು. ಪ್ರಾರಂಭಿಕ ತರಬೇತಿ ಶಿಬಿರದಲ್ಲಿ ಒಟ್ಟು 31 ಮತ್ತು ಪುನಶ್ಚೇತನ ತರಬೇತಿ ಶಿಬಿರದಲ್ಲಿ 10 ಒಟ್ಟು 41 ಶಿಕ್ಷಕ/ಶಿಕ್ಷಕಿಯರು ಭಾಗವಹಿಸಿರುತ್ತಾರೆ. ಸ್ವಯಂ ಸೇವಕರಾಗಿ ವಾಣಿ ಪದವಿ ಪೂರ್ವಕಾಲೇಜು, ಬೆಳ್ತಂಗಡಿ



ಇಲ್ಲಿನ ರೋವರ್ಸ್–ರೇಂಜರ್ಸ್ ವಿದ್ಯಾರ್ಥಿಗಳು ಸಹಕರಿಸಿದರು.

– ದಿನಾಂಕ 20.12.2025 ರಂದು ಉಳ್ಳಾಲ ಬೀಚ್‌ನಲ್ಲಿ ಇ.ಎಮ್.ಆರ್.ಐ. ಸಂಸ್ಥೆಯಿಂದ ಪರಿಸರ ಶಿಕ್ಷಣ ಕಾರ್ಯಕ್ರಮ ಹಾಗೂ ಸ್ವಚ್ಛತಾ ಕಾರ್ಯಕ್ರಮವು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಉಳ್ಳಾಲ ಸ್ಥಳೀಯ ಸಂಸ್ಥೆಯ ಸಹಭಾಗಿತ್ವದಲ್ಲಿ ಯಶಸ್ವಿಯಾಗಿ ನಡೆಯಿತು. ಕಾರ್ಯಕ್ರಮವನ್ನು ಉಳ್ಳಾಲ ನಗರ ಸಭೆಯ ಆಯುಕ್ತರಾದ ಶ್ರೀ ಸಂತೋಷ್‌ರವರು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಇ.ಎಮ್.ಆರ್.ಐ. ಸಂಸ್ಥೆಯ ಕೋ–ಆರ್ಡಿನೇಟರ್ ಆಗಿರುವ ಶ್ರೀ ದರ್ಶನ್‌ರವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಉಳ್ಳಾಲ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ.ಹೆಚ್ ಮಲಾರ್, ಉಪಾಧ್ಯಕ್ಷರಾದ ಶ್ರೀ ಜಗದೀಶ್ ಶೆಟ್ಟಿ, ಇ.ಎಮ್.ಆರ್.ಐ. ಸಂಸ್ಥೆಯ ಕೋ–ಆರ್ಡಿನೇಟರ್ ಶ್ರೀ ಚೇತನ್, ಉಪಸ್ಥಿತರಿದ್ದರು. ಉಳ್ಳಾಲ ಸ್ಥಳೀಯ ಸಂಸ್ಥೆಯ ವಿವಿಧ ಶಾಲೆಗಳಿಂದ ಸುಮಾರು 200 ಸ್ಕೌಟ್–ಗೈಡ್ ವಿದ್ಯಾರ್ಥಿಗಳು ಹಾಗೂ 18 ಶಿಕ್ಷಕರು ಭಾಗವಹಿಸಿದ್ದರು. ಶ್ರೀ ತ್ಯಾಗಂ ಹರೇಕಳ ಸ್ವಾಗತಿಸಿದರು. ಕಾರ್ಯಕ್ರಮವನ್ನು ಜಿಲ್ಲಾ ಜಂಟಿ ಕಾರ್ಯದರ್ಶಿ ಶ್ರೀಮತಿ



ಜಯವಂತಿ ಸೋನ್ಸ್ ನಿರೂಪಿಸಿದರು.

– ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆ ಹಾಗೂ ಮಾಣಿ ಸ್ಥಳೀಯ ಸಂಸ್ಥೆ, ಬಾಲ ವಿಕಾಸ ಆಂಗ್ಲ ಮಾಧ್ಯಮ ಶಾಲೆ, ಮಾಣಿ ಇವರ ಸಹಭಾಗಿತ್ವದಲ್ಲಿ ಜಿಲ್ಲಾ ಮಟ್ಟದ ಪ್ರತಿಭಾ ಕಲೋತ್ಸವ ದಿನಾಂಕ 23.12.2025 ರಂದು ಬಾಲವಿಕಾಸ ಆಡಿಟೋರಿಯಂನಲ್ಲಿ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾಣಿ ಸ್ಥಳೀಯ ಸಂಸ್ಥೆಯ ಅಧ್ಯಕ್ಷ ಹಾಗೂ ಬಾಲವಿಕಾಸ ಟ್ರಸ್ಟ್‌ನ ಅಧ್ಯಕ್ಷ ಶ್ರೀ ಪ್ರಹ್ಲಾದ್ ಶೆಟ್ಟಿ ವಹಿಸಿದ್ದರು. ಜಿಲ್ಲಾ ದೈಹಿಕ ಪರಿವೀಕ್ಷಣಾಧಿಕಾರಿ ಶ್ರೀ ಭುವನೇಶ್ ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಬಂಟ್ವಾಳ ತಾಲೂಕಿನ ಪ್ರಭಾರ ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀಮತಿ ಮಾಲತಿ ಕೆ, ಪ್ರತಿಭಾ ಕಲೋತ್ಸವ ಸಮಿತಿ–2025ರ ಸಂಚಾಲಕ ಬದಿಗುಡ್ಡೆ ಶ್ರೀ ಜಗನ್ನಾತ ಚೌಟ, ಮಾಣಿ ಗ್ರಾಮ ಪಂಚಾಯತ್ ಅಧ್ಯಕ್ಷ ಶ್ರೀ ಸುದೀಪ್ ಕುಮಾರ್ ಶೆಟ್ಟಿ ಹಾಗೂ ಕರ್ನಾಟಕ ಆಂಗ್ಲ ಮಾಧ್ಯಮ ಶಾಲೆಯ ಅಧ್ಯಕ್ಷ ಶ್ರೀ ಕಿರಣ್ ಕುಮಾರ್ ಆಗಮಿಸಿದ್ದರು. ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಶ್ಯಾಮಲ ಸ್ವಾಗತಿಸಿ, ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರತಿಮ್ ಕುಮಾರ್ ಕೆ.ಎಸ್ ವಂದಿಸಿದರು. ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀ ಭರತ್‌ರಾಜ್ ಕೆ. ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಮಾಣಿ ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಬಾಲಕೃಷ್ಣ ಆಳ್ವ ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ವೇದಿಕೆಯಲ್ಲಿ ಜಿಲ್ಲಾ ಪದಾಧಿಕಾರಿಗಳು, ಬಾಲವಿಕಾಸ ಟ್ರಸ್ಟ್, ಕಾರ್ಯದರ್ಶಿ ಶ್ರೀ ಮಹೇಶ್ ಶೆಟ್ಟಿ ಜೆ, ಬಾಲ ವಿಕಾಸ ಆಂಗ್ಲ ಮಾಧ್ಯಮ ಶಾಲೆಯ ಮುಖ್ಯ ಶಿಕ್ಷಕಿ ಶ್ರೀಮತಿ ಸುಪ್ರೀಯ ದೇವರ ಮಜಲು, ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಅನಿರೀಕ್ಷಿತ ಭೇಟಿ ನೀಡಿ ಶುಭ ಹಾರೈಸಿದರು.

– ದಿನಾಂಕ 07.01.2026 ರಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ದ.ಕಜಿಲ್ಲಾ ಮಟ್ಟದ ಕ್ರೀಡೋತ್ಸವ ಸ್ಪರ್ಧೆಯು ಮೂಡಬಿದಿರೆಯ ಸ್ವರಾಜ್ಯ ಮೈದಾನದಲ್ಲಿ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಬಿ.ಎಂ. ತುಂಬೆ ವಹಿಸಿದ್ದರು. ಜಿಲ್ಲಾ ಸ್ಕೌಟ್ ತರಬೇತಿ ಆಯುಕ್ತರಾದ ಶ್ರೀ ಶಾಂತರಾಮ ಪ್ರಭು ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿದರು. ಮುಖ್ಯ ಅತಿಥಿಯಾಗಿ ಆಳ್ವಾಸ್ ದೈಹಿಕ ಶಿಕ್ಷಣ ಮಹಾ ವಿದ್ಯಾಲಯದ ಪ್ರಾಂಶುಪಾಲರಾದ ಶ್ರೀ ಮಧು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಡಾ. ಎಂ. ಮೋಹನ್ ಆಳ್ವರವರು ಭೇಟಿ ನೀಡಿ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು. ಜಿಲ್ಲೆಯ ವಿವಿಧ ಸ್ಥಳೀಯ ಸಂಸ್ಥೆಯಿಂದ 42 ಕಬ್ಸ್, 42 ಬುಲ್‌ಬುಲ್ಸ್, 598 ಸ್ಕೌಟ್ಸ್, 436 ಗೈಡ್ಸ್, 171 ರೋವರ್ಸ್, 204 ರೇಂಜರ್ಸ್, 100 ದಳ ನಾಯಕರುಗಳು ಒಟು 1593 ಮಂದಿ ಭಾಗವಹಿಸಿದರು. ರಾಜ್ಯ ಸಹಾಯಕ ಸಂಘಟನಾ ಆಯುಕ್ತರಾದ ಶ್ರೀ ಭರತ್‌ರಾಜ್ ಕೆ. ಸ್ಪರ್ಧೆಯನ್ನು ಸಂಘಟಿಸಿದರು.

ದಾವಣಗೆರೆ



– ದಿನಾಂಕ 11–11–2025 ರಂದು ಹೊನ್ನಾಳಿಯ ತುಂಗಾಭದ್ರಾ ನದಿ ತೀರದ ಬಾಲರಾಜ್ ಘಾಟ್ ನಲ್ಲಿ ದಾವಣಗೆರೆ ಜಿಲ್ಲಾಡಳಿತ ಮತ್ತು ಎನ್.ಡಿ.ಆರ್.ಎಫ್. ಮತ್ತು ಎಸ್.ಡಿ.ಆರ್.ಎಫ್. ಇವರ ನೇತೃತ್ವದಲ್ಲಿ ಆಯೋಜಿಸಲಾಗಿದ್ದ ವಿಪತ್ತು ನಿರ್ವಹಣಾ ಅಣುಕು ಪ್ರದರ್ಶನದಲ್ಲಿ ಶ್ರೀ ನವೀನ್ ರಾಜ್, ಜಿಲ್ಲಾ ಸಹಾಯಕ ಆಯುಕ್ತರು ಮತ್ತು ಹೊನ್ನಾಳಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ 17 ರೋವರ್ಸ್ ಮತ್ತು ರೇಂಜರ್ಸ್‌ಗಳು ಭಾಗವಹಿಸಿದ್ದರು.

– ದಿನಾಂಕ 26–11–2025 ರಂದು ಸಂವಿಧಾನ ದಿನಾಚರಣೆಯ ಅಂಗವಾಗಿ ಜಿಲ್ಲಾಡಳಿತದ ವತಿಯಿಂದ ಡಾ ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಆಯೋಜಿಸಿದ್ದ ಪಥಸಂಚಲನದಲ್ಲಿ ಸೆಂಟ್ ಪಾಲ್ಸ್ ಕಾನ್ವೆಂಟ್ ಶಾಲೆಯ ಗೈಡ್ಸ್‌ಗಳು ಭಾಗವಹಿಸಿದ್ದರು.

– ದಿನಾಂಕ 27–11–2025 ರಂದು ಹೊನ್ನಾಳಿ ಸ್ಥಳೀಯ ಸಂಸ್ಥೆಯಲ್ಲಿ "ಗೀತಗಾಯನ" ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಶ್ರೀ ಹೆಚ್. ಆಂಜನೇಯ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು. ಕ್ಷೇತ್ರ ಸಮನ್ವಯಾಧಿಕಾರಿಗಳಾದ ಶ್ರೀ ಮಲ್ಲೇಶ್‌ರವರು ಭಾಗವಹಿಸಿದ್ದರು.



– ದಿನಾಂಕ 29–11–2025 ರಂದು ದಾವಣಗೆರೆ ಉತ್ತರ ಸ್ಥಳೀಯ ಸಂಸ್ಥೆಯಲ್ಲಿ "ಗೀತಗಾಯನ" ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಸ್ಥಳೀಯ ಸಂಸ್ಥೆ ಅಧ್ಯಕ್ಷರಾದ ಶ್ರೀ ಪ್ರಕಾಶ್ ರವರು ಉದ್ಘಾಟಿಸಿದರು. ಶ್ರೀ ಸುರೇಶ್ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು.

– ದಿನಾಂಕ 03–12–2025 ರಂದು ಧ.ರಾ.ಮ ಸ್ಕೌಟ್ ಭವನದಲ್ಲಿ ಜಿಲ್ಲಾ ಮಟ್ಟದ ಗೀತಗಾಯನ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಮುರುಘರಾಜೇಂದ್ರ ಜೆ.ಚಿಗಟೇರಿ ನೆರವೇರಿಸಿದರು. ಈ ಸಂದರ್ಭದಲ್ಲಿ ಶ್ರೀ ನಿಂಗಪ್ಪ ಜಿಲ್ಲಾ ಸ್ಥಾನಿಕ ಆಯುಕ್ತರು, ಶ್ರೀ ಎ.ಪಿ.ಷಡಾಕ್ಷರಪ್ಪ ಜಿಲ್ಲಾ ಸ್ಕೌಟ್ ಆಯುಕ್ತರು, ಶ್ರೀ ಕೊಟ್ರೇಶ್ ಎನ್.ಕೆ., ಜಿಲ್ಲಾ ಸಹಾಯಕ ಆಯುಕ್ತರು ಉಪಸ್ಥಿತರಿದ್ದರು. ತೀರ್ಪುಗಾರರಾಗಿ ಸಂಗೀತ ಶಿಕ್ಷಕರಾದ ಶ್ರೀ ಅಶೋಕ್ ಪತ್ತರ್, ಶ್ರೀಮತಿ ರುದ್ರಾಕ್ಷಿ, ಶ್ರೀಮತಿ ಉಮಾದೇವಿ ಭಾಗವಹಿಸಿದ್ದರು.

– ದಿನಾಂಕ 04–12–2025 ರಿಂದ 06–12–2025 ರವರೆಗೆ ಜಿಲ್ಲಾ ಮಟ್ಟದ ನಿಪುಣ್ ರೋವರ್ ರೇಂಜರ್ ಪರೀಕ್ಷಾ ಶಿಬಿರವನ್ನು ಕೊಂಡಜ್ಜಿ ಬಸಪ್ಪ ಸ್ಕೌಟ್ ಗೈಡ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರದಲ್ಲಿ ಆಯೋಜಿಸಲಾಗಿತ್ತು. ಶಿಬಿರದಲ್ಲಿ ರೋವರ್ ವಿಭಾಗ ನಾಯಕರಾಗಿ ಶ್ರೀ ನವೀನ್, ರೋವರ್ ಸ್ಕೌಟ್ ಲೀಡರ್ ಮತ್ತು ರೇಂಜರ್ ವಿಭಾಗದ ನಾಯಕರಾಗಿ ಕುಮಾರಿ ರಾಧಿಕಾ, ರೇಂಜರ್ ಲೀಡರ್ ಇವರು ಕಾರ್ಯನಿರ್ವಹಿಸಿದರು. ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಶಿಬಿರದ ನೇತೃತ್ವವಹಿಸಿದ್ದರು. ಶಿಬಿರಕ್ಕೆ ಶ್ರೀಮತಿ ಶಾರದಾ ಮಾಗನಹಳ್ಳಿ, ಜಿಲ್ಲಾ ಗೈಡ್ ಆಯುಕ್ತರು, ಶ್ರೀ ಎಸ್. ನಿಂಗಪ್ಪ, ಜಿಲ್ಲಾ ಸ್ಥಾನಿಕ ಆಯುಕ್ತರು, ಶ್ರೀ ಎನ್.ಕೆ. ಕೊಟ್ರೇಶ್, ಜಿಲ್ಲಾ ಸಹಾಯಕ ಆಯುಕ್ತರು ಭೇಟಿ ನೀಡಿ ರೋವರ್ಸ್ ರೇಂಜರ್ಸ್‌ಗಳನ್ನು ಪ್ರೋತ್ಸಾಹಿಸಿದರು. ಶಿಬಿರದಲ್ಲಿ 95 ರೋವರ್ಸ್ ರೇಂಜರ್ಸ್‌ಗಳು ಭಾಗವಹಿಸಿದ್ದರು.

– ದಿನಾಂಕ 06–12–2025 ರಿಂದ 07–12–2025 ರವರೆಗೆ ಜಿಲ್ಲಾ ಪುರಸ್ಕಾರ ಪರೀಕ್ಷಾ ಶಿಬಿರವನ್ನು ಕೊಂಡಜ್ಜಿ ಬಸಪ್ಪ ಸ್ಕೌಟ್ ಗೈಡ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರದಲ್ಲಿ ಆಯೋಜಿಸಲಾಗಿತ್ತು. ಶಿಬಿರದಲ್ಲಿ ಸ್ಕೌಟ್ ವಿಭಾಗದ ನಾಯಕರಾಗಿ ಶ್ರೀ ಸುರೇಶ್, ಗೈಡ್ ವಿಭಾಗದ ನಾಯಕರಾಗಿ ಶ್ರೀಮತಿ ರತ್ನ ಎಂ. ಕಾರ್ಯನಿರ್ವಹಿಸಿದರು. ಶ್ರೀ ಸಿ.ಆರ್. ಮರುಳಪ್ಪ ಪರೀಕ್ಷಾ ವಿಭಾಗದ ಕೋ ಆರ್ಡಿನೇಟರ್ ಆಗಿ ಕಾರ್ಯನಿರ್ವಹಿಸಿದರು. ಶಿಬಿರಕ್ಕೆ ಶ್ರೀಮತಿ ಶಾರದ ಮಾಗನಹಳ್ಳಿ ಜಿಲ್ಲಾ ಗೈಡ್ ಆಯುಕ್ತರು, ಶ್ರೀ ಎ. ಶಿವಪ್ಪ, ಜಿಲ್ಲಾ ಸ್ಥಾನಿಕ ಆಯುಕ್ತರು, ಶ್ರೀ ಎನ್.ಕೆ. ಕೊಟ್ರೇಶ್, ಜಿಲ್ಲಾ ಸಹಾಯಕ ಆಯುಕ್ತರು ಭೇಟಿ ನೀಡಿದರು. ಭಾಗವಹಿಸಿದ್ದರು. ವಿಶೇಷವಾಗಿ ರಾಜ್ಯ ಸಂಸ್ಥೆ ಉಪಾಧ್ಯಕ್ಷರಾದ ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ ಶಿಬಿರಕ್ಕೆ ಭೇಟಿ ನೀಡಿ ಮಕ್ಕಳನ್ನು ಪ್ರೋತ್ಸಾಹಿಸಿ ಶಿಬಿರದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಶಿಬಿರದಲ್ಲಿ ಒಟ್ಟು 513 ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಭಾಗವಹಿಸಿದ್ದರು. ಶಿಬಿರದ ನೇತೃತ್ವವನ್ನು ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ ವಹಿಸಿದ್ದರು.

– ದಿನಾಂಕ 20–12–2025 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಶ್ರೀ ತರಳಬಾಳು ಜಗದ್ಗುರು ವಸತಿಯುತ ಶಾಲೆಯಲ್ಲಿ ಹಸ್ತಿನಪುರ ಯೋಗ ಫೌಂಡೇಶನ್ ವತಿಯಿಂದ ಸ್ಕೌಟ್–ಗೈಡ್ ಮಕ್ಕಳಿಗೆ ಯೋಗದ ಮಹತ್ವವನ್ನು ತಿಳಿಸಿ ತರಬೇತಿ ನೀಡಲಾಯಿತು. ಈ ಸಂದರ್ಭದಲ್ಲಿ ಶಾಲೆಯ ನಿರ್ದೇಶಕರಾದ ಶ್ರೀ ಸೋಮಶೇಖರಪ್ಪ ಹಸ್ತಿನಾಪುರ ಟ್ರಸ್ಟಿ ಶ್ರೀ ಯುಧಿಷ್ಠಿರ, ಯೋಗ ತರಬೇತುದಾರರಾದ ಶ್ರೀ ಅಜ್ಜಪ್ಪ ಜೆ.ಎಸ್. ಹಾಗೂ ಶ್ರೀ ಎನ್.ಕೆ. ಕೊಟ್ರೇಶ್, ಜಿಲ್ಲಾ ಸಹಾಯಕ ಆಯುಕ್ತರು (ಸ್ಕೌ), ಶ್ರೀಮತಿ ಅನಿತಾ, ಶ್ರೀಮತಿ ಸುಜಾತ, ಗೈಡ್ ಕ್ಯಾಪ್ಟನ್ಸ್‌ಗಳು ಉಪಸ್ಥಿತರಿದ್ದರು.

– ದಿನಾಂಕ 20–12–2025 ರಂದು ಸೆಂಟ್ ಪಾಲ್ಸ್ ಶಾಲೆಯ ಗೈಡ್ಸ್‌ಗಳು ಅವರಾವತಿಯಲ್ಲಿರುವ ಮದರ್ ತೆರೆಸಾ ವೃದ್ಧಾಶ್ರಮಕ್ಕೆ ಭೇಟಿ ನೀಡಿ ಅವರ ಯೋಗಕ್ಷೇಮವನ್ನು ವಿಚಾರಿಸಿ, ಕ್ರಿಸ್ಮಸ್ ಹಬ್ಬದ ಆಚರಣೆಯನ್ನು ಅವರ ಜೊತೆಗೆ ಹಂಚಿಕೊಂಡರು. ಈ ಸಂದರ್ಭದಲ್ಲಿ ಶಾಲಾ ಮುಖ್ಯೋಪಾಧ್ಯಾಯರಾದ ಸಿಸ್ಟರ್ ವೆನಿಜಾ ಹಾಗೂ ಗೈಡ್ ಕ್ಯಾಪ್ಟನ್ ಶ್ರೀಮತಿ ಸುಸಿ ಮೇರಿ, ಶ್ರೀ ಕಿರಣ್ ಕುಮಾರ್ ಮತ್ತು ಶ್ರೀ ಭಾಗ್ಯನಾಥನ್‌ರವರು ಉಪಸ್ಥಿತರಿದ್ದರು.

– ದಿನಾಂಕ 22–12–2025 ರಂದು ಧ.ರಾ.ಮ ಸ್ಕೌಟ್ ಭವನದಲ್ಲಿ ದಿವಂಗತ ಡಾ.ಶಾಮನೂರು ಶಿವಶಂಕರಪ್ಪನವರಿಗೆ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಶ್ರೀ ಮುರುಘ ರಾಜೇಂದ್ರ ಜೆ. ಚಿಗಟೇರಿ ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಎ.ಪಿ.ಷಡಾಕ್ಷರಪ್ಪ ಜಿಲ್ಲಾ ಸ್ಕೌಟ್ ಆಯುಕ್ತರು ಪದಾಧಿಕಾರಿಗಳು ಸ್ಕೌಟರ್ಸ್–ಗೈಡರ್ಸ್‌ಗಳು, ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಉಪಸ್ಥಿತರಿದ್ದರು.

ಧಾರವಾಡ



– ದಿನಾಂಕ 29–11–2025 ರಂದು ಜಿಲ್ಲಾ ಸಂಸ್ಥೆಯ ಆವರಣದಲ್ಲಿ ಖಾಸಗಿ ಶಾಲೆಗಳ ಶಿಕ್ಷಕ/ಕಿಯರಿಗೆ ಒಂದು ದಿನದ ಪ್ರಾರಂಭಿಕ ಶಿಬಿರವನ್ನು ಮಾನ್ಯ ಶ್ರೀ ಎಸ್.ಎಸ್. ಕೆಳದಿಮಠ, ಉಪ ನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಲಾಯಿತು. ಉದ್ಘಾಟಕರಾಗಿ ಶ್ರೀ ಅಶೋಕ ಸಿಂದಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಧಾರವಾಡ ಶಹರ, ಮುಖ್ಯ ಅತಿಥಿಗಳಾಗಿ ಶ್ರೀ ಶ್ರೀಶೈಲ ಕರೀಕಟ್ಟಿ ಜಿಲ್ಲಾ ಮುಖ್ಯ ಆಯುಕ್ತರು ಭಾಗವಹಿಸಿದ್ದರು. ಸದರಿ ಶಿಬಿರದಲ್ಲಿ 75 ಜನ ಶಿಕ್ಷಕ/ಕಿಯರು ಭಾಗವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಸಿ.ಎಂ. ಕೆಂಗಾರ, ಶ್ರೀ ಜೆ.ಆರ್. ಜವಳಿ, ಶ್ರೀ ಎಸ್.ಐ. ನೇಕಾರ, ಶ್ರೀ ಎಸ್.ಎಸ್. ಹುಸೇನಿ, ಶ್ರೀ ಸಿ.ಸಿ. ಬೆಣ್ಣಿ, ಶ್ರೀ ಕೆ.ಜಿ. ಗುಡಿಮನಿ ಸೇವೆ ಸಲ್ಲಿಸಿದರು.



– ದಿನಾಂಕ 01–12–2025 ರಿಂದ 03–12–2025ರ ವರೆಗೆ ಜಿಲ್ಲಾ ಸಂಸ್ಥೆಯ ಆವರಣದಲ್ಲಿ ಕಬ್ಸ್ ಮತ್ತು ಬುಲ್‌ಬುಲ್ಸ್‌ಗಳ ಚತುರ್ಥ ಚರಣ್ ಮತ್ತು ಹೀರಕ್ ಪಂಖ್ ಪರೀಕ್ಷಾ ಶಿಬಿರವನ್ನು ಹಮ್ಮಿಕೊಳ್ಳಲಾಯಿತು. ಸದರಿ ಪರೀಕ್ಷಾ ಶಿಬಿರದಲ್ಲಿ 123 ಕಬ್ಸ್ 96 ಬುಲ್‌ಬುಲ್ಸ್ 10 ದಳನಾಯಕರು ಭಾಗವಹಿಸಿದ್ದರು. ಕಬ್ ವಿಭಾಗದ ಪರೀಕ್ಷಕರಾಗಿ ಶ್ರೀ ಎಸ್.ಎಸ್. ಹುಸೇನಿ, ಎಎಲ್‌ಟಿ (ಕಬ್) ಮತ್ತು ಬುಲ್‌ಬುಲ್ಸ್ ವಿಭಾಗದ ಪರೀಕ್ಷಕರಾಗಿ ಶ್ರೀಮತಿ ಜೆ.ಎಸ್. ಯಾವಗಲ್ ಭಾಗವಹಿಸಿದರು. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಶ್ರೀಶೈಲ ಚ. ಕರೀಕಟ್ಟಿ, ಇತರ ಜಿಲ್ಲಾ ಪದಾಧಿಕಾರಿಗಳು ಹಾಜರಿದ್ದರು.

ಹಾವೇರಿ

– ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಶ್ರೀ ವಿಜಯ ಮಹಾಂತೇಶ್ ಶಾನಮ್ಮನವರ್. ಅಧ್ಯಕ್ಷರು, ಜಿಲ್ಲಾ ಸಂಸ್ಥೆ ಹಾವೇರಿ ಹಾಗೂ ಜಿಲ್ಲಾಧಿಕಾರಿಗಳು ಹಾವೇರಿ ಇವರಿಂದ ಭಾರತ್ ಸ್ಕೌಟ್–ಗೈಡ್ ಸಂಸ್ಥೆಯ 75ನೇ ವರ್ಷದ ಸಂಸ್ಥಾಪನಾ ದಿನಾಚರಣೆ ಹಾಗೂ ಧ್ವಜ ಚೀಟಿ ಬಿಡುಗಡೆ ಕಾರ್ಯಕ್ರಮ ನಡೆಯಿತು ಕಾರ್ಯಕ್ರಮದಲ್ಲಿ ಜಿಲ್ಲಾ ಮುಖ್ಯ ಆಯುಕ್ತರು ಹಾಗೂ ಉಪನಿರ್ದೇಶಕರಾದ ಶ್ರೀ ಮೋಹನ್ ದಂಡಿನ್‌ರವರು ಹಾಗೂ ಬೆಳಗಾವಿ ವಿಭಾಗ ಆಯುಕ್ತರು ಶ್ರೀಮತಿ ಮಾಧುರಿ ದೇವಧರ್ ಕಾರ್ಯಕಾರಿ ಸಮಿತಿ ಸದಸ್ಯರುಗಳು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ಧ್ವಜ ಚೀಟಿಯನ್ನು ಖರೀದಿಸಿ ಸಂಸ್ಥೆಗೆ ದೇಣಿಗೆಯನ್ನು ನೀಡಿದರು.



– ಜಿಲ್ಲಾ ಸಂಸ್ಥೆ ಹಾವೇರಿ ವತಿಯಿಂದ ಹಾವೇರಿ ಜಿಲ್ಲೆಯ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರುಗಳಿಗೆ ಒಂದು ದಿನದ ಪ್ರಾರಂಭಿಕ ಶಿಬಿರ ಹಾಗೂ ಪುನಶ್ಚೇತನ ಕಾರ್ಯಗಾರವನ್ನು ಜಿಲ್ಲಾ ಗುರು ಭವನ ಹಾವೇರಿ ಇಲ್ಲಿ ಆಯೋಜಿಸಲಾಯಿತು. ಇದರಲ್ಲಿ 32 ರೋವರ್ ಸ್ಕೌಟ್ ಲೀಡರ್ 16 ರೇಂಜರ್ ಲೀಡರ್‌ರವರು ಒಟ್ಟು 48 ಜನ ಭಾಗವಹಿಸಿದರು. ಶಿಬಿರದ ನಾಯಕರಾಗಿ ಶ್ರೀ ಪಿ.ಜಿ. ಆರಾಧ್ಯಮಠ, ಲೀಡರ್ ಟ್ರೈನರ್. ಶ್ರೀ ಎಂ.ಆರ್. ಪಾಟೀಲ್, ಡಿಟಿಸಿ. ಶ್ರೀಮತಿ ಅನ್ನಪೂರ್ಣ ಕಟಿಗಿ ಡಿ.ಓ.ಟಿ. ಶ್ರೀ ಪರಮೇಶ ಚಿಕ್ಕಳ್ಳಿ, ಜಿಲ್ಲಾ ಕಾರ್ಯದರ್ಶಿ, ಶ್ರೀ ಎ.ಪಿ. ಮೊಸಿನ್, ಎ.ಎಲ್.ಟಿ. ಶ್ರೀ ಡಿ.ಎಸ್. ವಕಣ್ಣನವರ್, ಶ್ರೀಮತಿ ಶೋಭಾ ಪಾಟೀಲ್ ಡಿ.ಟಿ.ಸಿ. ಭಾಗವಹಿಸಿದ್ದರು.



ಕಾರವಾರ (ಉ.ಕ.)

– ದಿನಾಂಕ 30/11/25 ರಂದು ಕುಮಟಾ ತಾಲ್ಲೂಕಿನ ಗೋಕರ್ಣ ಮುಖ್ಯ ಬೀಚ್‌ನಲ್ಲಿ ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ, ಕರ್ನಾಟಕ, ವನಲೋಕ, ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ಸ್ಥಳೀಯ ಸಂಘ ಸಂಸ್ಥೆಗಳಿಂದ ಕಡಲತೀರ ಸ್ವಚ್ಛತಾ ಅಭಿಯಾನವು ನಡೆಯಿತು. ಸ್ವಚ್ಛತೆ ಕೈಗೊಳ್ಳುವ ಬಗ್ಗೆ ಬ್ಯಾನರ್‌ಗಳೊಂದಿಗೆ ಪಥಸಂಚಲನವನ್ನು ಮುಖ್ಯ ಬೀಚ್ ವರೆಗೆ ಕೈಗೊಂಡು ಸಭಾ ಕಾರ್ಯಕ್ರಮವನ್ನು ಕೈಗೊಂಡು, ಬಂದಂತಹ ಮಕ್ಕಳಿಗೆ ಹಾಗೂ ಬೀಚ್‌ನಲ್ಲಿ ಇರುವ ಜನರುಗಳಿಗೆ ಸ್ವಚ್ಛತೆ ಬಗ್ಗೆ ಪ್ರಾಧ್ಯಾಪಕರು ಪ್ರವಚನವನ್ನು ನೀಡಿದರು. ತದ ನಂತರ ಗೋಕರ್ಣ ಬೀಚ್‌ನ್ನು ಸ್ವಚ್ಛಗೊಳಿಸಲಾಯಿತು. ರೋವರ್ಸ್–ರೇಂಜರ್ಸ್‌ಗಳು ವಸ್ತುಗಳಿಂದ ಮಾಡಿಕೊಂಡು ಬಂದಂತಹ ವಸ್ತುಗಳಿಗೆ ಬಹುಮಾನವನ್ನು ನೀಡಲಾಯಿತು. ಸ್ಥಳೀಯ ಸಂಘ–ಸಂಸ್ಥೆಯ ಪದಾಧಿಕಾರಿಗಳು 120 ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್ ಹಾಗೂ ದಳ ನಾಯಕ ನಾಯಕಿಯರು ಭಾಗವಹಿಸಿದ್ದರು. ವನಲೋಕದ ಡಾ. ರೂಪಾ, ಎ.ಎಸ್.ಒ.ಸಿ ಭಾರತಿ ಡಾಯಸ್ ಹಾಗೂ ಸ್ಥಳೀಯ ಗ್ರಾಮ ಪಂಚಾಯತಿಯವರು ಈ ಕಾರ್ಯಕ್ರಮವನ್ನು ಸಂಘಟಿಸಿದರು.



– ದಿನಾಂಕ: 14.12.2025 ರಂದು ಚತುರ್ಥ ಚರಣ್ ಕಬ್ ಮತ್ತು ಹೀರಕ್ ಪಂಕ್ ಬುಲ್‌ಬುಲ್‌ಗಳ ಪರೀಕ್ಷಾ ಶಿಬಿರವನ್ನು ಜಿಲ್ಲಾ ಮಟ್ಟದಲ್ಲಿ ಕುಮಟಾ ಸ್ಥಳೀಯ ಸಂಸ್ಥೆಯ ಸಹಯೋಗದೊಂದಿಗೆ ಕುಮಟಾ ಡಯಟ್‌ನಲ್ಲಿ ನಡೆಸಯಿತು. ಪರೀಕ್ಷಾ ಶಿಬಿರದ ನಾಯಕರಾಗಿ ಕಬ್ ವಿಭಾಗಕ್ಕೆ ಮಂಜುನಾಥಗೌಡ, ಬುಲ್‌ಬುಲ್ ವಿಭಾಗಕ್ಕೆ ಶ್ರೀಮತಿ ಶಾರದಾ ಹೆಗಡೆರವರು ಕಾರ್ಯನಿರ್ವಹಿಸಿದರು.

– ದಿ. 14.12.2025 ರಂದು ಕರ್ನಾಟಕ ಅಕ್ಷರ ಟ್ರಸ್ಟ್ ಮಹಿಮೆ, ಹೊನ್ನಾವರ ತಾಲ್ಲೂಕಿನಲ್ಲಿ ಶ್ರೀ ಮಹಿಷಾಸುರ ಮರ್ದಿನಿ ದೇವಸ್ಥಾನ, ಮಹಿಮೆಯಲ್ಲಿ ನೂತನ ಬಯಲು ರಂಗಮಂಟಪದ ವನರಂಗದ ಉದ್ಘಾಟನಾ ಸಮಾರಂಭದ ಕಾರ್ಯಕ್ರಮದಲ್ಲಿ ಹೊನ್ನಾವರ ತಾಲ್ಲೂಕಿನ ರೋವರ್ಸ್ ಮತ್ತು ರೇಂಜರ್ಸ್‌ಗಳು ಸೇವೆ ಸಲ್ಲಿಸಿದರು. ಕರ್ನಾಟಕ ಅಕ್ಷರ ಟ್ರಸ್ಟ್‌ನವರು ರೋವರ್–ರೇಂಜರ್‌ಗಳಿಗೆ ಶಾಲು ಹೊದಿಸಿ ಸನ್ಮಾನಿಸಿದರು. ಇವರುಗಳ ಜವಾಬ್ದಾರಿಯನ್ನು ರೋವರ್ ಲೀಡರ್ ವೀರೇಂದ್ರ ಶೆಟ್ಟಿಯವರು ವಹಿಸಿದ್ದರು.



– ದಿನಾಂಕ: 18.12.2025 ರಂದು ಹೊನ್ನಾವರ ತಾಲ್ಲೂಕಿನ ಇಕೋ ಬೀಚ್‌ನಲ್ಲಿ ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ, ಕರ್ನಾಟಕ ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಜಿಲ್ಲಾ ಸಂಸ್ಥೆ ಕಾರವಾರ ಇವರ ಸಂಯುಕ್ತಾಶ್ರಯದಲ್ಲಿ ಹೊನ್ನಾವರ ತಾಲ್ಲೂಕಿನ, ಕಾಸರಕೋಡಿನ ಇಕೋ ಬೀಚ್ ಹತ್ತಿರ "ಸ್ವಚ್ಛತಾ ಸವಾರಿ"ಯನ್ನು ಕೈಗೊಳ್ಳಲಾಯಿತು. ಈ ಕಾರ್ಯಕ್ರಮಕ್ಕೆ ಆಕ್ಸಿಲಿಯಮ್ ಶಾಲೆ ಅಪ್ಪರ್ ಕಾಸರಗೋಡಿನ ಸ್ಕೌಟ್ಸ್–ಗೈಡ್ಸ್‌ಗಳು, ಹೊನ್ನಾವರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಎಸ್.ಡಿ.ಎಂ ಕಾಲೇಜಿನ ರೋವರ್ಸ್–ರೇಂಜರ್ಸ್‌ಗಳು ಅವರೊಂದಿಗೆ ದಳ ನಾಯಕರುಗಳು, ಕರಾವಳಿ ಪೋಲಿಸ ಪಡೆಯವರು ಭಾಗವಹಿಸಿದ್ದರು. ಸಂಸ್ಥೆಯಿಂದ ಶ್ರೀ ದರ್ಶನ, ಶ್ರೀ ಚೇತನ್‌ರವರು ಮಕ್ಕಳಿಗೆ ಟೋಪಿ, ಬ್ಯಾಡ್ಜ್ ನೀಡಿದರು. ಪ್ರವಾಸೋದ್ಯಮ ಇಲಾಖೆಯ ಬೀಚ್ ಮ್ಯಾನೇಜರ್ ಶ್ರೀ ವಿನೋದ್‌ರವರು ಸ್ವಚ್ಛತೆಯ ಬಗ್ಗೆ ತಿಳಿಸಿದರು. ಪಟ್ಟಣ ಪಂಚಾಯತಿಯ ಅಧಿಕಾರಿಯವರಾದ ಶ್ರೀಮತಿ ಸ್ವಾತಿ ಹಾಗೂ ಅವರ ಸಿಬ್ಬಂದಿ ವರ್ಗದವರು, ಶ್ರೀ ಬಿ.ಡಿ. ಫರ್ನಾಂಡಿಸ್, ಆಕ್ಸಿಲಿಮ್ ಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸಿಸ್ಟರ್ ರೀಟಾ, ಆರ್.ಎಸ್.ಎಲ್ ವೀರೆಂದ್ರ ಶೆಟ್ಟಿ ಉಪಸ್ಥಿತರಿದ್ದರು ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ಶೋಭಾ ಕುಲಕರ್ಣಿರವರು ಮಕ್ಕಳಿಗೆ ಶುಭಕೋರಿ ಚಾಲನೆ ನೀಡಿದರು. ಕಾರ್ಯಕ್ರಮದ ಸಂಘಟನೆಯನ್ನು ಎ.ಎಸ್.ಓ.ಸಿ ಶ್ರೀಮತಿ ಭಾರತಿ ಡಾಯಸ್‌ರವರು ಸಂಘಟಿಸಿ ಈ ಕಾರ್ಯಕ್ರಮಕ್ಕೆ ಒಟ್ಟು 140 ಜನ ಸೇರಿದ್ದರು.

– ದಿನಾಂಕ: 19/01/2026 ರಂದು ಭಟ್ಕಳ ತಾಲ್ಲೂಕಿನ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಶಿರಾಲಿಯಲ್ಲಿ ಶಿಕ್ಷಕ ಶಿಕ್ಷಕಿಯರಿಗೆ ಒಂದು ದಿನದ ಪ್ರಾರಂಭಿಕ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿಗೆ ಜಿಲ್ಲಾ ಮುಖ್ಯ ಆಯುಕ್ತರಾದ ಡಾ. ಜಿ.ಜಿ. ಸಭಾಹಿತ್‌ರವರು ಅಧ್ಯಕ್ಷತೆಯನ್ನು ವಹಿಸಿ ಎಲ್ಲರಿಗೂ ಶುಭ ಕೋರಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಆರ್.ಟಿ. ಹೆಬ್ಬಾರರವರು ಮಾತನಾಡಿ ಎಲ್ಲರಿಗೂ ಶುಭಕೋರಿದರು. ಸಂಪನ್ಮೂಲ ವ್ಯಕ್ತಿಯಾಗಿ ಎಲ್.ಟಿ. ಶ್ರೀ ಬಿ.ಡಿ. ಫರ್ನಾಂಡಿಸ ಹಾಗೂ ಈ ತರಬೇತಿಯ, ನಾಯಕಿ ಹಾಗೂ ಸಭಾಕಾರ್ಯಕ್ರಮದ ನಿರೂಪಕಿಯಾಗಿ ಎ.ಎಸ್.ಒ.ಸಿ ಶ್ರೀಮತಿ ಭಾರತಿ ಡಾಯಾಸ್‌ರವರು ಕಾರ್ಯನಿರ್ವಹಿಸಿದರು. ಈ ತರಬೇತಿಯಲ್ಲಿ ಒಟ್ಟು 18 ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

ಕೊಡಗು

– ಕೊಡಗು ಜಿಲ್ಲಾ ಸಂಸ್ಥೆ ವತಿಯಿಂದ ರೇಂಜರ್ಸ್ ಮತ್ತು ರೋವರ್ಸ್‌ಗಳಿಗೆ ದಿನಾಂಕ 16.12:25 ರಿಂದ 17.12.25 ರ ವರೆಗೆ ಜಿಲ್ಲಾ ಮಟ್ಟದ ಚಾರಣ ಮತ್ತು ಪ್ರಕೃತಿ ಅಧ್ಯಯನ ಶಿಬಿರವನ್ನು ಪುಷ್ಪಗಿರಿ ಸೋಮವಾರಪೇಟೆ ಇಲ್ಲಿ ಏರ್ಪಡಿಸಲಾಗಿತ್ತು.
ದಿನಾಂಕ:16.12.25 ರಂದು ಬಿ.ಟಿ.ಸಿ.ಜೆ ಕಾಲೇಜು ಆವರಣ ಯಡೂರು ಸೋಮವಾರಪೇಟೆ ಇಲ್ಲಿಗೆ ಕೊಡಗು ಜಿಲ್ಲೆಯ ವಿವಿಧ ಪ್ರಥಮ ದರ್ಜೆ ಕಾಲೇಜಿನ ರೋವರ್ಸ್ ಮತ್ತು ರೇಂಜರ್ಸ್ ಸೇರಿ 133 ವಿದ್ಯಾರ್ಥಿಗಳು ಆಗಮಿಸಿದರು. ಮೊದಲಿಗೆ ಸ್ಕೌಟ್ಸ್–ಗೈಡ್ ಧ್ವಜ ರೋಹಣ ಮಾಡಿ ಗುಂಪು ಮಾಡಲಾಯಿತು. ನಂತರ ಶಿಬಿರದ ನಾಯಕರು ಜಿಲ್ಲಾ ಸ್ಕೌಟ್ ಆಯುಕ್ತರು ಆಗಿರುವ ಶ್ರೀ ಜಿಮ್ಮಿ ಸಿಕ್ವೇರಾರವರು
ದಿನಾಂಕ: 17.12.25 ರಂದು ಬೆಳಿಗ್ಗೆ ನಡೆಯುವ ಚಾರಣ ಶಿಬಿರದ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಿದರು. ದಿನಾಂಕ : 16.12.25ರಂದು ಸಂಜೆ ಭವ್ಯ ಶಿಬಿರಾಗ್ನಿಯನ್ನು ನಡೆಸಲಾಯಿತು. ಈ ಶಿಬಿರಾಗ್ನಿಯನ್ನು ಬಿ.ಟಿ.ಸಿ.ಜೆ ಕಾಲೇಜಿನ ಸಿ.ಡಿ.ಸಿ ಸದಸ್ಯರು



ಆಗಿರುವ ಶ್ರೀ ಸುರೇಂದ್ರರವರು, ಕಾಲೇಜಿನ ಪ್ರಾಂಶುಪಾಲರು, ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಕೆ.ಟಿ. ಬೇಬಿ ಮ್ಯಾಥ್ಯೂ ಉದ್ಘಾಟಿಸಿದರು.

ಶ್ರೀ. ಕೆ.ಟಿ. ಬೇಬಿ ಮ್ಯಾಥ್ಯೂರವರು ಮಾತನಾಡುತ್ತ "ಇದು ಒಂದು ಉತ್ತಮ ಕಾರ್ಯಕ್ರಮವಾಗಿದ್ದು ಮಕ್ಕಳಲ್ಲಿ ಪರಿಸರದ ಬಗ್ಗೆ ಕಾಳಜಿ ಮತ್ತು ಮಕ್ಕಳ ಮನೋಸ್ಥೈರ್ಯವನ್ನು ಹೆಚ್ಚಿಸಲು ಇಂತ ಕಾರ್ಯಕ್ರಮವು ಬಹಳ ಪ್ರಯೋಜನಕಾರಿ ಆಗಿದೆ" ಎಂದರು.



ಬಿ.ಟಿ.ಸಿ.ಜಿ ಕಾಲೇಜಿನ ಪ್ರಾಂಶುಪಾಲರು ಮಾತನಾಡುತ್ತ "ಗಣ್ಯ ವ್ಯಕ್ತಿಗಳು ಮಾತನಾಡುವಾಗ ಕೇಳಿಕೊಳ್ಳುವ ಮನಸ್ಥಿತಿ ಮಕ್ಕಳಲ್ಲಿ ಇದ್ದು. ಅವರು ಹೇಳುವ ಒಳ್ಳೆಯ ವಿಷಯಗಳನ್ನು ಮನಸ್ಸಿಗೆ ತೆಗೆದುಕೊಳ್ಳಬೇಕು" ಎಂದರು. ಈ ಕಾರ್ಯಕ್ರಮದಲ್ಲಿ ಬಿ.ಟಿ.ಸಿ.ಜಿ ಕಾಲೇಜಿನ ಸಿ.ಡಿ.ಸಿ ಸದಸ್ಯರುಗಳು, ದಾನಿಗಳು, ಕಾಲೇಜಿನ ಉಪನ್ಯಾಸಕ ವೃಂದದವರು, ಸಿಬ್ಬಂದಿ ವರ್ಗದವರು. ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ರಾಣಿ ಮಾಚಯ್ಯ, ಸ್ಥಾನಿಕ ಆಯುಕ್ತರಾದ ಶ್ರೀ ಹೆಚ್.ಆರ್ ಮುತ್ತಪ್ಪ, ಸೋಮವಾರಪೇಟೆ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ವಿಜೇತ್, ಕಾರ್ಯದರ್ಶಿ ಶ್ರೀಮತಿ ಜ್ಯೋತಿ ಉಪಸ್ಥಿತರಿದ್ದರು.

– ದಿನಾಂಕ 18.12.2025 ರಂದು ಪಿ.ಎಂ.ಶ್ರೀ., ಪಿ.ಎಂ.ಪಿ. ಶಾಲೆ ಕುಶಾಲನಗರದಲ್ಲಿ ನಡೆದ ತಾಲ್ಲೂಕು ಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವದ ಕಾರ್ಯಕ್ರಮದಲ್ಲಿ ಪಿ.ಎಂ.ಶ್ರೀ ಶಾಲೆಯ ಗೈಡ್ಸ್ ಕಾನ್ಟೆಂಟ್ ಶಾಲೆಯ ಗೈಡ್ಸ್, ಮತ್ತು ಫಾತಿಮಾ ಪ್ರೌಢಶಾಲೆಯ ಸ್ಕೌಟ್ಸ್–ಗೈಡ್ಸ್ ಕ್ಯಾಪ್ಟನ್ಸ್‌ಗಳು ಸ್ಕೌಟ್ ಮಾಸ್ಟರ್ಸ್‌ಗಳು ಸೇವೆ ಸಲ್ಲಿಸಿದರು.

– ದಿನಾಂಕ 20.12.2025 ರಂದು ಕುಶಾಲನಗರದ ಸ್ಥಳೀಯ ಸಂಸ್ಥೆಯ ವತಿಯಿಂದ ಸ್ಕೌಟ್ಸ್–ಗೈಡ್ಸ್‌ಗಳು ಕೂಡಿಗೆಯ ಮಣ್ಣು ಪರೀಕ್ಷಾ ಘಟಕ, ಎರೆ ಗೊಬ್ಬರ ತಯಾರಿಕೆ, ಕೋಳಿ ಸಾಕಾಣಿಕೆ ಕೇಂದ್ರ ಹಾಗೂ ಡೈರಿ ವೀಕ್ಷಣೆ ಮಾಡಿದರು. ಇವರಿಗೆ ರಾಮೇಶ್ವರ ಕೃಷಿ ಪತ್ತಿನ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಕೆ. ಹೇಮಂತ್‌ರವರು ಅಡಿಗೆ ವ್ಯವಸ್ಥೆಯನ್ನು ಮಾಡಿದ್ದರು. ಊಟಕ್ಕೆ ಬೇಕಾದ ವಸ್ತುಗಳನ್ನು ಹಳೆಯ ವಿದ್ಯಾರ್ಥಿ ರಾಮೇಶ್ವರ ಕೃಷಿ ಪತ್ತಿನ ಸಹಕಾರಿ ಬ್ಯಾಂಕಿನ ನಿರ್ದೇಶಕರಾದ ಶ್ರೀ ಕೆ.ಪಿ. ರಾಜು, ಸ್ಥಳೀಯ ಸಂಸ್ಥೆಯ ಸದಸ್ಯರಾದ ಶ್ರೀ ಸುನಿಲ್ ರಾವ್, ಶ್ರೀ ಕೆ.ಜಿ. ಮಂಜು, ಶ್ರೀ ಗಣೇಶ್ ಕಿರಣ್ ಮತ್ತು ಶ್ರೀ ಮಂಜುನಾಥ ಕೆ.ಎಸ್.ರವರು ವ್ಯವಸ್ಥೆಯನ್ನು ಮಾಡಿದ್ದರು. ಸ್ಕೌಟ್ಸ್ ಆಯುಕ್ತರಾದ ಶ್ರೀ ಜಿಮ್ಮಿ ಸಿಕ್ವೇರ್‌ರವರು ವಿದ್ಯಾರ್ಥಿಗಳಿಗೆ ಸ್ಕೌಟ್ಸ್ ಮತ್ತು ಗೈಡ್ಸ್‌ನ ಇತಿಹಾಸವನ್ನು ತಿಳಿಸಿದರು. ಜಿಲ್ಲಾ ಸಂಘಟಕರಾದ ಶ್ರೀಮತಿ ಯು.ಸಿ. ದಮಯಂತಿಯವರು ಜೀವನ ಕೌಶಲ್ಯದ ಮಹತ್ವವನ್ನು ತಿಳಿಸಿದರು.

ಮೈಸೂರು



– ದಿ.: 07–11–2025 ರಂದು ಜಿಲ್ಲಾ ಸಂಸ್ಥೆಯಲ್ಲಿ "ಧ್ವಜ ದಿನಾಚರಣೆ"ಯನ್ನು ಆಯೋಜಿಸಲಾಗಿತ್ತು. ಶ್ರೀಮತಿ ಶ್ರೀಶೈಲಾ ರಾಮಣ್ಣನವರ್ ಖಜಾಂಚಿಗಳು, ವಿದ್ಯಾವರ್ಧಕ ಸಂಘ, ಮೈಸೂರು ಹಾಗೂ ಅಧ್ಯಕ್ಷರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಉತ್ತರ ವಲಯ, ಮೈಸೂರು ರವರು ಮುಖ್ಯ ಅಥಿತಿಗಳಾಗಿ ಆಗಮಿಸಿ ಧ್ವಜಚೀಟಿಗಳನ್ನು ಬಿಡುಗಡೆ ಮಾಡಿದರು. ಶ್ರೀ ಪಿ.ವಿಶ್ವನಾಥ್, ಜಿಲ್ಲಾ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಮೈಸೂರು ಜಿಲ್ಲಾ ಸಂಸ್ಥೆ ಇವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಅಬ್ದುಲ್ ಜಮೀಲ್ ಜಿಲ್ಲಾ ಕಾರ್ಯದರ್ಶಿಗಳು ಹಾಗೂ ಜಿಲ್ಲಾ ಸಂಸ್ಥೆ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



– ದಿ.: 15–11–2025 ಮೈಸೂರು ಜಿಲ್ಲಾ ಮಟ್ಟದ ದೇಶಭಕ್ತಿ ಗೀತಗಾಯನ ಸ್ಪರ್ಧೆಯನ್ನು ಜಿಲ್ಲಾ ಸಂಸ್ಥೆಯಲ್ಲಿ ಆಯೋಜಿಸಲಾಗಿತ್ತು. ಕಬ್ಸ್–ಬುಲ್‌ಬುಲ್ಸ್, ಸ್ಕೌಟ್ಸ್–ಗೈಡ್ಸ್ ಹಾಗೂ ದಳನಾಯಕರುಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

– ದಿನಾಂಕ 15 ಮತ್ತು 16–11–2025 ರಂದು ಮೈಸೂರು ಜಿಲ್ಲಾ ಸಂಸ್ಥೆಯಲ್ಲಿ ರಾಜ್ಯ ಪುರಸ್ಕಾರ ಸ್ಕೌಟ್ಸ್, ಗೈಡ್ಸ್, ರೋವರ್ಸ್ ಹಾಗೂ ರೇಂಜರ್ಸ್‌ಗಳಿಗೆ ರಾಜ್ಯ ಪುರಸ್ಕಾರ ಪೂರ್ವಬಾವಿ ಶಿಬಿರವು ನಡೆಯಿತು.

ರಾಯಚೂರು

– ದಿನಾಂಕ: 19–11–2025 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಮಾನ್ವಿ ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಿರವಾರ ಇವರುಗಳ ಸಂಯುಕ್ತಾಶ್ರಯದಲ್ಲಿ ಶ್ರೀ ಹನುಮಂತ ಪ್ರಾಂಶುಪಾಲರು ಇವರು ಅಧ್ಯಕ್ಷತೆಯಲ್ಲಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ರೋವರ್ಸ್ ಘಟಕ ಹಾಗೂ ಮದರ್ ತೆರೇಸಾ ರೇಂಜರ್ ಘಟಕಗಳ ಉದ್ಘಾಟನಾ ಸಮಾರಂಭವನ್ನು ಆಯೋಜನೆ ಮಾಡಲಾಯಿತು.



– ದಿನಾಂಕ: 22–11–2025 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಮಾನ್ವಿ ವತಿಯಿಂದ ಶ್ರೀ ಬಿ.ಬಲರಾಮಕೃಷ್ಣ ಅಧ್ಯಕ್ಷರು ಇವರ ಅಧ್ಯಕ್ಷತೆಯಲ್ಲಿ ಪ್ರಾರಂಭಿಕ ಶಿಬಿರ ಹಾಗೂ ಸ್ಕೌಟರ್–ಗೈಡರ್ ಸಮಾವೇಶವನ್ನು ಮಾನ್ವಿ ಪಬ್ಲಿಕ್ ಶಾಲೆ, ಮಾನ್ವಿ ಇಲ್ಲಿ ಆಯೋಜನೆ ಮಾಡಲಾಯಿತು. ಶ್ರೀ ಮಲ್ಲನಗೌಡ ಸಹಾಯಕ ಜಿಲ್ಲಾ ಆಯುಕ್ತರು ಮಾನ್ವಿ ಇವರು ಸಸಿಗೆ ನೀರು ಹಾಕುವ ಮೂಲಕ

ಶಿಬಿರವನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಬಸವರಾಜ ಗದಗಿನ ಜಿಲ್ಲಾ ಆಯುಕ್ತರು (ಸ್ಕೌ), ಶ್ರೀ ಎಮ್. ರಾಮಲಿಂಗಪ್ಪ ಕಾರ್ಯದರ್ಶಿಗಳು, ಶ್ರೀ ಸೈಯದ್ ಮುಜತಬಾ ಖಾದ್ರಿ ಶಾಲೆಯ ಕಾರ್ಯದರ್ಶಿಗಳು, ಶ್ರೀ ಚಾಂದಾ ಪಾಷಾ ಗುತ್ತಿಗೆದಾರರು, ಶ್ರೀ ಸಲೀಂ ಲೆಕ್ಕ ಪರಿಶೋಧಕರು, ಶ್ರೀಮತಿ ನಾಗರತ್ನ ದೇಸಾಯಿ ಮುಖ್ಯಗುರುಗಳು, ಶ್ರೀ ವೆಂಕಟರೆಡ್ಡಿ ಬಳಕಲ್, ಇವರು ಆಗಮಿಸಿದ್ದರು. ಶ್ರೀಮತಿ ರಜನಿ .ಡಿ ರಾಜ್ಯ ಪರಿಷತ್ ಸದಸ್ಯರು (ಗೈ), ಶ್ರೀಮತಿ ಪರಿಮಳಾ, ಶ್ರೀಮತಿ ಸೌಮ್ಯ, ಶ್ರೀ ನರಸಿಂಹಮೂರ್ತಿ ದೇಸಾಯಿ, ಶ್ರೀ ಚಂದ್ರಶೇಖರ ಇವರು ಶಿಬಿರಾರ್ಥಿಗಳಿಗೆ ಪ್ರಾರಂಭಿಕ ಶಿಬಿರ ಹಾಗೂ ಸ್ಕೌಟರ್–ಗೈಡರ್ ಸಮಾವೇಶದ ಕುರಿತು ಸಂಪೂರ್ಣ ಮಾಹಿತಿಯನ್ನು ನೀಡಿದರು. ಇದೇ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು,45 ಜನ ಶಿಕ್ಷಕ–ಶಿಕ್ಷಕಿಯರು ಭಾಗವಹಿಸಿದ್ದರು.

– ದಿನಾಂಕ: 26–11–2025 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು ವತಿಯಿಂದ ಮತ್ತು ವಿದ್ಯಾ ಜ್ಯೋತಿ ಶಾಲೆ ರಾಯಚೂರು ಇವರುಗಳ ಸಂಯುಕ್ತಾಶ್ರಯದಲ್ಲಿ "ಭಾರತ ಸಂವಿಧಾನ ದಿನಾಚರಣೆ"ಯನ್ನು ಆಚರಿಸಲಾಯಿತು ತದನಂತರ ಶಾಲೆಯ ಕಬ್ಸ್–ಬುಲ್‌ಬುಲ್ಸ್, ಸ್ಕೌಟ್ಸ್–ಗೈಡ್ಸ್ ಮಕ್ಕಳಿಂದ ಜಾಥಾ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಯಿತು.

– ದಿನಾಂಕ: 29–11–2025 ರಂದು ಸ್ಥಳೀಯ ಸಂಸ್ಥೆ ರಾಯಚೂರು ವತಿಯಿಂದ ಶ್ರೀ ಆರ್.ಎಚ್. ಸಾಗರ್ ಅಧ್ಯಕ್ಷರು ಇವರ ಅಧ್ಯಕ್ಷತೆಯಲ್ಲಿ ಸ್ಕೌಟ್ ಭವನ ರಾಯಚೂರು ಇಲ್ಲಿ ತಾಲೂಕ ಮಟ್ಟದ ಪ್ರಾರಂಭಿಕ ಶಿಬಿರ ಹಾಗೂ ಸ್ಕೌಟರ್–ಗೈಡರ್ ಸಮಾವೇಶವನ್ನು ಆಯೋಜನೆ ಮಾಡಲಾಯಿತು. ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ 48 ಜನ ಶಿಕ್ಷಕ–ಶಿಕ್ಷಿಕಿಯರು ಭಾಗವಹಿಸಿದ್ದರು.

– ದಿನಾಂಕ: 01–12–2025 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಮಾನ್ವಿ ಮತ್ತು ಲೊಯೋಲಾ ಪದವಿ ಪೂರ್ವ ಕಾಲೇಜು ಮಾನ್ವಿ ಇವರುಗಳ ಸಂಯುಕ್ತಾಶ್ರಯದಲ್ಲಿ ಪಾದರ್ ಅರುಣ್ ಕುಮಾರ್ ಜೆ.ಎಸ್. ಇವರ ಅಧ್ಯಕ್ಷತೆಯಲ್ಲಿ ಭಗತ್ ಸಿಂಗ್ ರೋವರ್ ಘಟಕ ಹಾಗೂ ಝಾನ್ಸಿ ರಾಣಿ ಲಕ್ಷ್ಮೀಬಾಯಿ ರೇಂಜರ್ ಘಟಕಗಳ ಉದ್ಘಾಟನಾ ಸಮಾರಂಭವನ್ನು ಆಯೋಜನೆ ಮಾಡಲಾಯಿತು. ಶ್ರೀ ಬಿ. ಬಲರಾಮಕೃಷ್ಣ ಅಧ್ಯಕ್ಷರು ಇವರು ಸಸಿಗೆ ನೀರು ಹಾಕುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.

– ದಿನಾಂಕ: 04–12–2025 ರಂದು ಸುಪ್ರಸಿದ್ಧ ಲಿಂಗಸುಗೂರು ತಾಲೂಕಿನ ಕುಪ್ಪೆ ಭೀಮ ಕಸಬಾ ಲಿಂಗಸುಗೂರು ಶತಮಾನೋತ್ಸವ ಜಾತ್ರಾ ಅಂಗವಾಗಿ ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಲಿಂಗಸುಗೂರು ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಲಿಂಗಸುಗೂರು ಕಾಲೇಜಿನ ರೋವರ್ಸ್ ಮತ್ತು ರೇಂಜರ್ಸ್ ಹಾಗೂ ಶ್ರೀ ಮಹೇಶ ಕುಮಾರ್, ರೋವರ್ ಸ್ಕೌಟ್ ಲೀಡರ್ ಇವರು ಸ್ವಯಂ ಸೇವಕರಾಗಿ ಸೇವೆಯನ್ನು ಸಲ್ಲಿಸಿದರು. ಇದೇ ಸಂದರ್ಭದಲ್ಲಿ ಶ್ರೀ ಟಿ. ಶರಣಪ್ಪ ಕಾರ್ಯದರ್ಶಿಗಳು, ಶ್ರೀಮತಿ ಗಂಗಮ್ಮ ಕಟ್ಟಿಮನಿ, ಸಹಾಯಕ ಜಿಲ್ಲಾ ಆಯುಕ್ತರು (ಗೈ), ಶ್ರೀಮತಿ ಸಂಗೀತಾ ಮಜ್ಜಿಗೆ ಉಪಾಧ್ಯಕ್ಷರು ಹಾಗೂ ಪದಾಧಿಕಾರಿಗಳು ಭಾಗವಹಿಸಿದ್ದರು.

– ದಿನಾಂಕ: 06–12–2025 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಮಸ್ಕಿ ವತಿಯಿಂದ ಡಾ.ಮಲ್ಲಿಕಾರ್ಜುನ ಇಟ್ಟಿ ಅಧ್ಯಕ್ಷರು ಇವರ ಅಧ್ಯಕ್ಷತೆಯಲ್ಲಿ ತಾಲೂಕ ಮಟ್ಟದ ಪ್ರಾರಂಭಿಕ ಶಿಬಿರ ಹಾಗೂ ಸ್ಕೌಟರ್–ಗೈಡರ್ ಸಮಾವೇಶವನ್ನು ಶ್ರೀ ಮಹರ್ಷಿ ವಾಲ್ಮೀಕಿ ಭವನ, ಮಸ್ಕಿ ಇಲ್ಲಿ ಆಯೋಜನೆ ಮಾಡಲಾಯಿತು. ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು, ಸ್ಕೌಟರ್–ಗೈಡರ್, ಶಿಕ್ಷಕ–ಶಿಕ್ಷಕಿಯರು 35 ಜನ ಭಾಗವಹಿಸಿದ್ದರು.

– ದಿನಾಂಕ: 06–12–2025 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಮಸ್ಕಿ ವತಿಯಿಂದ ಎಸ್.ಡಿ.ಎಮ್ ಶಾಲೆ ಮಸ್ಕಿ ಇಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳಿಗೆ ತೃತೀಯ ಸೋಪಾನ್ ಪರೀಕ್ಷಾ ಶಿಬಿರವನ್ನು ಆಯೋಜನೆ ಮಾಡಲಾಯಿತು. ಶಿಬಿರದ ನಾಯಕರಾಗಿ ಶ್ರೀ ಶಶಿಕಾಂತ್ ದೇಸಾಯಿ ALT ಹಾಗೂ ರಾಜ್ಯ ಪರಿಷತ್ ಸದಸ್ಯರು (ಸ್ಕೌ), ಶ್ರೀಮತಿ ಕಲ್ಪಾಶ್ರೀ HWB (G) ಇವರು ಕಾರ್ಯವನ್ನು ನಿರ್ವಹಿಸಿದರು. ಮುಖ್ಯ ಅತಿಥಿಗಳಾಗಿ ಡಾ. ಮಲ್ಲಿಕಾರ್ಜುನ ಇಟ್ಟಿ ಅಧ್ಯಕ್ಷರು, ಶ್ರೀ ಶಿವಪ್ಪ ಹಸಮಕಲ್ ಕಾರ್ಯದರ್ಶಿಗಳು, ಶ್ರೀ ಮಲ್ಲಿಕಾರ್ಜುನ ಅಜೀವ ಸದಸ್ಯರು, ಶ್ರೀಮತಿ ಇಂದಿರಾ ಪಾಟೀಲ್ ಮುಖ್ಯಗುರುಗಳು ಇವರು ಆಗಮಿಸಿದ್ದರು. ಸ್ಕೌಟ್ಸ್–68 ಹಾಗೂ 70–ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

– ದಿನಾಂಕ: 06–12–2025 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಸಿಂಧನೂರು ವತಿಯಿಂದ ಶ್ರೀ ಬೀರಪ್ಪ ಶಂಭೋಜಿ, ಸಹಾಯಕ ಜಿಲ್ಲಾ ಆಯುಕ್ತರು (ಮುಕ್ತದಳ) ಹಾಗೂ ಕಾರ್ಯದರ್ಶಿಗಳು ಇವರ ಅಧ್ಯಕ್ಷತೆಯಲ್ಲಿ ತಾಲೂಕ ಮಟ್ಟದ ಪ್ರಾರಂಭಿಕ ಶಿಬಿರ ಹಾಗೂ ಸ್ಕೌಟರ್–ಗೈಡರ್ ಸಮಾವೇಶವನ್ನು ಸರ್ಕಾರಿ ಬಾಲಕರ ಪ್ರೌಢ ಶಾಲೆ ಸಿಂಧನೂರು ಇಲ್ಲಿ ಆಯೋಜನೆ ಮಾಡಲಾಯಿತು. ಶ್ರೀ ಭಾಸ್ಕರ್ ರಾವ್, ಯೋಗ ಗುರುಗಳು, ಸಿಂಧನೂರು ಇವರು ಸಸಿಗೆ ನೀರು ಹಾಕುವ ಮೂಲಕ ಶಿಬಿರವನ್ನು ಉದ್ಘಾಟಿಸಿದರು. ಶಿಬಿರದ ನಾಯಕರಾಗಿ ಶ್ರೀಮತಿ ಶೋಭಾ ವಿ.ಕೆ., ಪ್ರೀ–ಎ.ಎಲ್.ಟಿ (ಗೈ) ಹಾಗೂ ಸಹಾಯಕರಾಗಿ ಶ್ರೀ ಬಸವರಾಜ, ವಕೀಲರು ಇವರು ಕಾರ್ಯವನ್ನು ನಿರ್ವಹಿಸಿದರು.ಇದೇ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು, ಸ್ಕೌಟರ್ಸ್–ಗೈಡರ್ಸ್, ಶಿಕ್ಷಕ–ಶಿಕ್ಷಕಿಯರು 25 ಜನ ಭಾಗವಹಿಸಿದ್ದರು.

– ದಿನಾಂಕ: 14–12–2025 ರಂದು ಜಿಲ್ಲಾ ಸಂಸ್ಥೆ ರಾಯಚೂರು ವತಿಯಿಂದ ಶ್ರೀ ಬಸವರಾಜ ಬೋರೆಡ್ಡಿ ಜಿಲ್ಲಾ ಮುಖ್ಯ ಆಯುಕ್ತರು ಇವರ ಅಧ್ಯಕ್ಷತೆಯಲ್ಲಿ ಕಲ್ಯಾಣ ಕರ್ನಾಟಕ ವಿಭಾಗ ಮಟ್ಟದ "ಗೀತಗಾಯನ ಸ್ಪರ್ಧೆ"ಯನ್ನು ಜಿಲ್ಲಾ ಸ್ಕೌಟ್, ಭವನ ರಾಯಚೂರು ಇಲ್ಲಿ ಆಯೋಜನೆ ಮಾಡಲಾಯಿತು. ತಹಸಿಲ್ದಾರ್ ಹಾಗೂ ತಾಲೂಕ ದಂಡಾಧಿಕಾರಿಗಳು ರಾಯಚೂರು ಇವರು ದೀಪ ಬೆಳಗುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ನಂತರ ಅವರು ಮಾತನಾಡುತ್ತಾ "ಮಕ್ಕಳಲ್ಲಿ ದೇಶಾಭಿಮಾನ, ಭ್ರಾತೃತ್ವ ಭಾವನೆ, ಮಾನವೀಯ ಮೌಲ್ಯ, ಶಿಸ್ತು, ಸಂಯಮ ಬೆಳೆಸುವಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು ತುಂಬಾ ಸಹಕಾರಿಯಾಗಿರುತ್ತದೆ ಹಾಗೂ ಮಕ್ಕಳು ಹೆಚ್ಚು ಹೆಚ್ಚು ಇಂತಹ ಸಂಸ್ಥೆಯಲ್ಲಿ ತೊಡಗಿಸಿಕೊಳ್ಳುವುದರಿಂದ ತಮ್ಮ ಜೀವನವನ್ನು ಉತ್ತಮಗೊಳಿಸುವಲ್ಲಿ ಸಹಕಾರಿಯಾಗುತ್ತದೆ" ಎಂದು ತಿಳಿಸಿದರು. ಮುಖ್ಯ ಅತಿಥಿಗಳಾಗಿ ಪ್ರೊ। ಯಂಕಣ್ಣ, ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಯಚೂರು, ಶ್ರೀ ಬಷೀರ್ ಅಹಮದ್, ಉಪಾಧ್ಯಕ್ಷರು ಎ.ಪಿ.ಎಮ್.ಸಿ. ರಾಯಚೂರು, ಶ್ರೀ ಪ್ರಬಣ್ಣಗೌಡ ಪಾಟೀಲ್ ಹಂಚಿನಾಳ್, ಶ್ರೀ ಮಹೇಶ ರಾಘವೇಂದ್ರ, ಹೋಟೆಲ್ ಮಾಲೀಕರು, ಶ್ರೀ ಚಿನ್ನಿ, ಗುತ್ತಿಗೆದಾರರು, ಶ್ರೀ ಶೇಖರ, ಪಿ.ಡಿ.ಓ ರಾಯಚೂರು, ಶ್ರೀ ಹನುಮಂತಪ್ಪ ಗವಾಯಿ, ನಿವೃತ್ತ ಜಿಲ್ಲಾ ಶಿಕ್ಷಣಾಧಿಕಾರಿಗಳು ಹಾಗೂ ಪೋಷಕರು, ಡಾ. ಪ್ರಾಣೇಶ್ ಕುಲಕರ್ಣಿ, ಜಿಲ್ಲಾ ಆಯುಕ್ತರು (ರೋ), ಶ್ರೀ ಆಲೀಯಾ ಖಾನಂ, ಜಿಲ್ಲಾ ಆಯುಕ್ತರು (ಗೈ), ಶ್ರೀಮತಿ ದಾನಮ್ಮ, ಉಪಾಧ್ಯಕ್ಷರು, ಶ್ರೀ ಆರ್.ಎಚ್. ಸಾಗರ್, ಅಧ್ಯಕ್ಷರು ಇವರು ಉಪಸ್ಥಿತರಿದ್ದರು. ಸಮಾರೋಪ ಸಮಾರಂಭ ಮುಖ್ಯ ಅತಿಥಿಗಳಾಗಿ ಮಾನ್ಯ ಶ್ರೀ ಪುಟ್ಟಮಾದಯ್ಯ, ಐ.ಪಿ.ಎಸ್. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ರಾಯಚೂರು ಇವರು ಆಗಮಿಸಿದ್ದರು. ಶ್ರೀಮತಿ ರೂಪ ಉಪಾಧ್ಯಕ್ಷರು ಇವರು ಕಾರ್ಯಕ್ರಮವನ್ನು ನಿರೂಪಿಸಿದರು.

– ದಿನಾಂಕ : 13–01–2026 ರಂದು ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು ಮತ್ತು ನಂದಿನಿ ಪ್ರೌಢ ಶಾಲೆ ರಾಯಚೂರು ಇವರ ವತಿಯಿಂದ ಶಾಲೆಯಲ್ಲಿ ನೂತನವಾಗಿ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಗಳ ಉದ್ಘಾಟನಾ ಸಮಾರಂಭವನ್ನು ಆಯೋಜನೆ ಮಾಡಲಾಯಿತು.

– ದಿನಾಂಕ : 17–01–2026 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಸಿಂಧನೂರು, ಮಸ್ಕಿ ಮತ್ತು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ದುಗ್ಗಮ್ಮನಗುಂಡ ತಾ: ಸಿಂಧನೂರು, ಃಒಐ ಶಾಲೆ ಮಸ್ಕಿ ಇವರುಗಳ ಸಂಯುಕ್ತಾಶ್ರಯದಲ್ಲಿ ಶಾಲೆಯಲ್ಲಿ ಕಬ್ಸ್ ಮತ್ತು ಬುಲ್‌ಬುಲ್ಸ್ ಮಕ್ಕಳಿಂದ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಯಿತು.



ಶಿವಮೊಗ್ಗ

– ಸ್ಥಳೀಯ ಸಂಸ್ಥೆ ಶಿವಮೊಗ್ಗ ಇಲ್ಲಿ ಶಿಕ್ಷಕರಿಗೆ ಒಂದು ದಿನದ ಪ್ರಾರಂಭಿಕ ಶಿಬಿರ ಆಯೋಜಿಸಿದ್ದು... ರಾಜ್ಯ ಕಾರ್ಯದರ್ಶಿ ಶ್ರೀ ಕೆ. ಗಂಗಪ್ಪಗೌಡ ಇವರು ಭೇಟಿಕೊಟ್ಟು ಶಿಕ್ಷಕರನ್ನು ಪ್ರೋತ್ಸಾಹಿಸಿ ಸ್ಕೌಟ್–ಗೈಡ್ಸ್‌ನ ಬಗ್ಗೆ ಮಾಹಿತಿ ನೀಡುವ ಜೊತೆಗೆ ದಳವನ್ನು ಚೆನ್ನಾಗಿ ಬೆಳೆಸೋಣ ಎಂದು ಹುರಿದುಂಬಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಮತಿ ಶಕುಂತಲಾ ಚಂದ್ರಶೇಖರ್,

ಜಿಲ್ಲಾ ಕಾರ್ಯದರ್ಶಿ ಶ್ರೀ ಚಂದ್ರಶೇಖರಯ್ಯ, ಸ್ಥಳೀಯ ಸಂಸ್ಥೆ ಕಾರ್ಯದರ್ಶಿ, ಜಿಲ್ಲಾ ಗೈಡ್ ಆಯುಕ್ತರು, ಜಿಲ್ಲಾ ತರಬೇತಿ ಆಯುಕ್ತರು, ಸ್ಥಳೀಯ ಸಂಸ್ಥೆ ಸಹ ಕಾರ್ಯದರ್ಶಿ, ಶ್ರೀ ವಿಜಯ್‌ಕುಮಾರ್ ಹಾಗೂ ಶ್ರೀಮತಿ ಸುಮನ್ ಶೇಖರ್ ಉಪಸ್ಥಿತರಿದ್ದರು.

– ದಿನಾಂಕ : 22.11.2025 ರಂದು ತೀರ್ಥಹಳ್ಳಿಯ ಬಿ.ಆರ್.ಸಿ ಕೇಂದ್ರದಲ್ಲಿ ತೀರ್ಥಹಳ್ಳಿ ತಾಲ್ಲೂಕಿನ ಶಿಕ್ಷಕ/ಶಿಕ್ಷಕಿಯರು ಒಂದು ದಿನದ ಪ್ರಾರಂಭಿಕ ಶಿಬಿರವನ್ನು ಏರ್ಪಡಿಸಲಾಗಿತ್ತು. ಈ ಶಿಬಿರದಲ್ಲಿ 05 ಜನ ಶಿಕ್ಷಕರು ಹಾಗೂ 13 ಜನ ಶಿಕ್ಷಕಿಯರು, ಒಟ್ಟು 18 ಜನ ಶಿಕ್ಷಕ/ಶಿಕ್ಷಕಿಯರು ಭಾಗವಹಿಸಿದ್ದರು. ತೀರ್ಥಹಳ್ಳಿ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಆದ ಶ್ರೀ ಗಿರಿರಾಜ್‌ರವರು ಭಾಗವಹಿಸಿ ಶಿಕ್ಷಕ/ಶಿಕ್ಷಕಿಯರಿಗೆ ಕೂಡಲೇ ದಳಗಳನ್ನು ಪ್ರಾರಂಭಿಸಿ, ಸ್ಕೌಟ್–ಗೈಡ್ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ತಿಳಿಸಿದರು. ಈ ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಹೆಚ್. ಶಿವಶಂಕರಪ್ಪ, ಜಿಲ್ಲಾ ತರಬೇತಿ ಆಯುಕ್ತರು (ಸ್ಕೌಟ್), ಶ್ರೀ ಎಮ್. ಕೆ. ಕೃಷ್ಣಸ್ವಾಮಿ, ಜಿಲ್ಲಾ ಆಯುಕ್ತರು (ವಯಸ್ಕ ಸಂಪನ್ಮೂಲ), ಶ್ರೀಮತಿ ಹೇಮಲತ, ಎಲ್.ಟಿ. (ಗೈಡ್ಸ್) ಭಾಗವಹಿಸಿ ಮಾಹಿತಿಯನ್ನು ನೀಡಿದರು. ಇವರೊಂದಿಗೆ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಎ.ಎಸ್. ಮಂಜುನಾಥ್‌ರವರು ಉಪಸ್ಥಿತರಿದ್ದರು.



ಉಡುಪಿ

– ಕಾರ್ಕಳ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾಗಿದ್ದ ಹಾಗೂ ವಕೀಲರಾಗಿದ್ದ ವಿಜಯ ಕುಮಾರ್ ಇವರ ಶ್ರದ್ಧಾಂಜಲಿ ಸಭೆಯಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಹಾಗೂ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಮತಿ ಇಂದ್ರಾಳಿ ಜಯಕರ್ ಶೆಟ್ಟಿ ಅವರು ಭಾಗವಹಿಸಿದ್ದರು.



– 75ನೇ ಸಂಸ್ಥಾಪನಾ ದಿನಾಚರಣೆ (ಧ್ವಜ ದಿನಾಚರಣೆಯ) ಅಂಗವಾಗಿ ಮೌಂಟ್ ರೋಸರಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ 7 ಬನ್ನಿಸ್ ದಳಗಳನ್ನು ಪ್ರಾರಂಭಿಸಲಾಯಿತು.

– ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಸಂಸ್ಥಾಪನ ದಿನಾಚರಣೆಯನ್ನು (ಧ್ವಜ ದಿನಾಚರಣೆ) ನವೆಂಬರ್ 07 ರಂದು ಉಡುಪಿ ಜಿಲ್ಲಾ ಸಂಸ್ಥೆಯ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಇಂದ್ರಾಳಿ ಜಯಕರ್ ಶೆಟ್ಟಿ ಇವರ ಉಪಸ್ಥಿತಿಯಲ್ಲಿ ರೈಲ್ವೆ ಅಧಿಕಾರಿಯಾದ ಶ್ರೀ ಎಸ್.ಕೆ. ಭಟ್‌ರವರು ಧ್ವಜಚೀಟಿ ಬಿಡುಗಡೆ ಮಾಡಿದರು.

– ದಿ. 18.11.2025 ರಂದು ಹೆಬ್ರಿ ವಲಯದ ಸರಕಾರಿ ಪದವಿಪೂರ್ವ ಪ್ರೌಢಶಾಲೆಯಲ್ಲಿ ಹೊಸದಾಗಿ ಎರಡು ಗೈಡ್‌ದಳ ಹಾಗೂ ಒಂದು ಸ್ಕೌಟ್‌ದಳ ಪ್ರಾರಂಭಿಸಲಾಯಿತು.

– ದಿ.: 24/11/25 ರಂದು ಇಂದ್ರಾಳಿ ರೈಲ್ವೆ ನಿಲ್ದಾಣದಲ್ಲಿ 90ನೇ ತಿಂಗಳ ಸ್ವಚ್ಛತಾ ಕಾರ್ಯಕ್ರಮವು ನಡೆಸಲಾಯಿತು. ಈ ಕಾರ್ಯಕ್ರಮ ರೈಲ್ವೆ ಆಫೀಸರ್ ಶ್ರೀ ಎಸ್.ಕೆ. ಭಟ್ ಇವರ ನೇತೃತ್ವ ಹಾಗೂ ಸಂಪೂರ್ಣ ಸಹಕಾರದೊಂದಿಗೆ ನಡೆಯಿತು. ಕಾರ್ಯಕ್ರಮದಲ್ಲಿ ರೈಲ್ವೆ ಸಹಾಯಕ ವಾಣಿಜ್ಯ ವ್ಯವಸ್ಥಾಪಕರು, ಮಂಗಳೂರು. ಭಾಗವಹಿಸಿದ್ದರು ಹಾಗೂ ಸರಕಾರಿ ಪ್ರಥಮ ದರ್ಜೆ ಕಾಲೇಜು ಬಾರ್ಕೂರು ಇಲ್ಲಿಯ ನಿಪುಣ್, ರಾಜ್ಯ ಪುರಸ್ಕಾರ ಪರೀಕ್ಷೆ ಬರೆಯುವ ರೋವರ್–ರೇಂಜರ್ಸ್‌ಗಳು ಭಾಗವಹಿಸಿದ್ದರು. ರೈಲ್ವೆ ಇಲಾಖೆಯ ಆಫೀಸರ್ ಶ್ರೀ ಎಸ್.ಕೆ. ಭಟ್ ಇವರು ತಂಪು ಪಾನೀಯ, ಉಪಹಾರ ವ್ಯವಸ್ಥೆಯನ್ನು ಮಾಡಿದ್ದರು.

– ದಿ.: 26/11/25 ಉಡುಪಿ ಜಿಲ್ಲೆಯ ಕಾಳವಾರ ಷಷ್ಠಿ ಮಹೋತ್ಸವ ಹಾಗೂ ಸೂಡ ಷಷ್ಠಿ ಮಹೋತ್ಸವದಲ್ಲಿ ಉಡುಪಿ ಜಿಲ್ಲೆಯ ಹಲವು ಕಾಲೇಜುಗಳ ರೋವರ್ಸ್–ರೇಂಜರ್ಸ್‌ಗಳು, ಸ್ಕೌಟ್–ಗೈಡ್ಸ್‌ಗಳು ಹಾಗೂ ಶಿಕ್ಷಕರು ಭಾಗವಹಿಸಿದ್ದರು. ಸರಕಾರಿ ಪ್ರಥಮ ದರ್ಜೆ ಕಾಲೇಜು ಕಾಳವಾರ, ಸರಕಾರಿ ಪ್ರಥಮ ದರ್ಜೆ ಕಾಲೇಜು ಕಾರ್ಕಳ (ಎಂ.ಪಿ.ಎಂ.ಸಿ.), ವಿದ್ಯಾವರ್ಧಕ ಆಂಗ್ಲ ಮಾಧ್ಯಮ ಶಾಲೆ ಶಿರ್ವ, ಆನಂದ ತೀರ್ಥ ಆಂಗ್ಲ ಮಾಧ್ಯಮ ಶಾಲೆ ಕುಂಜಾರುಗಿರಿ ಈ ಕಾಲೇಜು / ಶಾಲೆಗಳ ವಿದ್ಯಾರ್ಥಿಗಳು ಶಿಕ್ಷಕರು ತಮ್ಮ ಸೇವೆಯಲ್ಲಿ ತೊಡಗಿಸಿಕೊಂಡರು.



– ದಿನಾಂಕ 29.11.2025 ರಂದು EMPRI ಸಂಸ್ಥೆಯ ಪರಿಸರ ಶಿಕ್ಷಣ ಕಾರ್ಯಕ್ರಮದ ಅಡಿಯಲ್ಲಿ ಆಯೋಜಿಸಲಾದ ಸ್ವಚ್ಛತಾ ಸವಾರಿ (Beach Cleaning and Envoirmental Education Programme) ಶಿಬಿರದಲ್ಲಿ ಉಡುಪಿ ಜಿಲ್ಲೆಯ ಮಲ್ಪೆ ಬೀಚ್‌ನಲ್ಲಿ ಶ್ರೀಮತಿ ರೆನಿಟ ಹಾಗೂ ಶ್ರೀ ದರ್ಶನ್ ಅವರ ಸಲಹೆ ಸೂಚನೆಯಂತೆ ಹಾಗೂ ಪ್ರೋತ್ಸಾಹದಲ್ಲಿ ಸುಮಾರು 150ಕ್ಕಿಂತ ಹೆಚ್ಚು ರೋವರ್–ರೇಂಜರ್ಸ್, ಸ್ಕೌಟ್ಸ್ –ಗೈಡ್ಸ್ ವಿದ್ಯಾರ್ಥಿಗಳು ಪಾಲ್ಗೊಂಡರು..... ಈ ಸಮಯದಲ್ಲಿ ಜಿಲ್ಲಾ ಕಾರ್ಯದರ್ಶಿಯಾದ ಶ್ರೀ ಆನಂದ್ ಅಡಿಗ, ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ಶೇಖರ್ ಕಲ್ಮಾಡಿ ಹಾಗೂ ಶಾಲಾ, ಕಾಲೇಜುಗಳ ದಳನಾಯಕ / ನಾಯಕಿಯರು ಉಪಸ್ಥಿತರಿದರು. ಶ್ರೀಮತಿ ಸುಮನ್ ಶೇಖರ್, ರಾಜ್ಯ ಸಹಾಯಕ ಸಂಘಟನಾ ಆಯುಕ್ತೆ ಕಾರ್ಯಕ್ರಮವನ್ನು ಸಂಘಟಿಸಿದರು.

– ದಿನಾಂಕ 13/12/25 ರಂದು ಕಾರ್ಕಳ ಸ್ಥಳೀಯ ಸಂಸ್ಥೆಯ ರ್ಯಾಲಿ ಶ್ರೀ ರವಿಶಂಕರ್ ಗುರೂಜಿ ಆಂಗ್ಲ ಮಾಧ್ಯಮ ಶಾಲೆ ಕಾರ್ಕಳ ಇಲ್ಲಿ ನಡೆಯಿತು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಇಂದ್ರಾಳಿ ಜಯಕರ್ ಶೆಟ್ಟಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಮುಖ್ಯ ಆಯುಕ್ತರಾದ ಶ್ರೀ ಮೋಹನ ಆಳ್ವ. ಸ್ಥಳೀಯ ಸಂಸ್ಥೆ ಅಧ್ಯಕ್ಷರಾದ ಶ್ರೀಮತಿ ಜ್ಯೋತಿ ಜೆಪ್ಪೆ ಉಪಸ್ಥಿತರಿದ್ದರು.

ವಿಜಯಪುರ

– ದಿನಾಂಕ 17.1.2026 ರಂದು ಮುದ್ದೇಬಿಹಾಳ ಪಟ್ಟಣದಲ್ಲಿ ಚಿನ್ಮಯಿ ಜೆ.ಸಿ. ಆಂಗ್ಲ ಮಾಧ್ಯಮ ಶಾಲೆಯಲ್ಲಿ ಸ್ಕೌಟ್ಸ್–ಗೈಡ್ಸ್ ಮಕ್ಕಳ ದೀಕ್ಷಾ ಸಮಾರಂಭ ಜರುಗಿತು. ಸಮಾರಂಭದ ಅಧ್ಯಕ್ಷತೆಯನ್ನು ಪ್ರಾಥಮಿಕ ವಿಭಾಗದ ಪ್ರಧಾನ ಗುರುಮಾತೆಯಾದ ಸಿಸ್ಟರ್ ಸ್ಟೆಲ್ಲಾ ಡಿಸೋಜ ವಹಿಸಿದ್ದರು. ಇವರು ಮಾತನಾಡುತ್ತಾ "ಸ್ಕೌಟ್ ಮತ್ತು ಗೈಡ್ಸ್ ಚಟುವಟಿಕೆಗಳು ಹಾಗೂ ಕಾರ್ಯಕ್ರಮಗಳು ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ಸಹಕಾರಿಯಾಗಿದೆ ಎಂದು ಹೇಳಿದರು. ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಆನಂದ ಓಗಿ ಹಾಗೂ ಇತರರು ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ 25 ಸ್ಕೌಟ್ಸ್ ಮಕ್ಕಳು, 20 ಗೈಡ್ಸ್ ಮಕ್ಕಳು ಭಾಗವಹಿಸಿದ್ದರು.



– ದಿನಾಂಕ 25.11.2025 ರಂದು ಸರಕಾರಿ ಪ್ರಥಮದರ್ಜೆ ಕಾಲೇಜು ನವಭಾಗ ವಿಜಯಪುರ ಇಲ್ಲಿ ರೋವರ್ ಮತ್ತು ರೇಂಜರ್‌ಗಳಿಗೆ ಒಂದು ದಿನದ ಕಾರ್ಯಾಗಾರ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ. ಎ.ಐ. ಹಂಜಗಿ ಇವರು ವಹಿಸಿದ್ದರು. ರೋವರ್ ಸ್ಕೌಟ್ಸ್‌ಲೀಡರ್ ಶ್ರೀ ಪ್ರಕಾಶ ಹಾವೇರಿಪೇಟ, ರೇಂಜರ್ ಲೀಡರ್ ಡಾ. ಮಮತಾ ಬನ್ನೂರ, ಶ್ರೀ ಎಸ್.ಎಸ್. ಯರನಾಳ, ಶ್ರೀ ಚಂದ್ರಕಾಂತ ಉಪಸ್ಥಿತರಿದ್ದರು. 60ಕ್ಕೂ ಹೆಚ್ಚು ರೋವರ್ ಮತ್ತು ರೇಂಜರ್‌ಗಳು ಭಾಗವಹಿಸಿದ್ದರು. ವೇದಿಕೆ ಕಾರ್ಯಕ್ರಮದ ನಂತರ ಮಕ್ಕಳಿಗೆ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿಯ ಕುರಿತು ಮಾಹಿತಿಯನ್ನು ತಿಳಿಸಲಾಯಿತು. ಇದೇ ಸಂದರ್ಭದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಧ್ವಜ ಚೀಟಿಗಳನ್ನು ಬಿಡುಗಡೆಗೊಳಿಸಲಾಯಿತು.



ದಿನಾಂಕ 26.11.2025 ರಂದು ಬೆಳಿಗ್ಗೆ 10 ಘಂಟೆಗೆ ಸ್ಕೌಟ್ & ಗೈಡ್ಸ್ ಧ್ವಜಾರೋಹಣದ ನಂತರ ರೋವರ್ ಮತ್ತು ರೇಂಜರ್‌ಗಳಿಗೆ ದೀಕ್ಷಾ ಸಮಾರಂಭವನ್ನು ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಡಾ. ಎ.ಐ. ಹಂಜಗಿ ಉಪಸ್ಥಿತರಿದ್ದರು. ದೀಕ್ಷಾ ಸಮಾರಂಭದ ಕುರಿತು ಶ್ರೀ ಎಸ್.ಎಸ್. ಬೊಮ್ಮನಹಳ್ಳಿ ಮಾತನಾಡಿದರು. ಕಾಲೇಜಿನ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಕಾಲೇಜು ವತಿಯಿಂದ ಸಂಪೂರ್ಣ ಸಮವಸ್ತ್ರ ಒದಗಿಸುವ ಕುರಿತು ಪ್ರಾಂಶುಪಾಲರು ಭರವಸೆ ನೀಡಿದರು.

ವಿಜಯನಗರ

– ಕೂಡ್ಲಿಗಿ ತಾಲ್ಲೂಕಿಗೆ ಹೊಸದಾಗಿ ಆಗಮಿಸಿರುವ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಮೈಲೇಶ್ ಬೇವೂರ್ ಅವರನ್ನು ಸ್ವಾಗತಿಸಿ ಸನ್ಮಾನ ಮಾಡಲಾಯಿತು. ಇದಕ್ಕೆ ಸ್ಪಂದಿಸಿದ ಮಾನ್ಯರು ಕೂಡ್ಲಿಗಿ ತಾಲ್ಲೂಕಿನಲ್ಲಿ ಸ್ಕೌಟ್ಸ್–ಗೈಡ್ಸ್ ಚಟುವಟಿಕೆಗಳು ಇನ್ನೂ ಹೆಚ್ಚಿನ ಮಟ್ಟದಲ್ಲಿ ನಡೆಯಲು ಸದಾ ಬೆಂಬಲ ನೀಡುವ ಭರವಸೆಯೊಂದಿಗೆ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ತಾಲ್ಲೂಕಿಗೆ ಹೊಸದಾಗಿ ಆಯ್ಕೆಯಾಗಿ ಬಂದಿರುವ ಮೂರು ಜನ ಇ.ಸಿ.ಓ.ರವರನ್ನು ಕೂಡ ಸ್ವಾಗತಿಸಲಾಯಿತು. ಈ ಸಂದರ್ಭದಲ್ಲಿ ಖಜಾಂಚಿಗಳಾದ ಶ್ರೀ ಹನುಮೇಶ್ ಸಂಘಟನಾ ಕಾರ್ಯದರ್ಶಿಗಳಾದ ಶ್ರೀಮತಿ ಲೋಕಮಾತೆ ಹಾಗೂ ಜಿಲ್ಲಾ ಪ್ರತಿನಿಧಿಗಳಾದ ಶ್ರೀಮತಿ ಸರ್ವಮಂಗಳರವರು ಉಪಸ್ಥಿತರಿದ್ದರು.



– ಕೂಡ್ಲಿಗಿ ಸ್ಥಳೀಯ ಸಂಸ್ಥೆ ವತಿಯಿಂದ ತಾಲ್ಲೂಕು ಮಟ್ಟದ ಒಂದು ದಿನದ ಸ್ಕೌಟರ್ಸ್–ಗೈಡರ್ಸ್ ಸಮಾವೇಶ ಹಮ್ಮಿಕೊಳ್ಳಲಾಗಿತ್ತು. ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸರ್ಕಾರಿ ಸಂಯುಕ್ತ ಪದವಿಪೂರ್ವ ಕಾಲೇಜ್‌ನ ಪ್ರಾಂಶುಪಾಲರಾದ ಶ್ರೀಮತಿ ಕೊತ್ತಲಮ್ಮರವರು ವಹಿಸಿದ್ದರು. ಅತಿಥಿಗಳಾಗಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರ ಸಂಘದ ರಾಜ್ಯ ಪರಿಷತ್ ಸದಸ್ಯರಾದ ಶ್ರೀ ಬಸವರಾಜ್ ಆರ್.ಬಿ. ಆಗಮಿಸಿ ಕಾರ್ಯಕ್ರಮದ ಉದ್ಘಾಟನೆ ಮಾಡಿ ಮಾತನಾಡಿದರು. ತಾಲ್ಲೂಕಿನ ವಿವಿಧ ಶಾಲೆಗಳಿಂದ 42 ದಳ ನಾಯಕ–ನಾಯಕಿಯರು ಭಾಗವಹಿಸಿದ್ದರು.

– ದಿನಾಂಕ : 20–12–2025 ರಂದು ಸ್ಥಳೀಯ ಸಂಸ್ಥೆ ಹೊಸಪೇಟೆ ವತಿಯಿಂದ 30 ಜನ ಶಿಕ್ಷಕ–ಶಿಕ್ಷಕಿಯರಿಗೆ ಪ್ರಾರಂಭಿಕ ಶಿಬಿರ ಆಯೋಜಿಸಲಾಯಿತು. ಈ ಶಿಬಿರದ ಉದ್ಘಾಟನೆಯನ್ನು ಜಿಲ್ಲಾ ಕಾರ್ಯದರ್ಶಿ ಶ್ರೀ ಕೆ. ರಾಜಶೇಖರ ನೆರವೇರಿಸಿದರು. ಉಪಾಧ್ಯಕ್ಷರಾದ ಶ್ರೀಮತಿ ಸದಾಶಿವ ಅನ್ನಪೂರ್ಣ, ಶಾಲಾ ಮುಖ್ಯಗುರುಗಳಾದ ಶ್ರೀ ಹುಸೇನ್ ಮತ್ತಿತರರು ಭಾಗವಹಿಸಿದ್ದರು.

– ದಿನಾಂಕ : 21–12–2025ರಂದು ಹೊಸಪೇಟೆ ಸ್ಥಳೀಯ ಸಂಸ್ಥೆ ವತಿಯಿಂದ ಪ್ರಥಮ ಸೋಪಾನ ಪೂರೈಸಿರುವ ಅರ್ಹ ಸ್ಕೌಟ್–ಗೈಡ್ ಮಕ್ಕಳಿಗೆ ದ್ವಿತೀಯ ಸೋಪಾನ ಪರೀಕ್ಷ ಶಿಬಿರವನ್ನು ಏರ್ಪಡಿಸಲಾಯಿತು. ಶ್ರೀ ಶೇಖರಪ್ಪ ಬಿ., ಹೊಸಪೇಟೆ ಮಾನ್ಯ ಕ್ಷೇತ್ರಶಿಕ್ಷಣಾಧಿಕಾರಿಗಳು ಶಿಬಿರವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಶಾಲಾ ಮುಖ್ಯಗುರುಗಳಾದ ಶ್ರೀ ಹುಸೇನ್ ಹಾಜರಿದ್ದರು. 207 ಸ್ಕೌಟ್ಸ್–ಗೈಡ್ಸ್ ಭಾಗವಹಿಸಿದ್ದರು. ಶಿಬಿರದ ನಾಯಕರಾಗಿ ಸ್ಕೌಟ್ಸ್ ವಿಭಾಗಕ್ಕೆ ಶ್ರೀ ಜಿ.ಎಂ. ರಾಜಶೇಖರ, ಗೈಡ್ಸ್ ವಿಭಾಗಕ್ಕೆ ಶ್ರೀಮತಿ ಎ ರೇಣುಕ, ಕಾರ್ಯನಿರ್ವಹಿಸಿದರು.

– ದಿನಾಂಕ : 3–1–2026 ರಂದು ಜಿಲ್ಲಾ ಸಂಸ್ಥೆ ವಿಜಯನಗರ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ ಹೊಸಪೇಟೆ ಮತ್ತು ವಿವಿಧ ಶಾಲೆಗಳು ಹಾಗೂ ಸಂಘ–ಸಂಸ್ಥೆಗಳ ಸಹಯೋಗದಲ್ಲಿ ರಸ್ತೆ ಸುರಕ್ಷತಾ ಮಾಸಾಚರಣೆ ಅಂಗವಾಗಿ ನಡೆದ "ಸಡಕ್ ಸುರಕ್ಷಾ–ಜೀವನರಕ್ಷಾ" ಜಾಗೃತಿ ಜಾಥಾ ಕಾರ್ಯಕ್ರಮದಲ್ಲಿ ವಿಜಯನಗರ ಕಾಲೇಜಿನ ರೋವರ್ಸ್–ರೇಂಜರ್ಸ್‌ಗಳು ಹಾಗೂ ವಿವಿಧ ಶಾಲೆಯ ಸ್ಕೌಟ್ಸ್–ಗೈಡ್ಸ್ ಮಕ್ಕಳು ಭಾಗವಹಿಸಿದ್ದರು.



– ದಿನಾಂಕ : 12–1–2026 ರಂದು ಕೆ.ಪಿ.ಎಸ್. ಗುಡೆಕೋಟೆ ಸರ್ಕಾರಿ ಶಾಲೆ ಕೂಡ್ಲಿಗಿ ತಾಲ್ಲೂಕಿನಲ್ಲಿ ತಾಲ್ಲೂಕು ಸಂಸ್ಥೆ ವತಿಯಿಂದ ಸ್ವಾಮಿ ವಿವೇಕಾನಂದರ ಜಯಂತಿಯನ್ನು ಕಬ್ಸ್–ಬುಲ್‌ಬುಲ್ಸ್ ಮಕ್ಕಳು ತಮ್ಮ ಗುರುಗಳಿಗೆ ಪುಷ್ಪಗುಚ್ಛ ನೀಡಿ ಸ್ವಾಗತಿಸಿ ಸಂಭ್ರಮದಿಂದ ಆಚರಿಸಿದರು. ಶಾಲೆಯ ಮುಖ್ಯ ಗುರುಗಳಾದ ಶ್ರೀಯುತ ವೆಂಕಟೇಶ್‌ರವರು ತಮ್ಮ ಸೇವಾ ಮನೋಭಾವದಿಂದ 35 ಕಬ್ಸ್–ಬುಲ್‌ಬುಲ್ಸ್ ಮಕ್ಕಳಿಗೆ ಸಮವಸ್ತ್ರ ನೀಡಿದ್ದು ನಿಜಕ್ಕೂ ಶ್ಲಾಘನೀಯ. ಈ ಸಂದರ್ಭದಲ್ಲಿ ಪ್ರೌಢಶಾಲೆ ಮುಖ್ಯ ಗುರುಗಳು ಶ್ರೀಮತಿ ರುಕ್ಮಿಣಿಬಾಯಿ ಶಾಲಾ ಸಿಬ್ಬಂದಿ ವರ್ಗದವರು ಹಾಜರಿದ್ದರು.



ಶ್ರದ್ಧಾಂಜಲಿ



ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯಲ್ಲಿ ರಾಜ್ಯ ಸಂಘಟನಾ ಆಯುಕ್ತರಾಗಿ ಮತ್ತು ರಾಷ್ಟ್ರೀಯ ಸಂಸ್ಥೆ ನವದೆಹಲಿಯಲ್ಲಿ ಜಂಟಿ ನಿರ್ದೇಶಕಿ ಮತ್ತು ನಿರ್ದೇಶಕರಾಗಿ ಸೇವೆ ಸಲ್ಲಿಸಿದ **ಶ್ರೀಮತಿ ಪಿ.ಸರೋಜರವರು** ದಿನಾಂಕ:14 ಜನವರಿ 2026 ಬೆಂಗಳೂರಿನಲ್ಲಿ ನಿಧನರಾದರು. ಮೂರು ದಶಕಗಳಗಳಿಗೂ ಹೆಚ್ಚು ಕಾಲ ಸಹಾಯಕ ರಾಜ್ಯ ಸಂಘಟನಾ ಆಯುಕ್ತೆಯಾಗಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸೇವೆ ಸಲ್ಲಿಸಿ, ನಂತರ ರಾಜ್ಯ ಸಂಘಟನಾ ಆಯುಕ್ತೆಯಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿರುತ್ತಾರೆ. ನಿವೃತ್ತಿ ನಂತರ ಅವರು ರಾಜ್ಯ ಸಂಸ್ಥೆಯಲ್ಲಿ ಕೇಂದ್ರ ಸ್ಥಾನಿಕ ಆಯುಕ್ತರಾಗಿ ಕರ್ತವ್ಯ ನಿರ್ವಹಿಸಿದ್ದರು. ನವದೆಹಲಿಯಿಂದ ಬಂದ ನಂತರ ಬೆಂಗಳೂರು ಉತ್ತರ ಜಿಲ್ಲೆಯ ಮುಖ್ಯ ಆಯುಕ್ತರಾಗಿ ಸೇವೆ ಸಲ್ಲಿಸಿದರು. ಐದು ದಶಕಗಳಿಗೂ ಹೆಚ್ಚು ಕಾಲ ಶ್ರೀಮತಿ ಸರೋಜರವರು ಸ್ಕೌಟ್ಸ್–ಗೈಡ್ಸ್ ಚಳುವಳಿಯ ಅಭಿವೃದ್ಧಿ ಮತ್ತು ಬೆಳವಣಿಗೆಗೆ ಅಮೂಲ್ಯವಾದ ಕೊಡುಗೆ ನೀಡಿರುತ್ತಾರೆ. ಇವರ ಸುಧೀರ್ಘ ಅತ್ಯುತ್ತಮ ಸೇವೆಯನ್ನು ಪರಿಗಣಿಸಿ ರಾಷ್ಟ್ರೀಯ ಸಂಸ್ಥೆಯವರು ಇತ್ತೀಚೆಗೆ ಇವರಿಗೆ ರಾಷ್ಟ್ರೀಯ ಅತ್ಯುನ್ನತ ಪ್ರಶಸ್ತಿಯಾದ "ಬೆಳ್ಳಿ ಆನೆ" ಪದಕವನ್ನು ನೀಡಿ ಗೌರವಿಸಿದ್ದಾರೆ. ಅಲ್ಲದೇ **World Association of Girl Guides and Girl Scouts (WAGGGS)** ನವರು ಇವರ ಸೇವೆಯನ್ನು ಪರಿಗಣಿಸಿ "ಏಷ್ಯಾ ಪೆಸಿಫಿಕ್ ಲೀಡರ್‌ಶಿಫ್ ಪ್ರಶಸ್ತಿಯನ್ನು ನೀಡಿ ಗೌರವಿಸಿರುತ್ತಾರೆ.

ಇವರಿಗೆ 81 ವರ್ಷ ವಯಸ್ಸಾಗಿತ್ತು. ಇವರು ಮೂರು ಜನ ಸಹೋದರರು ಹಾಗೂ ಇಬ್ಬರು ಸಹೋದರಿಯರು ಮತ್ತು ಅಪಾರ ಬಂಧು ಬಳಗವನ್ನು ಆಗಲಿರುತ್ತಾರೆ. ಇವರ ಆತ್ಮಕ್ಕೆ ಚಿರಶಾಂತಿ ಸಿಗಲಿ ಹಾಗೂ ಇವರ ಕುಟುಂಬದವರಿಗೆ ಆಗಿರುವ ದುಃಖವನ್ನು ಭರಿಸುವ ಶಕ್ತಿಯನ್ನು ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.



1918ರಲ್ಲಿ ಸ್ಥಾಪನೆಗೊಂಡ ಬೆಂಗಳೂರು ನಗರದ ಪ್ರತಿಷ್ಠಿತ ಮಲ್ಲೇಶ್ವರಂ ಬಡಾವಣೆಯ ಶ್ರೀ ಚಾಮುಂಡಿ ಸ್ಕೌಟ್ ಮುಕ್ತದಳದ ನಾಯಕರಾಗಿ 6 ದಶಕಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿದ್ದ **ಶ್ರೀ ಕೆ.ನರಸಿಂಹಮೂರ್ತಿ** ಅವರು ದಿನಾಂಕ 20 ಜನವರಿ 2026 ರಂದು ನಿಧನರಾದರು ಅವರಿಗೆ 88 ವರ್ಷವಾಗಿತ್ತು ಶ್ರೀಯುತರು ತಮ್ಮ ವೃತ್ತಿ ಜೀವನದಲ್ಲಿ ಹಟ್ಟಿ ಗೋಲ್ಡ್ ಮೈನ್ಸ್ ಲಿ. ಸಂಸ್ಥೆಯ ಬೆಂಗಳೂರಿನ ಕಚೇರಿಯಲ್ಲಿ

ಅಧಿಕಾರಿಯಾಗಿ ಸೇವೆಸಲ್ಲಿಸಿದ್ದರು ಶ್ರೀ ನರಸಿಂಹಮೂರ್ತಿ ಅವರು ರಾಜ್ಯ ಸಂಸ್ಥೆಯಲ್ಲಿ ಮುಕ್ತದಳಗಳ ಸ್ಥಾನಿಕ ಆಯುಕ್ತರಾಗಿ ಕಾರ್ಯನಿರ್ವಹಿಸಿದರು. ಈಗ ಅವರು ರಾಜ್ಯ ಸಹಾಯಕ ಆಯುಕ್ತರಾಗಿ ಮತ್ತು ಮಲ್ಲೇಶ್ವರಂ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾಗಿ ಹಾಗೂ ಬೆಂಗಳೂರು ಉತ್ತರ ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರಾಗಿ ಗಣನೀಯ ಸೇವೆ ಸಲ್ಲಿಸಿರುತ್ತಾರೆ ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದ ಹಲವಾರು ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಇತರ ಮುಖ್ಯ ದಳ ನಾಯಕರುಗಳಿಗೆ ಮಾರ್ಗದರ್ಶನ ಮಾಡುತ್ತಿದ್ದರು. ಸ್ವತಃ ಅವರು ಎ.ಎಲ್.ಟಿ(ಸ್ಕೌಟ್) ತರಬೇತಿ ಪಡೆದಿದ್ದರು ಮತ್ತು ರಾಷ್ಟ್ರೀಯ ಸಂಸ್ಥೆಯಿಂದ "ಬೆಳ್ಳಿ ನಕ್ಷತ್ರ" ಪದಕ ಪುರಸ್ಕೃತರಾಗಿದ್ದರು. ಶ್ರೀ ಚಾಮುಂಡಿ ಸ್ಕೌಟ್ ಮುಕ್ತ ದಳದ ಮನವಿಯನ್ನು ಪರಿಗಣಿಸಿ ಬಿ.ಬಿ.ಎಂ.ಪಿ. ಅವರು ಈ ರಸ್ತೆಗೆ "ಶ್ರೀ ಚಾಮುಂಡಿ ಸ್ಕೌಟ್ಸ್ ರಸ್ತೆ" ಎಂದು ನಾಮಕರಣ ಮಾಡಲಾಗಿದೆ.

ಅವರ ಮಗ ಶ್ರೀ ಕೆ.ಎನ್. ಹೇಮಂತ್ ಕುಮಾರ್ ರವರು ಬೆಂಗಳೂರು ಉತ್ತರ ಜಿಲ್ಲಾ ಸ್ಕೌಟ್ ಆಯುಕ್ತರಾಗಿ ಸೇವೆ ಸಲ್ಲಿಸುತ್ತಿದ್ದಾರೆ ಮತ್ತು ಮಗಳು ಶ್ರೀಮತಿ ಆಶಾ ಅಜೆಯ್ ಅಮೆರಿಕದಲ್ಲಿದ್ದಾರೆ. ಶ್ರೀಯುತರು ಬಂಧು ಬಳಗ ಹಾಗೂ ಚಾಮುಂಡಿ ಮುಕ್ತ ದಳದ ಅಪಾರ ಸದಸ್ಯರನ್ನು ಅಗಲಿದ್ದಾರೆ.

ಶ್ರೀಯುತರು ತಮ್ಮ ಜೀವನವನ್ನು ಸ್ಕೌಟಿಂಗ್–ಗೈಡಿಂಗ್ ಚಳವಳಿಗೆ ಸಮರ್ಪಿಸಿಕೊಂಡು, ಅನೇಕ ಮಕ್ಕಳ ಹಾಗೂ ಯುವಕರ ಜೀವನಕ್ಕೆ ದಾರಿ ತೋರಿಸಿದ ಮಾರ್ಗದರ್ಶಕರಾಗಿದ್ದರು. ಅವರ ನಿಸ್ವಾರ್ಥ ಸೇವೆ, ಶಿಸ್ತುಬದ್ಧ ನಾಯಕತ್ವ, ಮೃದು ಸ್ವಭಾವ ಮತ್ತು ಮೌಲ್ಯಾಧಾರಿತ ಕಾರ್ಯಚಟುವಟಿಕೆಗಳು ಸ್ಕೌಟಿಂಗ್ ಕ್ಷೇತ್ರದಲ್ಲಿ ಎಂದಿಗೂ ಮರೆಯಲಾಗದ ಅಧ್ಯಾಯವಾಗಿವೆ. ಸ್ಕೌಟಿಂಗ್–ಗೈಡಿಂಗ್ ಬೆಳವಣಿಗೆಗೆ ಅವರು ನೀಡಿರುವ ಅಮೂಲ್ಯ ಕೊಡುಗೆ ಸದಾಕಾಲ ಪ್ರೇರಣೆಯ ದೀಪವಾಗಿ ಬೆಳಗುತ್ತದೆ.

ಶ್ರದ್ಧಾಂಜಲಿ



ಶ್ರೀ ಚಿದ್ರೆ ಶಂಕರಯ್ಯ ಸ್ವಾಮಿ, ನಿವೃತ್ತ ನಿರ್ದೇಶಕರು (ಪ್ರೌಢ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಇವರು ದಿನಾಂಕ:16.01.2026. ರಂದು ದೈವಾಧೀನರಾದರು, ದಿನಾಂಕ:09.07.1973ರಲ್ಲಿ ಪ್ರೊಬೇಷನರಿ ಶಿಕ್ಷಣದ ಅಧಿಕಾರಿಗಳಾಗಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಸೇವೆಗೆ ಸೇರಿದ ಇವರು, ಈ ಇಲಾಖೆಯ ಎಲ್ಲಾ ಹಂತದ ಹುದ್ದೆಗಳಲ್ಲಿ ಸಮರ್ಥವಾಗಿ, ಸಮರ್ಪಕವಾಗಿ, ಸಂತೃಪ್ತಿಯಿಂದ ಸೇವೆ ಸಲ್ಲಿಸಿ, ದಕ್ಷ ಮತ್ತು ಪ್ರಾಮಾಣಿಕ ಅಧಿಕಾರಿಗಳಾಗಿ ಎಲ್ಲರ ಪ್ರೀತಿ–ವಿಶ್ವಾಸಗಳಿಗೆ ಪಾತ್ರರಾಗಿ, ಜುಲೈ 2010ರಲ್ಲಿ ನಿರ್ದೇಶಕರು (ಪ್ರೌಢ ಶಿಕ್ಷಣ) ಹುದ್ದೆಯಿಂದ ನಿವೃತ್ತಿ ಹೊಂದಿದವರು. ನಿವೃತ್ತಿ ನಂತರವೂ ಕರ್ನಾಟಕ ರಾಜ್ಯ ನಿವೃತ್ತ ಶಿಕ್ಷಣಾಧಿಕಾರಿಗಳ ವೇದಿಕೆ (ರಿ.) ಬೆಂಗಳೂರು (F-KARE)ನ ಕಾರ್ಯಾಧ್ಯಕ್ಷರಾಗಿ ಸೇವೆಸಲ್ಲಿಸುತ್ತಾ, ಇಲಾಖಾ ಪ್ರಗತಿಪರ ಕಾರ್ಯಚಟುವಟಿಕೆಗಳಿಗೆ ಪ್ರೇರಕರಾಗಿ, ಸಲಹೆ, ಸಹಕಾರ ನೀಡುತ್ತಿದ್ದವರು. ಇವರು ಬೀದರ್ ಜಿಲ್ಲಾ ಉಪನಿರ್ದೇಶಕರಾಗಿದ್ದಾಗ ಜಿಲ್ಲಾ ಸ್ಕೌಟ್ ಆಯುಕ್ತರಾಗಿ ಸೇವೆ ಸಲ್ಲಿಸಿದ್ದಾರೆ ಅಲ್ಲಿ ಜನವರಿ 1995ರಲ್ಲಿ ಏರ್ಪಟ್ಟ 22ನೇ ಕರ್ನಾಟಕ ರಾಜ್ಯ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಾಂಬೋರೇಟ್ ಸಂದರ್ಭ "ಬೇಸಿಗೆ ಬಿಸಿಲು ನೀರಿಗಾಗಿ ತೊಳಲಾಟ ಇದ್ದ ಕಾಲ ಆಗಿದ್ದು, ಆದರೆ, ಆ ಕಾರ್ಯಕ್ರಮ ಮಾಡಲೇಬೇಕೆಂಬ ಬೀದರಿಗರ ಛಲದಿಂದ ಪ್ರೇರಿತರಾಗಿ ತಾವು ಉತ್ಕೃಷ್ಟ ಸಾಧನೆಯ ಪ್ರತೀಕವಾಗಿ ಅನೇಕ ತೊಂದರೆಗಳ ಮಧ್ಯದಲ್ಲಿಯೂ ಭಗೀರಥ ಪ್ರಯತ್ನವಾಗಿ ಬತ್ತಿದ ಬಾವಿಗೆ 22 ಕಿ.ಮೀ. ದೂರದ ಕಾರಂಜಾ ನೀರು ಸುರಿದು, ಸುಮಾರು 600 ಮಕ್ಕಳ ಜಾಂಬೋರೇಟನ್ನು ಅದ್ದೂರಿಯಿಂದ, ಹಬ್ಬದ ವಾತಾವರಣದಲ್ಲಿ ನಿರ್ವಹಣೆ ಆಗಿರುವುದನ್ನು" ಮತ್ತು ಆಗ ಜಾಂಬೋರಿಯಲ್ಲಿ ಭಾಗವಹಿಸಿದ್ದ ಆಗಿನ ರಾಜ್ಯ ಮುಖ್ಯ ಆಯುಕ್ತರಾಗಿದ್ದ ಮಾನ್ಯ ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪರವರು ಮತ್ತು ಅವರ ಸಹೋದ್ಯೋಗಿಗಳು ಹರುಷದ ಹೊಳೆಯನ್ನು ಹರಿಸಿರುವ ಸಂಗತಿಯನ್ನು ಇವರು ತಮ್ಮ "ಸಾಧಕ" ಅಭಿನಂದನಾ ಗ್ರಂಥದ "ನೆನಪಿನ ಬುತ್ತಿ"ಯಲ್ಲಿಯ ಲೇಖನದಲ್ಲಿ ಉಲ್ಲೇಖಿಸಿ ಹರ್ಷಿಸಿರುವುದು ಸ್ಮರಣೀಯ, ಆದರ್ಶಪ್ರಾಯ. ಶ್ರೀಯುತರು ಕಲಬುರಗಿ ಡಿ.ಡಿ.ಪಿ.ಐ. ಆಗಿದ್ದ ಸಂದರ್ಭದಲ್ಲಿ ಜಿಲ್ಲಾ ಸ್ಕೌಟ್ ಆಯುಕ್ತರಾಗಿ ಸೇವೆ ಮಾಡಿದ್ದಾರೆ. ಇವರು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯ ಸಕ್ರಿಯ ಅನುಷ್ಠಾನದಲ್ಲಿ ಸದಾ ಪ್ರೇರಕರಾಗಿದ್ದರಲ್ಲದೆ, ಬೆಳಗಾವಿಯಲ್ಲಿ ಏರ್ಪಟ್ಟ 29ನೇ ಕರ್ನಾಟಕ ರಾಜ್ಯ ಸ್ಕೌಟ್ಸ್ ಮತ್ತು ಗೈಡ್ಸ್ ಜಾಂಬೋರೇಟ್‌ನಲ್ಲಿ ದಿನಾಂಕ:29.12.2025 ಮತ್ತು 30.12.2025 ಈ ಎರಡು ದಿವಸಗಳಂದು ತುಂಬಾ ಸಂತೋಷ, ಸಂತೃಪ್ತಿಯಿಂದ ಭಾಗವಹಿಸಿ ತುಂಬಾ ಹರ್ಷಿತರಾಗಿ ಹಿಂದಿರುಗಿ, ದಿನಾಂಕ:16.01.2026ರಂದು ರಾತ್ರಿ ತೀವ್ರ ಹೃದಯಾಘಾತದಿಂದ ದೈವಾಧೀನರಾದದ್ದು ಸರ್ವರಿಗೂ ಭರಿಸಲಾಗದ ನಷ್ಟ ಆಗಿರುವುದು. ಇವರ ಪುತ್ರ ಶ್ರೀ ಅಖಿಲೇಶ್ ರವರು ಬೆಂಗಳೂರಿನಲ್ಲಿ ಇಂಜಿನಿಯರ ಆಗಿದ್ದು, ಇವರ ಪುತ್ರಿ ವೈದೈಯಾಗಿ ಅಮೇರಿಕದಲ್ಲಿ ಕುಟುಂಬ ಸಮೇತ ನೆಲೆಸಿರುತ್ತಾರೆ. ಇವರ ಆತ್ಮಕ್ಕೆ ಸದ್ಗತಿ ದೊರಕಲೆಂದು ಮತ್ತು ಇವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಇವರ ಕುಟುಂಬ ವರ್ಗದವರಿಗೆ ಬಂಧು–ಬಾಂಧವರಿಗೆ, ಆತ್ಮೀಯರೆಲ್ಲರಿಗೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.



ಶ್ರೀ ದಿ. ಮುದ್ಗಲ್ ಸಾಬ್, ಹೆಚ್.ಡಬ್ಲ್ಯೂ.ಬಿ.(ಎಸ್) ಇವರು ದಿನಾಂಕ 14.1.2026 ರಂದು ಬೆಂಗಳೂರಿನಲ್ಲಿ ನಿಧನರಾದರು. ಇವರಿಗೆ 69 ವರ್ಷ ವಯಸ್ಸಾಗಿತ್ತು. ಇವರು ರಾಯಚೂರು ಜಿಲ್ಲಾ ಸಂಸ್ಥೆಯ ಕ್ವಾಟರ್ ಮಾಸ್ಟರ್ ಆಗಿ ಹಲವಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದರು. 1985ರಲ್ಲಿ ಮೂಲ ತರಬೇತಿ ಪಡೆದ ಇವರು 2006ರಲ್ಲಿ ಹೆಚ್.ಡಬ್ಲ್ಯೂ.ಬಿ. ತರಬೇತಿ ಪಡೆದರು. ಇವರಿಗೆ ಮೆಡಲ್ ಆಫ್ ಮೆರಿಟ್, ಉತ್ತಮ ಕ್ವಾಟರ್ ಮಾಸ್ಟರ್ ಮುಂತಾದ ಪ್ರಶಸ್ತಿಗಳನ್ನು ನೀಡಲಾಗಿದೆ. ಇವರು ಧರ್ಮಪತ್ನಿ ಮತ್ತು ಒಬ್ಬ ಮಗ ಮತ್ತು ಮೂರು ಜನ ಹೆಣ್ಣು ಮಕ್ಕಳನ್ನು ಹಾಗೂ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ.



2013 ರಿಂದ 2018ರ ವರಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಯಚೂರು ಜಿಲ್ಲಾ ಸಂಸ್ಥೆಯ ಖಜಾಂಚಿ ಹಾಗೂ ಕಾರ್ಯದರ್ಶಿಗಳಾಗಿ ಸೇವೆಯನ್ನು ಸಲ್ಲಿಸಿದ **ಶ್ರೀ ಹನುಮಂತಪ್ಪ ರಾಯಚೂರು** ಇವರು ದಿನಾಂಕ : 05–12–2025 ರಂದು ದೈವಾಧಿನರಾಗಿದ್ದಾರೆ. ಇವರು ಜಿಲ್ಲಾ ರಿಜಿಸ್ಟಾರ್ ಆಗಿ ನಿವೃತ್ತಿ ವಂದಿದ್ದರು. ಇವರಿಗೆ 79ವರ್ಷ ವಯಸ್ಸಾಗಿತ್ತು. ಇವರು ಮೂರು ಜನ ಹೆಣ್ಣು ಮಕ್ಕಳು ಹಾಗೂ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ.

ಇವರುಗಳ ಆತ್ಮಕ್ಕೆ ಸದ್ಗತಿ ದೊರಕಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರುಗಳ ಕುಟುಂಬದವರಿಗೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಶಬ್ದಮಾಲಿನ್ಯ ನಿಯಂತ್ರಣಕ್ಕೆ ಎಲ್ಲರೂ ಕೈಜೋಡಿಸೋಣ



ಶಬ್ದಮಿತಿಯ ಪ್ರಮಾಣ (ಡೆಸಿಬೆಲ್‌ಗಳಲ್ಲಿ)

ಪ್ರದೇಶ	ಹಗಲು (ಗರಿಷ್ಠ)	ರಾತ್ರಿ (ಗರಿಷ್ಠ)
ಕೈಗಾರಿಕಾ ಪ್ರದೇಶ	75	70
ವಾಣಿಜ್ಯ ಪ್ರದೇಶ	65	55
ವಸತಿ ಪ್ರದೇಶ	55	45
ಶಬ್ದ ಸೂಕ್ಷ್ಮ ಪ್ರದೇಶ	50	40 (ಶಾಲೆ, ಕೋರ್ಟ್ ,ಆಸ್ಪತ್ರೆ ಇತ್ಯಾದಿ)

ಶಬ್ದಮಾಲಿನ್ಯ (ನಿಯಂತ್ರಣ) ಕಾಯಿದೆಯ ನಿಯಮಗಳು

- ಆಸ್ಪತ್ರೆ, ಶೈಕ್ಷಣಿಕ ಸಂಸ್ಥೆ, ಕೋರ್ಟ್ ಪ್ರದೇಶಗಳ ಸುತ್ತಮುತ್ತಲಿನ 100 ಮೀಟರ್ ವ್ಯಾಪ್ತಿ ಶಬ್ದರಹಿತವಾಗಿರಬೇಕು.
- ಸಾರ್ವಜನಿಕ ಸ್ಥಳದಲ್ಲಿ ಧ್ವನಿವರ್ಧಕಗಳನ್ನು ಅಳವಡಿಸಿಕೊಳ್ಳಬೇಕಾದರೆ ಸಂಬಂಧಿಸಿದ ಪೊಲೀಸ್ ಅಧಿಕಾರಿಗಳಿಂದ ಲಿಖಿತರೂಪದಲ್ಲಿ ಅನುಮತಿ ಪಡೆದುಕೊಳ್ಳಬೇಕು.
- ರಾತ್ರಿ 10 ಗಂಟೆಯಿಂದ ಬೆಳಗ್ಗೆ 6 ಗಂಟೆ ಸಮಯದಲ್ಲಿ ಸಾರ್ವಜನಿಕ ಪ್ರದೇಶದಲ್ಲಿ ಧ್ವನಿಯಂತ್ರಕಗಳನ್ನು ಬಳಸಬಾರದು.

ಹಾರ್ನ್ ಮಾಡಲೇಬೇಡಿ

ಪಾದಚಾರಿಗಳ ಹಿಂದೆ ದಿಢೀರನೆ ಹಾರ್ನ್ ಮಾಡಿ ಅವರನ್ನು ಗಾಬರಿಪಡಿಸಬೇಡಿ. ಕೆಲವೇ ಗಳಿಗೆಗಳಲ್ಲಿ ಖಂಡಿತ ಅವರು ಸರಿಯುತ್ತಾರೆ. ಒಂದರ ಹಿಂದೆ ಒಂದರಂತೆ ಚಲಿಸುವಾಗಲೂ ಹಾರ್ನ್ ಮಾಡಬೇಡಿ. ಡಿಮ್-ಡಿಪ್ ದೀಪ ಬಳಸಿ.

ತಾಳ್ಮೆ ಇರಲಿ

ಟ್ರಾಫಿಕ್ ಸಿಗ್ನಲ್‌ಗಳಲ್ಲಿ ವಾಹನಗಳು ಚಲಿಸಲು ಹಸಿರು ದೀಪದ ಸೂಚನೆ ಬಂದಾಗ ಹಿಂದಿರುವ ವಾಹನ ಸವಾರರು ಮುಂದಿರುವ ವಾಹನ ಸವಾರರರಿಗೆ ಅನವಶ್ಯಕವಾಗಿ ಹಾರ್ನ್ ಮಾಡುವ ಬದಲು ಕೆಲ ಸೆಕೆಂಡುಗಳ ಕಾಲ ತಾಳ್ಮೆಯಿಂದ ವರ್ತಿಸಬೇಕು.

ಕಡಿಮೆ ಶಬ್ದದ ಹಾರ್ನ್, ಯಂತ್ರ ಬಳಸಿ

ವಾಹನ ಸವಾರರು ಹೆಚ್ಚಿನ ಶಬ್ದ ಮಾಡುವ ಅಥವಾ ತಮಗಿಷ್ಟ ಬಂದ ಹಾರ್ನ್‌ಗಳನ್ನು ಅಳವಡಿಸಿಕೊಳ್ಳಬಾರದು. ಬದಲಿಗೆ ಕಡಿಮೆ ಸದ್ದು ಮಾಡುವ ಹಾರ್ನ್ (ಗರಿಷ್ಠ 65 ಡೆಸಿಬೆಲ್) ಹಾಗೂ ಸರ್ಕಾರ ನಿಗದಿಪಡಿಸಿರುವ ಹಾರ್ನ್‌ಗಳನ್ನು ಅಳವಡಿಸಿಕೊಳ್ಳಬೇಕು.

ಜನ ಜಾಗೃತಿಯಲ್ಲಿ ಪಾಲ್ಗೊಳ್ಳಿ

ಸ್ವಯಂಸೇವಾ ಸಂಘಸಂಸ್ಥೆಗಳು, ವಿದ್ಯಾರ್ಥಿಗಳು ಸರ್ಕಾರ ಹಾಗೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಮ್ಮಿಕೊಳ್ಳುವ ಶಬ್ದಮಾಲಿನ್ಯ ನಿಯಂತ್ರಣ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬಹುದು.

ಸ್ವಯಂ ನಿಯಂತ್ರಣ ಇರಲಿ

ಕೈಗಾರಿಕೆಗಳ ಮಾಲೀಕರು ಸಹ ಕಡಿಮೆ ಶಬ್ದ ಮಾಡುವ ಯಂತ್ರಗಳನ್ನು ಅಳವಡಿಸಿಕೊಳ್ಳಬೇಕು.

ಧ್ವನಿವರ್ಧಕ ಶಬ್ದದ ಮಟ್ಟ ಕಡಿಮೆ ಮಾಡಿ

ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಧ್ವನಿವರ್ಧಕದ ಶಬ್ದ ಮಿತಿಯನ್ನು ಪಾಲಿಸಿರಿ. ಅತಿಶಬ್ದ ಖಂಡಿತ ಅನಾರೋಗ್ಯ ಉಂಟು ಮಾಡುತ್ತದೆ.

ಮಿತಿ ಮೀರಿದರೆ ದಂಡ ಸಂಗ್ರಹ

ಟ್ರಾಫಿಕ್ ಸಿಗ್ನಲ್‌ಗಳು ಹಾಗೂ ಸಂಚಾರ ದಟ್ಟಣೆ ಹೆಚ್ಚಿರುವ ಪ್ರದೇಶಗಳಲ್ಲಿ ಅನಾವಶ್ಯಕವಾಗಿ ಹಾರ್ನ್ ಮಾಡುವವರನ್ನು ಮೋಟಾರು ವಾಹನಗಳ ಕಾಯಿದೆ ಅನ್ವಯ ಆರ್‌ಟಿಒ ಅಧಿಕಾರಿಗಳು ಪತ್ತೆ ಹಚ್ಚಿ ದಂಡ ವಿಧಿಸುವ ಅಧಿಕಾರ ಪಡೆದಿರುತ್ತಾರೆ.

ಶಬ್ದಮಯ ದಿನಚರಿ ನಮಗೆ ಬೇಡ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ಪರಿಸರ ಭವನ, ಚರ್ಚ್ ಸ್ಟ್ರೀಟ್ ಬೆಂಗಳೂರು 560001

ವೆಬ್‌ಸೈಟ್: www.kspcb.gov.in


ಫೇಸ್‌ಬುಕ್ ಪುಟ: kspcbofficial

RNI No: 13348/1959. Title Code: KARBIL00285. Posted at Periodical Rate Rs. 2/-
Date of Publishing 28th of Every Month
Posted at: Bengaluru PSO, Mysore Road, Bengaluru-26 on 28th & 30th of every month (No. of Pages: 48)

COURSES Offered

SHAHEEN
GROUP OF INSTITUTIONS

- **Class XI-XII (Science)**
  Integrated with NEET/JEE
- **Class XI-XII (Arts)**
  Integrated with UPSC/CLAT
- **Class XI-XII (Commerce)**
  Integrated with CA Foundation
- **NEET LONG TERM**
  Repeaters Batch
- **Shaheen Value School**
  KG to Class X
- **BA/B.Sc/B.Com/BCA**
  Integrated with UPSC
- **Shaheen Australian**
  International School
- **MBBS**
  Tajikistan
- **Bachelor of Physiotherapy**
  (BPT)



Toll Free
1800 121 6235

www.shaheengroup.org

If not delivered, please return to :
THE EDITOR, Karnataka Scout & Guide
State Headquarters, Shanthi Gruha
#39, Palace Road, Bengaluru - 560 001
Ph.: 080-22260017, 22267470
e-mail.: info@bsgkarnataka.org
www.bsgkarnataka.org

Published, Editor & Owened by: K. Gangappa Gowda belongs to: Bharat Scouts and Guides, Karnataka, No.39, Shanthi Gruha Palace Rd, Bengaluru 560 001. Published at: Bharat Scouts and Guides, Karnataka, No.39, Shanthi Gruha Palace Road, Bengaluru-560 001
Printed by: L. Lingappa at Sathyasri Printers Pvt. Ltd., 16/1, 3rd Cross, 2nd Main, Kasturiba Nagar, Mysore Road, Bengaluru-26